## ಅಧ್ಯಾಯ 3

# ಒಂದು ವಿಶ್ವವ್ಯಾಪಿ ಸಂದಿಗ್ಧತೆ

ಪೌಲನು ರಕ್ಷಣೆಯ ಅಗತ್ಯತೆಯ ಕುರಿತ ಪರಿಶೀಲನೆ ಮಾಡುತ್ತಾ ಯೆಹೂದ್ಯರನ್ನು ಅನ್ಯಜನರನ್ನೂ ಅದರಲ್ಲಿ ಒಳಪಡಿಸಿದನು. ಅನ್ಯಜನರು ಕಳೆದು ಹೋಗಿದ್ದರು ಎಂಬದನ್ನು ಸ್ಥಾಪಿಸುವ ಆತನ ಚರ್ಚೆಯು ಒಂದು ಅಧ್ಯಾಯದಲ್ಲಿ ಅರ್ಧದಷ್ಟು ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ: ಹದಿನೈದು ವಚನಗಳು (1:18-32). ಆತನು ಯೆಹೂದ್ಯರು ದೋಷಿಗಳೆಂದು ನಿರೂಪಿಸುವದಕ್ಕೆ ಅದಕ್ಕಿಂತ ಎರಡರಷ್ಟು ಉದ್ದವಾದ ಭಾಗವನ್ನು-ಒಂದು ಹಾಗೂ ಒಂದರಲ್ಲಿ ಮೂರು ಭಾಗದ ಅಧ್ಯಾಯಗಳನ್ನು: ಮೂವತ್ತೇಳು ವಚನಗಳನ್ನು ತೆಗೆದುಕೊಳ್ಳುತ್ತಾನೆ (2:1-3:8).[1] ಏಕೆ ಈ ವ್ಯತ್ಯಾಸ? ಬಹುಶಃ ಯೆಹೂದ್ಯರು ತಮ್ಮನ್ನು ಪಾಪಿಗಳೆಂದು ಒಪ್ಪಿಕೊಳ್ಳುವದು ಎರಡಷ್ಟು ಕಷ್ಟಕರವಾಗಿರುತ್ತಿತ್ತೇನೋ.

### ಆಕ್ಷೇಪಣೆಗಳಿಗೆ ಉತ್ತರಿಸುವದು (3:1-8)

ಯೆಹೂದ್ಯರು ಮಾಡಬಹುದಾದ ಆಕ್ಷೇಪಣೆಗಳ ಕುರಿತ ಈ ಇಡೀ ಅಧ್ಯಾಯವು ಒಂದು ಸುಲಭವಾದ ವಾಕ್ಯಭಾಗವಾಗಿದೆ. Douglas J. Moo 3 ರಿಂದ 8 ವಚನಗಳನ್ನು "ಇಡೀ ಪತ್ರಿಕೆಯಲ್ಲಿಯೇ ವ್ಯಾಖ್ಯಾನಿಸುವದಕ್ಕೆ ಅತ್ಯಂಥ ಕಠಿಣ ಭಾಗವಾಗಿದೆ" ಎಂದು ಕರೆಯುತ್ತಾನೆ.[2] ಪೌಲನು ಇಲ್ಲಿ ಒಬ್ಬ ಕಾಲ್ಪನಿಕ ಯೆಹೂದ್ಯ ಪ್ರತಿವಾದಿಯ ಆಕ್ಷೇಪಣೆಗಳಿಗೆ ಉತ್ತರಿಸುವ ರೀತಿಯಲ್ಲಿ ಒಂದು ಸಂಭಾಷಣೆಯ ರೂಪವನ್ನು ಉಪಯೋಗಿಸುತ್ತಾನೆಂದು ಬಹುಪಾಲು ಲೇಖಕರು ಸಹಮತ ವ್ಯಕ್ತಪಡಿ ಸುತ್ತಾರೆ. ಹೇಗೂ, ಯಾರು "ಮಾತಾಡುತ್ತಿದ್ದಾರೆ" -ಪೌಲನೋ ಅಥವಾ ಆತನ ಎದುರಾಳಿಯೋ-ಎಂಬದು ಎಲ್ಲಾ ಕಡೆಗಳಲ್ಲಿಯೂ ಸ್ಪಷ್ಟವಾಗುವದಿಲ್ಲ. ಅಷ್ಟುಮಾತ್ರವ ಲ್ಲದೆ, ಆಕ್ಷೇಪಣೆಗಳು ಹಾಗೂ ಉತ್ತರಗಳು ಎರಡೂ ಅತ್ಯಂಥ ಕ್ಲುಪ್ತವಾಗಿರುತ್ತವೆ, ಹೀಗೆ ಆ ನಿರ್ದಿಷ್ಟ ಅಂಶದ ಬಗ್ಗೆ ಕೆಲವು ಊಹೆಗಳನ್ನು ಮಾಡಬೇಕಾದ ಅನಿವಾರ್ಯತೆಯನ್ನುಂಟು ಮಾಡುತ್ತದೆ. ಹೇಗಿದ್ದರೂ, ಅಪೊಸ್ತಲನ ಪ್ರಾಥಮಿಕ ಉದ್ದೇಶವಂತೂ ಸ್ಪಷ್ಟವಾಗಿರುತ್ತದೆ: ಯೆಹೂದ್ಯರ ವಿರೋಧವನ್ನು ತಣ್ಣಗಾಗಿಸುವದು (ನೋಡಿರಿ 2:1; 3:19).

ಆಕ್ಷೇಪಣೆಗಳ ವಿಷಯವಾಗಿ ನೋಡುವದಾದರೆ, ಅವುಗಳು ಬಹುಶಃ ಪೌಲನು ಯೆಹೂದ್ಯ ಸಭಾಮಂದಿರಗಳಲ್ಲಿ ಬೋಧಿಸುವ ವೇಳೆಗಳಲ್ಲಿ ಕೇಳಿಸಿಕೊಂಡಿದ್ದ ಕುತರ್ಕವಾದದ ಮಾತುಗಳಾಗಿರಬಹುದು (ನೋಡಿರಿ ಅಪೊಸ್ತಲರ ಕೃತ್ಯ 13:14; 14:1; 17:1, 10; 18:4; 19:8). ಹಲವಾರು ವರ್ಷಗಳಲ್ಲಿ, ಪೌಲನು ಬಹುಶಃ ಒಂದೇ ರೀತಿಯ ಆಕ್ಷೇಪಣೆಗಳನ್ನು ಪದೇ ಪದೇ ಕೇಳಿಸಿಕೊಂಡಿದ್ದಿರಬಹುದು. ಒಂದು ವೇಳೆ ಅವುಗಳು, ಸ್ವತಃ

ಪೌಲನೇ ಒಬ್ಬ ಕ್ರೈಸ್ತನಾಗುವದಕ್ಕೆ ಮುಂಚೆ ಮಾಡಿರಬಹುದಾದ ಟೀಕೆಗಳೇ ಆಗಿದ್ದಿರಬಹುದಾಗಿದೆ.

**ಆಕ್ಷೇಪಣೆ ಒಂದು: "ದೇವರ ಒಡಂಬಡಿಕೆಯ ವಿಷಯವೇನು?" (3:1, 2)**

**[1]ಹಾಗಾದರೆ ಯೆಹೂದ್ಯರ ಶ್ರೇಷ್ಟತ್ವವೇನು? ಸುನ್ನತಿಯಿಂದ ಲಾಭವೇನು? [2]ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು. ಮೊದಲನೇದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು.**

**ವಚನ 1.** ಅಧ್ಯಾಯ 2ರ ಅಂತ್ಯದಲ್ಲಿ, ಯೆಹೂದ್ಯರು ಮೋಶೆಯ ಧರ್ಮಶಾಸ್ತ್ರ ಹೊಂದಿರುವದು ಹಾಗೂ ಸುನ್ನತಿ ಮಾಡಿಸಿಕೊಂಡಿರುವದು ಅವರಿಗೆ ರಕ್ಷಣೆಯ ನಿಶ್ಚಯತೆಯನ್ನು ನೀಡಲಿಲ್ಲ ಎಂಬದಾಗಿ ಪೌಲನು ಹೇಳಿದನು (2:17-29). ಯಾವದೇ ವೇಳೆಯಲ್ಲಿ, ಯಾರೇ ಆಗಲಿ ಒಬ್ಬ ಧಾರ್ಮಿಕ ವ್ಯಕ್ತಿಗೆ ಅವನ ರಕ್ಷಣೆಯು ಪ್ರಶ್ನಾರ್ಹವಾಗಿದೆ ಎಂದು ಹೇಳಿದರೆ ಖಂಡಿತವಾಗಿಯೂ ಒಂದು ವಾಗ್ವಾದವು ಉದ್ಭವವಾಗುತ್ತದೆ. ಈ ಕಾರಣದಿಂದಾಗಿ, ಈ "ಉತ್ತರವು" ಆಶ್ಚರ್ಯವುಂಟು ಮಾಡುವದಿಲ್ಲ: **ಹಾಗಾದರೆ ಯೆಹೂದ್ಯರ ಶ್ರೇಷ್ಟತ್ವವೇನು? ಸುನ್ನತಿಯಿಂದ ಲಾಭವೇನು?**

"ಶ್ರೇಷ್ಟತ್ವ" ಎಂಬುದು περισσός (*perissos*) ಎಂಬದರಿಂದ ಅನುವಾದಿಸ ಲ್ಪಟ್ಟಿದೆ, ಅದು περί (*peri*) ಎಂಬದರಿಂದ ಬರುತ್ತದೆ, "ಮೇಲ್ಗಡೆ" ಎಂಬದಕ್ಕೆ ಉಪಸರ್ಗವಾಗಿದೆ. *Perissos* ಎಂಬುದು "ಮೇಲ್ಗಡೆ ಮತ್ತು ಉನ್ನತ" ದಲ್ಲಿರುವದನ್ನು ಸೂಚಿಸುತ್ತದೆ.[3] "ಲಾಭ" ಎಂಬ ಪದವು ὠφέλεια (*ōpheleia*) ಎಂಬದರಿಂದ ಬಂದಿದೆ, ಅದು "ಹೆಚ್ಚಿಸು" ಎಂಬ ಮೂಲ ಪದಕ್ಕೆ ಸೇರಿದೆ.[4] *Ōpheleia* ಎಂಬುದು ಒಬ್ಬನಿಗೆ ಇರುವದನ್ನು ಹೆಚ್ಚಿಸು ಅಥವಾ ಸೇರ್ಪಡೆಗೊಳಿಸುವದು ಎಂದು ಅರ್ಥ ಕೊಡುತ್ತದೆ. *Perissos* ಮತ್ತು *ōpheleia* ಒಂದೇ ಸಂಗತಿಯನ್ನು ಎರಡು ರೀತಿಯಲ್ಲಿ ಹೇಳಿದಂತೆ ಆಗಿರುತ್ತವಷ್ಟೆ. ಪೌಲನ ಕಾಲ್ಪನಿಕ ಯೆಹೂದಿ ಎದುರಾಳಿಯು ಹೀಗೆ ಕೇಳುತ್ತಿದ್ದಾನೆ, "ನೀನು ಹೇಳುವದು ಸತ್ಯವೇ ಆಗಿದ್ದರೆ, ಒಬ್ಬನು ಯೆಹೂದ್ಯನಾಗಿರುವದರಲ್ಲಿ ಅರ್ಥವೇನಿದೆ?"

ಯೆಹೂದ್ಯರಿಗೆ ಸಂಬಂಧಪಟ್ಟಂತೆ, ಪೌಲನು 2ನೇ ಅಧ್ಯಾಯದಲ್ಲಿ ಹೇಳಿದ ಮಾತುಗಳು ದೀರ್ಘಕಾಲದ ಹಿಂದೆ ದೇವರು ಅವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯ ಕುರಿತು ಪ್ರತಿಬಿಂಬಿಸುವದಾಗಿತ್ತು. ದೇವರು ಅವರನ್ನು ಭೂಮಿಯ ಎಲ್ಲಾ ಜನಾಂಗಗಳೊಳಗಿಂದ ಪ್ರತ್ಯೇಕಿಸಿ ಅವರಿಗೆ ಧರ್ಮಶಾಸ್ತ್ರವನ್ನು *ಕೊಟ್ಟಿದ್ದನು* ಮತ್ತು ಸುನ್ನತಿಯ ಗುರುತು ನೀಡಿದ್ದನು. ಪೌಲನು ಇಲ್ಲಿ ಒಡಂಬಡಿಕೆಯು ಅರ್ಥವಿಲ್ಲದ್ದಾಗಿತ್ತೆಂದು ಹೇಳಿದನೋ?

**ವಚನ 2.** ಅಧ್ಯಾಯ 2ರಲ್ಲಿ ಪೌಲನ ಪ್ರಬಲವಾದ ಮಾತುಗಳ ಬಳಿಕ, ಆತನು ಈ ರೀತಿಯಲ್ಲಿ ಪ್ರತ್ಯುತ್ತರ ಕೊಡುವನೆಂದು ನಿರೀಕ್ಷಿಬಹುದು" ,ಒಬ್ಬ ಯೆಹೂದ್ಯನಾಗಿರುವದರಲ್ಲಿ ಯಾವ ಶ್ರೇಷ್ಟತ್ವವೂ ಇಲ್ಲ". ಬದಲಾಗಿ ,ಆತನು ಉತ್ತರಿಸಿದ್ದೇನೆಂದರೆ ,**ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು.** ಪೌಲನು ಇಲ್ಲಿ ಯಾವ "ಬಹಳ" ಶ್ರೇಷ್ಟತ್ವ ಹಾಗೂ ಲಾಭಗಳ ಕುರಿತು ಮಾತಾಡುತ್ತಿದ್ದಾನೆ? ಆತನು ಹೇಳಿದನು, **ಮೊದಲನೇದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು.** "ಮೊದಲನೆಯದಾಗಿ"

ಎಂಬುದು ಪೌಲನು ಒಂದು ದೊಡ್ಡದಾದ ಪಟ್ಟಿಯನ್ನು ಕೊಡುವ ಉದ್ದೇಶ ಹೊಂದಿದ್ದನೆಂಬ ಭಾವನೆಯನ್ನುಂಟು ಮಾಡುತ್ತದೆ- ಆದರೆ ಈ ಪಟ್ಟಿಯು 9ನೇ ಅಧ್ಯಾಯದ ತನಕ ಕಾಣಿಸಿಕೊಳ್ಳುವದಿಲ್ಲ (ನೋಡಿರಿ 9:4, 5). ಬಹುಶಃ ಈ ಮಾತುಗಳು ಕೇವಲ ಒಂದು ಪೀಠಿಕೆಯಾಗಿದ್ದ ವೆಂದು ತೋರುತ್ತದೆ (ನೋಡಿರಿ RSV), ಅದರರ್ಥವು, "ಅತ್ಯಂಥ ಪ್ರಾಮುಖ್ಯವಾದದ್ದೇನೆಂದರೆ [ಶ್ರೇಷ್ಟತ್ವ ಏನೆಂದರೆ[" (ನೋಡಿರಿ KJV).

ಯೆಹೂದ್ಯರಿಗಿದ್ದ ಅತ್ಯಂಥ ಪ್ರಾಮುಖ್ಯವಾದ ಶ್ರೇಷ್ಟತ್ವ ಏನೆಂದರೆ ಅವರ "ವಶಕ್ಕೆ ದೈವೋಕ್ತಿಗಳು ಒಪ್ಪಿಸಲ್ಪಟ್ಟಿದ್ದವು." "ದೈವೋಕ್ತಿಗಳು" ಎಂಬುದು λόγια (*logia*) ಎಂಬುದರ ಅನುವಾದವಾಗಿದೆ, ಅದು λόγος (*logos*, "ವಾಕ್ಯ") ಎಂಬುದರ ಅಲ್ಪಾರ್ಥವುಳ್ಳದ್ದೆಂದು ಅನೇಕ ಪಂಡಿತರು ಪರಿಗಣಿಸುತ್ತಾರೆ.[5] AB ಆವೃತ್ತಿಯು ಈ "ದೈವೋಕ್ತಿಗಳು, . . ." ಎಂಬದನ್ನು "ದೇವರ [ಕ್ಲುಪ್ತವಾದ ನುಡಿಗಳು]" ಎಂದು ಸೂಚಿಸುತ್ತದೆ. ಬಹುಶಃ ದೇವರ ಅಂತಿಮ ಹಾಗೂ ವೈಯಕ್ತಿಕ ಗುಣಸ್ವಭಾವವನ್ನು ತಿಳಿಯಪಡಿಸುವದಕ್ಕಾಗಿ ಈ ವಿಶಿಷ್ಟವಾದ ಮಾದರಿ ಉಪಯೋಗಿಸಲ್ಪಟ್ಟಿರಬೇಕು. NIV ಯಲ್ಲಿ "ಸ್ವತಃ ದೇವರ ವಾಕ್ಯಗಳನ್ನೇ" ಎಂದಿದೆ. ಕೆಲವರು *logia* ವನ್ನು ಕೇವಲ ಯೆಹೂದಿ ಧರ್ಮಶಾಸ್ತ್ರಗಳಿಗೆ ಸಿಮೀತಗೊಳಿಸುತ್ತಾರೆ, ಆದರೆ John MacArthur, Jr., ಆ ಪದವು "ಇಡೀ ಹಳೆ ಒಡಂಬಡಿಕೆಯನ್ನು" ಸೂಚಿಸುತ್ತದೆಂದು ಹೇಳಿದ್ದು ಬಹುಶಃ ಸರಿಯೆಂದು ತೋರುತ್ತದೆ.[6]

"ದೇವರ ಪ್ರಕಟಣೆಯು ಇಷ್ಟಬಂದ ಕಡೆಯಲ್ಲೆಲ್ಲಾ ಸಂಭವಿಸುವದಿಲ್ಲ. ಮಾನವರು ತಮ್ಮ ಇಷ್ಟಬಂದ ಸಮಯದಲ್ಲಿ ಮತ್ತು ಸ್ಥಳಗಳಲ್ಲಿ ದೇವರನ್ನು ಮೋಡಿ ಮಾಡುವದಕ್ಕಾಗದು. ದೇವರೇ . . . ತನ್ನನ್ನು ಪ್ರಕಟಿಸಿಕೊಳ್ಳಬೇಕು."[7] ಈ ವಿಷಯದಲ್ಲಿ, ಆತನು ಯೆಹೂದ್ಯರಿಗೆ ತನ್ನನ್ನು ಹಾಗೂ ತನ್ನ ಚಿತ್ತವನ್ನು ಪ್ರಕಟಿಸಿಕೊಂಡನು. ಅವರು ದೇವರ ವಿಧಿಗಳಿಂದ, ಪ್ರವಾದನೆಗಳಿಂದ, ಮತ್ತು ವಾಗ್ದಾನಗಳಿಂದ ಆಶೀರ್ವದಿಸಲ್ಪಟ್ಟಿದ್ದರು. ಆತನ ವಿಧಿಗಳು ಅವರಿಗೆ ಹೇಗೆ ಜೀವಿಸಬೇಕೆಂದು ತಿಳಿಸಿದವು; ಆತನ ಪ್ರವಾದನೆಗಳು ಬರಲಿರುವ ಮೆಸ್ಸೀಯನೆಡೆಗೆ ಬೆರಳು ತೋರಿಸಿದವು; ಆತನ ವಾಗ್ದಾನಗಳು ಅವರಿಗೆ ಆತನ ನಿರಂತರವಾದ ಕಾಪಾಡುವಿಕೆಯನ್ನು ಖಾತ್ರಿಗೊಳಿಸಿದವು. ದೇವರು ಯೆಹೂದ್ಯ ಜನಾಂಗವನ್ನು "ಮಿಕ್ಕ ಎಲ್ಲಾ ಬೊಕ್ಕಸಗಳಿಗಿಂತಲೂ ಅತ್ಯಂಥ ಅಮೂಲ್ಯವಾದ ಬೊಕ್ಕಸದ ಪಾಲಕರನ್ನಾಗಿ" ಮಾಡಿದ್ದನು.[8]

ಈ ಲಿಖಿತ ಬೊಕ್ಕಸ . . . ಸ್ವತಃ ದೇವರ ಕುರಿತ ಸ್ಪಷ್ಟ ಪ್ರಕಟಣೆಯನ್ನು. . . ದೇವರು ಮಾನವರಿಂದ ಏನನ್ನು ನಿರೀಕ್ಷಿಸುತ್ತಾನೆಂಬ ಕುರಿತ ನಿಖರವಾದ ಉಪದೇಶವನ್ನು ಹೊಂದಿರುವದರಲ್ಲಿ ಏನಾದರೂ ಶ್ರೇಷ್ಟತ್ವವಿತ್ತೋ? ಇಬ್ಬರು ವ್ಯಕ್ತಿಗಳು ಕತ್ತಲೆಯಲ್ಲಿ ದಾರಿಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಬಗ್ಗೆ ಕಲ್ಪಿಸಿಕೊಳ್ಳಿರಿ. ಒಬ್ಬನ ಬಳಿಯಲ್ಲಿ ಕೇವಲ ಮಂದವಾದ, ಕ್ಷೀಣಿಸುತ್ತಿರುವ ಬೆಂಕಿಯಿದೆ, ಇನ್ನೊಬ್ಬನ ಬಳಿಯಲ್ಲಿ ಆತನ ದಾರಿಗೆ ಬೆಳಕು ನೀಡುವ ಶಕ್ತಿಶಾಲಿಯಾದ, ಉಜ್ವಲವಾದ ಬೆಳಕು ಇರುತ್ತದೆ. ಮೊದಲನೆಯವನನ್ನು ಕ್ರಿಸ್ತನು ಬರುವದಕ್ಕೆ ಮುಂಚಿನ ಅನ್ಯಜನರಿಗೆ ಹೋಲಿಸಬಹುದು; ಎರಡನೆಯವನನ್ನು ಯೆಹೂದ್ಯರಿಗೆ ಹೋಲಿಸಬಹುದು. ಇವರಲ್ಲಿ ಯಾರಿಗೆ ಶ್ರೇಷ್ಟತ್ವವಿರುತ್ತದೆ? ಸಹಜವಾಗಿಯೇ ತೋರುವಂತೆ, ಹೆಚ್ಚು ಪ್ರಕಾಶಮಾನ ಬೆಳಕು ಹೊಂದಿದ್ದವನೇ. ಅದು "ದೇವರ ವಾಕ್ಯಗಳನ್ನೇ" ಹೊಂದಿದ್ದ ಯೆಹೂದ್ಯರೇ ಆಗಿರುವರು.

ಹೇಗೂ, ಒಂದು ಶ್ರೇಷ್ಟತ್ವ ಹೊಂದಿದ್ದರೆ ಮಾತ್ರ ಯಶಸ್ಸು ಖಚಿತಗೊಳ್ಳುವದಿಲ್ಲ. ಒಬ್ಬ

ಅನಕ್ಷರಸ್ಥ ವ್ಯಕ್ತಿಗಿಂತಲೂ ಉತ್ತಮ ಅಕ್ಷರಸ್ಥನಿಗೆ ಶ್ರೇಷ್ಟತ್ವವಿರುತ್ತದೆ. ಹೇಗಿದ್ದರೂ, ಅಲ್ಪ ಅಥವಾ ಸ್ವಲ್ಪವೂ ವಿಧ್ಯಾಭ್ಯಾಸವಿಲ್ಲದ ಕೆಲವರು ಸಾಕಷ್ಟು ಶಿಕ್ಷಣಹೊಂದಿದವರಿಗಿಂತಲೂ ಅಧಿಕವಾದದ್ದನ್ನು ಸಾಧಿಸಿರುವ ಉದಾಹರಣೆಗಳುಂಟು-ಯಾಕೆಂದರೆ ಅವರು ಕಠಿಣ ಪ್ರಯತ್ನಗಳನ್ನು ಮಾಡುತ್ತಾರೆ. ಕ್ರೀಡೆಗಳನ್ನು ಆಡುವಾಗ, ಬಲಿಷ್ಠ ಮೈಕಟ್ಟು ಮತ್ತು ಸ್ವಾಭಾವಿಕವಾದ ಕ್ರೀಡಾಸಾಮರ್ಥ್ಯಗಳುಳ್ಳ ವ್ಯಕ್ತಿಗೆ ಸ್ವಲ್ಪ ಸಾಮರ್ಥ್ಯವುಳ್ಳ ವ್ಯಕ್ತಿಗಿಂತಲೂ ಹೆಚ್ಚು ಸೌಕರ್ಯವಿರುತ್ತದೆ-ಆದರೆ ಕೆಲವು ಸಾರಿ ಎರಡನೆಯವನು ಮೊದಲನೆಯವನಿಗಿಂತ ಉತ್ತಮ ಪ್ರದರ್ಶನವನ್ನು ನೀಡುತ್ತಾನೆ ಯಾಕೆಂದರೆ ಆತನು ಹೆಚ್ಚಿನ ದೃಢಸಂಕಲ್ಪದಿಂದ ಪ್ರಯತ್ನಿಸುತ್ತಾನೆ. ಅದೇ ರೀತಿಯಲ್ಲಿಯೇ, "ದೇವರ ವಾಕ್ಯಗಳನ್ನು" ಹೊಂದಿದ್ದು ಯೆಹೂದ್ಯರಿಗೆ ಅನ್ಯಜನರಿಗಿಂತಲೂ ಅತ್ಯಂಥ ಅಧಿಕವಾದ ಲಾಭವನ್ನು ಒದಗಿಸಿತ್ತು-ಆದರೆ ತಮಗೆ ದೇವರಿಂದ ಕೊಡಲ್ಪಟ್ಟದ್ದರ ಪೂರ್ಣ ಲಾಭವನ್ನು ಪಡೆದುಕೊಳ್ಳುವದಲ್ಲಿ ಯೆಹೂದ್ಯರು ವಿಫಲರಾಗಿದ್ದರು.

ಯೆಹೂದ್ಯರು "ತಮಗೆ ದೈವೋಕ್ತಿಗಳು ಒಪ್ಪಿಸಲ್ಪಟ್ಟಿವೆ" ಎಂಬದನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾದರೆಂದು ತೋರುತ್ತದೆ. "ಒಪ್ಪಿಸಲ್ಪಟ್ಟಿವೆ" ಎಂಬ ಅನುವಾದಿತ ಪದದ ಮೂಲ ಪದವು πιστεύω (*pisteuō*), ಅದು "ನಂಬು" ಎಂಬುದರ ಸಹಜವಾದ ಪದ. ತಟಸ್ಥ ರೂಪದಲ್ಲಿ ಉಪಯೋಗಿಸಿದಾಗ, ಈ ಪದದ ಅರ್ಥವು "ಒಪ್ಪಿಸಲ್ಪಟ್ಟವನಾಗು" ಎಂದಾಗುತ್ತದೆ.[9] "ಒಪ್ಪಿಸಲ್ಪಟ್ಟವು" ಎಂಬ ಪದವು ಮಾಲೀಕತ್ವದಿಂದ ಮನೆವಾರ್ತೆಗಾರಿಕೆಗೆ ಒತ್ತನ್ನು ಬದಲಾಯಿಸುತ್ತದೆ, "ಧರ್ಮಶಾಸ್ತ್ರದ ಸ್ವಾಸ್ಯದಿಂದ ಜವಾಬ್ದಾರಿಕೆಗೆ ಬದಲಾಯಿಸುತ್ತದೆ."[10] ಯೆಹೂದ್ಯರು ದೇವರ ವಾಕ್ಯದ ಉತ್ತಮ ಮನೆವಾರ್ತೆಗಾರರಾಗಿರಲಿಲ್ಲ. ಒಂದು ಕಾಲದಲ್ಲಿ, ಅವರು ಅದನ್ನು ಎಲ್ಲೋ ಕಳೆದುಹಾಕಿದ್ದರು (ನೋಡಿರಿ 2 ಪೂರ್ವಕಾಲವೃತ್ತಾಂತ 34:14-33). ಕ್ರಿಸ್ತನ ಕಾಲದ ಹೊತ್ತಿಗೆ, ಅವರು ದೇವರಿಂದ ಕೊಡಲ್ಪಟ್ಟ ಆಜ್ಞೆಗಳಿಗಿಂತಲೂ ಮನುಷ್ಯ ಕಲ್ಪಿತ ಸಂಪ್ರದಾಯಗಳನ್ನು ಹೆಚ್ಚು ಪ್ರಾಮುಖ್ಯವೆಂದು ಪರಿಗಣಿಸಿದ್ದರು (ನೋಡಿರಿ ಮತ್ತಾಯ 15:1-9). ಯೇಸು ನಿರ್ದಾಕ್ಷಿಣ್ಯವಾಗಿ ಯೆಹೂದಿ ನಾಯಕರಿಗೆ ಹೇಳಿದ್ದೇನಂದರೆ, "ನೀವು ಶಾಸ್ತ್ರವನ್ನಾದರೂ ತಿಳಿಯದವರಾಗಿದ್ದೀರಿ" (ಮಾರ್ಕ 12:24).

## ಆಕ್ಷೇಪಣೆ ಎರಡು: "ಇದು ದೇವರ ನಂಬಿಗಸ್ತಿಕೆಯನ್ನು ನಿರರ್ಥಕಗೊಳಿ ಸುತ್ತದೋ?" (3:3, 4)

**3ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ; 4ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ.**

**ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು,**
**ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು**
**ಎಂದು ಬರೆದದೆ.**

**ವಚನ 3.** ಯೆಹೂದ್ಯರು ಧರ್ಮಶಾಸ್ತ್ರ ಕೈಕೊಳ್ಳುವದಕ್ಕೆ ವಿಫಲರಾಗಿದ್ದರೆಂಬ ಸತ್ಯವು ನಮ್ಮನ್ನು ಎರಡನೆಯ ಆಕ್ಷೇಪಣೆಗೆ ತಂದು ನಿಲ್ಲಿಸುತ್ತದೆ: **ಅವರಲ್ಲಿ ಕೆಲವರು ನಂಬದೆ**

**ಹೋಗಿದ್ದರೇನು? ಅವರು ನಂಬದೆ ಹೋದದರಿಂದ**[11] **ದೇವರು ವಚನಕ್ಕೆ ತಪ್ಪುವವನಾದನೋ?**[12]

ಪೌಲನು 2 ಮತ್ತು 3 ವಚನಗಳಲ್ಲಿ ಪದಗಳ ಚಾತುರ್ಯದ ಪ್ರಯೋಗವು ಆಂಗ್ಲಕ್ಕಿಂತಲೂ ಗ್ರೀಕ್ ಭಾಷೆಯಲ್ಲಿ ಹೆಚ್ಚು ಗೋಚರವಾಗುತ್ತದೆ: "ನಂಬದೆ" (πιστεύω, *pisteuō*) ಮತ್ತು "ನಂಬದೆ" (πίστις, *pistis*) ಪದಗಳ ಪುನರಾವರ್ತನೆಯನ್ನು ಗಮನಿಸಿರಿ. ಯೆಹೂದ್ಯರಿಗೆ ವಾಕ್ಯವನ್ನು "ಒಪ್ಪಿಸಲಾಗಿತ್ತು" (*pisteuō*), ಆದರೆ ಅವರು ಆ ವಾಕ್ಯವನ್ನು "ನಂಬದೆ" (*pisteuō*) ಹೋಗಿದ್ದರು. ಅವರ "ಅಪನಂಬಿಕೆ" ಯು (*pistis* ನ ನಕಾರಾತ್ಮಕ ಪದ) ದೇವರ "ನಂಬಿಗಸ್ತಿಕೆಯನ್ನು" (*pistis*) ಇಲ್ಲದಂತೆ ಮಾಡಿತೋ?[13] ನಾವು ಪದಗಳ ಚತುರುಪ್ರಯೋಗವನ್ನು ಹೀಗೆ ವ್ಯಕ್ತಪಡಿಸಬಹುದು: "ಯೆಹೂದ್ಯರು ಆತನ ವಾಕ್ಯಕ್ಕೆ *ನಂಬಿಗಸ್ತ*ರಾಗಿರಬೇಕೆಂದು ನಿರೀಕ್ಷಿಸಲಾಗಿತ್ತು, ಆದರೆ ಅವರು *ಅಪನಂಬಿಗಸ್ತ*ರಾಗಿದ್ದರು. ಅವರ *ಅಪನಂಬಿಗಸ್ತಿಕೆ*ಯು ದೇವರ *ನಂಬಿಗಸ್ತಿಕೆಯನ್ನು* ಇಲ್ಲದಂತೆ ಮಾಡಿತೊ?"

LB ಆವೃತ್ತಿಯು ಈ ಆಕ್ಷೇಪಣೆಯನ್ನು ಈ ಮಾತುಗಳಲ್ಲಿ ಬರೆಯುತ್ತದೆ: "ನಿಜ, ಅವರಲ್ಲಿ [ಯೆಹೂದ್ಯರು[ ಅಪನಂಬಿಗಸ್ತರಾಗಿದ್ದರು, ಆದರೆ ಅವರು ದೇವರಿಗೆ ಮಾಡಿದ ತಮ್ಮ ವಾಗ್ದಾನವನ್ನು ತಪ್ಪಿದರೆಂಬ ಕಾರಣಕ್ಕೆ, ದೇವರು ಅವರಿಗೆ ಮಾಡಿದ ತನ್ನ ವಾಗ್ದಾನಗಳನ್ನು ತಪ್ಪುವನೆಂದು ಅರ್ಥವೋ?" ತತ್ಪರಿಣಾಮವಾಗಿ, ಕಾಲ್ಪನಿಕ ಎದುರಾಳಿಯು ಪೌಲನಿಗೆ ಹೀಗೆ ಕೇಳುವವನಾಗಿದ್ದನು, "ದೇವರು ಬಹಳ ಕಾಲದ ಹಿಂದೆ ತನ್ನ ಜನರೊಂದಿಗೆ ಮಾಡಿದ ಒಡಂಬಡಿಕೆಯ ವಿಷಯದಲ್ಲಿ ಮಾತು ತಪ್ಪಿದ್ದಾನೆಂದು ನೀನು ಆರೋಪಿಸುತ್ತೀರುವಿಯೋ?"

**ವಚನ 4.** ಈ ವಚನವು ಪೌಲನ ಉತ್ತರವನ್ನೊಳಗೊಂಡಿರುತ್ತದೆ. ಆತನು ಈ ಪ್ರಶ್ನೆಯ ಕುರಿತು 9 ರಿಂದ 11 ಅಧ್ಯಾಯಗಳಲ್ಲಿ ವಿಸ್ತಾರವಾಗಿ ಚರ್ಚಿಸಲಿರುವನು. ಈ ಕ್ಷಣದಲ್ಲಾದರೋ, ಆತನು ಅವರಿಗೆ ದೇವರು ಅಪನಂಬಿಗಸ್ತನಾಗಿರುವಕ್ಕೆ ಸಾಧ್ಯವೆಂಬ ಅನುಮಾನದ ವಿಷಯವಾಗಿ ಉತ್ತರವನ್ನು ಕೊಡುತ್ತಾನೆ. ಆತನ ಉತ್ತರವು ತೀಕ್ಷ್ಣವಾಗಿತ್ತು: **ಎಂದಿಗೂ ಇಲ್ಲ; ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ. ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ.**

"ಎಂದಿಗೂ ಇಲ್ಲ!" ಎಂಬುದು ಗ್ರೀಕ್ ಪದವಾದ μὴ γένοιτο (*mē genoito*) ಎಂಬದರ ಅಕ್ಷರಶಃ ಅನುವಾದವಾಗಿದೆ, "ಗ್ರೀಕ್.ನಲ್ಲಿ ಸಾಧ್ಯವಿರುವ ಅತ್ಯಂಥ ಪ್ರಭಲ ನಿರಾಕರಣೆಗೆ"[14] ಉಪಯೋಗಿಸುವ ಪದವಾಗಿದೆ .ಪೌಲನು ಈ ಪದಗಳನ್ನು ಪುನಃ ಪುನಃ ಉಪಯೋಗಿಸಿದನು (3:6, 31; 6:2, 15; 7:7, 13; 9:14; 11:1, 11), ಅದು ಪತ್ರಿಕೆಯಲ್ಲಿ ತುಂಬುವಂಥ ಭಾವತೀವ್ರತೆಯನ್ನು ಸೂಚಿಸುತ್ತದೆ.

ಆಂಗ್ಲ ಪದಗಳು μὴ γένοιτο (*mē genoito,* "ಎಂದಿಗೂ ಇಲ್ಲ") ಎಂಬುದರಲ್ಲಿರುವ ಭಾವನೆಯ ಆಳವನ್ನು ವ್ಯಕ್ತಪಡಿಸುವದಕ್ಕೆ ಸಾಧ್ಯವಿಲ್ಲ. NIV ಯಲ್ಲಿ "ಇಲ್ಲವೇ ಇಲ್ಲ!" ಎಂದಿದೆ. NKJV ಯಲ್ಲಿ "ಖಂಡಿತವಾಗಿಯೂ ಇಲ್ಲ!" ಎಂದಿದೆ. KJV ಯು ಭಾವನಾತ್ಮಕತೆಯ ವೈಪರಿತ್ಯವನ್ನು ವ್ಯಕ್ತಪಡಿಸುವ ಬರಾಟೆಯಲ್ಲಿ "ಒಂದು ಅಲ್ಪ-ಅಪವಿತ್ರ ಮಾತನ್ನು" ಉಪಯೋಗಿಸುತ್ತದೆ: "ದೇವರು ತಡೆಯಲಿ!"[15] CJB ಯು ಅದೇ ರೀತಿಯ ಪದವನ್ನು ಬಳಸುತ್ತದೆ: "ಪರಲೋಕ ತಡೆಯಲಿ!" ಕೆಲವರು ಹೀಗೆ ಹೇಳುವರು, "ಇಲ್ಲವೆ, ಇಲ್ಲ. ಸಾವಿರ ಸಾರಿ ಇಲ್ಲ!" ದೇವರು ಅಪನಂಬಿಗಸ್ತನಾಗಿರಬಲ್ಲ ಎಂಬ ಸಲಹೆಗೂ ಸಹ ಪೌಲನು ಬಹಳ

ಆಘಾತಗೊಂಡಿದ್ದನು. ಅಪೊಸ್ತಲನಿಗೆ ಜನರು ತನ್ನನ್ನು ನಂಬುವದಿಲ್ಲ ಎಂಬುದಕ್ಕಿಂತಲೂ ಅವರು ದೇವರನ್ನು ಘನಪಡಿಸಲು ವಿಫಲರಾಗುವರೆಂಬ ಬಗ್ಗೆ ಹೆಚ್ಚು ಚಿಂತೆಯಿತ್ತು.

ಪೌಲನು ತನ್ನ ಉತ್ತರವನ್ನು ಮುಂದುವರೆಸಿದನು: **ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ.** ಕಾಲ್ಪನಿಕ ಎದುರಾಳಿಯು, ಯೆಹೂದ್ಯರ ಅಪನಂಬಿಗಸ್ತಿಕೆಯು ದೇವರ ನಂಬಿಗಸ್ತಿಕೆಯ ಮೇಲೆ ಪರಿಣಾಮ ಬೀರಿತ್ತೋ? ಎಂದು ಕೇಳಿದ್ದನು. ಜನರು ಏನಾಗಿರಬೇಕೋ ಅದಾಗಿಲ್ಲವಾದರೂ ದೇವರ ಮಾರ್ಪಡದ ಸ್ವಭಾವವನ್ನು ಅದು ಬದಲಾಯಿಸಲಾರದು ಎಂಬದು ಪೌಲನ ಉತ್ತರವಾಗಿತ್ತು (ನೋಡಿರಿ 2 ತಿಮೊಥೆ 2:13). ಉದಾಹರಣೆಗೆ, ಭೂಮಿಯ ಮೇಲಿನ ಪ್ರತಿಯೊಬ್ಬ ವ್ಯಕ್ತಿಯು ಸುಳ್ಳುಗಾರನಾಗಿದ್ದರೂ, ದೇವರು ಆಗಲೂ ಸತ್ಯವಂತನಾಗಿಯೇ ಇರುವನು (ನೋಡಿರಿ Goodspeed).

ದೇವರು ಯಾವಾಗಲೂ ಸತ್ಯವಂತನೆಂದೇ ಸಾಭಿತುಗೊಳಿಸಲ್ಪಡುವನೆಂಬ ಸತ್ಯವನ್ನು ಇನ್ನಷ್ಟು ಪುಷ್ಟೀಕರಿಸಲು, ಪೌಲನು ಕೀರ್ತನೆಗಳಿಂದ ಉಲ್ಲೇಖಿಸುತ್ತಾನೆ: **ನೀನು ಎಲ್ಲಾ ನುಡಿಗಳಲ್ಲಿ ನ್ಯಾಯಸ್ಥನೆಂದು ಕಾಣಿಸಿಕೊಳ್ಳಬೇಕು, ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು ಎಂದು ಬರೆದದೆ.** ಈ ಉಲ್ಲೇಖವು ಕೀರ್ತನೆ 51:4ರ ಕಡೇ ಭಾಗವಾಗಿದೆ. ಪೌಲನು ಈ ವಚನಗಳನ್ನು ಪ್ರಸ್ತುತಪಡಿಸುವ ರೀತಿಯು ಹಳೆ ಒಡಂಬಡಿಕೆಯ ಬಹುಪಾಲು ಆವೃತ್ತಿಗಳಲ್ಲಿರುವ ಅನುವಾದಕ್ಕಿಂತ ಭಿನ್ನವಾಗಿ ರುತ್ತದೆ. ಆತನು ಗ್ರೀಕ್ ಹಳೆ ಒಡಂಬಡಿಕೆಯಿಂದ (LXX) ಈ ಮಾತುಗಳನ್ನು ಉಲ್ಲೇಖಿಸಿದ್ದನು, ಅದೇ ವೇಳೆಯಲ್ಲಿ, ನಮ್ಮ ಬಳಿಯಲ್ಲಿರುವ ಭಾಷಾಂತರಗಳು ಇಬ್ರಿಯ ಭಾಷೆಯಿಂದಾಗಿರುತ್ತವೆ.

ಕೀರ್ತನೆ 51 ಹಳೆ ಒಡಂಬಡಿಕೆಯಲ್ಲಿ ಅತ್ಯಂಥ ಗಾಢವಾದ ಪಾಪ ಅರಿಕೆಯ ವಾಕ್ಯಭಾಗಗಳಲ್ಲೊಂದಾಗಿದೆ. ಇದರಲ್ಲಿ ದಾವೀದನು ಬತ್ಷಬೆಯೊಂದಿಗೆ ಮಾಡಿದ ಪಾಪದ ಬಗ್ಗೆ ಪ್ರವಾದಿಯಾದ ನಾತಾನನನ್ನು ಸಂಧಿಸಿದ ನಂತರದಲ್ಲಿ ಆತನಲ್ಲಾದ ಪಶ್ಚಾತ್ತಾಪದ ಕುರಿತು ದಾಖಲಿಸಲ್ಪಟ್ಟಿರುತ್ತದೆ.[16] ವಚನ 4ರಲ್ಲಿ ದಾವೀದನ ಮಾತುಗಳು ತಿಳಿಯಪಡಿಸುವದೇನೆಂದರೆ ಅಂತ್ಯದಲ್ಲಿ ದೇವರು ನ್ಯಾಯವಂತನೂ ನಿಷ್ಕಳಂಕನೂ ಎಂದು ತೋರಿಬರಬೇಕೆಂಬದು ಆತನ ಮುಖ್ಯ ಕಾಳಜಿಯಾಗಿತ್ತು. ಅದರ ಕಾರಣದಿಂದಾಗಿ, ಆತನು ಕರ್ತನಿಗೆ ಹೇಳಿದ್ದೇನೆಂದರೆ, "ನೀನು ನಿನ್ನ ನುಡಿಗಳಲ್ಲಿ ನ್ಯಾಯವಾಗಿರಬೇಕೆಂದೂ ತೀರ್ಪು ಮಾಡುವಾಗ ನಿಷ್ಕಳಂಕವಾಗಿರಲೆಂದೂ ನಾನು ನನ್ನ ಪಾಪವನ್ನು ಅರಿಕೆ ಮಾಡುತ್ತಿದ್ದೇನೆ."

"ನಿನ್ನ ಮೇಲೆ ವ್ಯಾಜ್ಯ ನಡೆಯುವಾಗ ನೀನು ಗೆಲ್ಲಬೇಕು," ಎಂಬ ಕೊನೆಯ ಮಾತು ಕೆಲವರಿಗೆ ವಿಚಿತ್ರವೆನಿಸಬಹುದು. ಜನರು ಎಂದಾದರೂ ದೇವರ ಮೇಲೆ ತೀರ್ಪುಮಾಡಬಲ್ಲರೋ? ಹೌದು, ಅವರು ಪ್ರತಿ ದಿನವೂ ಮಾಡುತ್ತಾರೆ. ಅವರು ತಮ್ಮ ಮುಖ ಗಂಟಿಕ್ಕಿ, ತಮ್ಮ ತಲೆಯನ್ನು ಅಲ್ಲಾಡಿಸುತ್ತಾ, "ದೇವರು ಏಕೆ ಇದನ್ನು ನಡೆಯುವದಕ್ಕೆ ಬಿಟ್ಟನು?" ಎಂದು ಕೇಳುತ್ತಾರೆ. ಅತ್ಯಂಥ ಪ್ರಾಮಾಣಿಕ ಕ್ರೈಸ್ತರ ಮನಸ್ಸುಗಳಲ್ಲಿ ಸಹ ಸಂಶಯವು ನುಸುಳಬಹುದು. Moses E. Lard ಇದನ್ನು ಈ ರೀತಿ ವ್ಯಕ್ತಪಡಿಸುತ್ತಾನೆ:

> ನಾವು ಪಾಪಮಾಡುವದಕ್ಕೆ ಸಮರ್ಥರಾಗಿರುವ ಹಾಗೆ ಸೃಷ್ಟಿಸಿದ್ದಾನೆಂದು ನಾವು ಆತನ ಮೇಲೆ ಆರೋಪ ಮಾಡುವೆವು; ನಮ್ಮನ್ನು ಶೋಧನೆಗೆ ತೆರೆದಿಟ್ಟದ್ದಕ್ಕೆ; ಮತ್ತೊಬ್ಬನ ಪಾಪಕ್ಕಾಗಿ ನಮ್ಮನ್ನು ಮರಣಕ್ಕೆ ಒಳಗಾಗುವಂತೆ ಮಾಡಿದ್ದಕ್ಕೆ; ನಮಗೆ ಕಷ್ಟಗಳುಳ್ಳ

ಜೀವನವನ್ನು ನೇಮಿಸಿದ್ದಕ್ಕೆ; ಮಹಾ ಬಾಧೆಗಳ ನಡುವೆ ನಮ್ಮಿಂದ ಪರಿಶುದ್ಧತೆಯನ್ನು ಬೇಡುವದಕ್ಕಾಗಿ; ನಮಗೆ ಭವಿಷ್ಯದ ಬಗ್ಗೆ ಹೆಚ್ಚು ಪ್ರಕಟಪಡಿಸದಿರುವದಕ್ಕೆ . . . ಹೀಗೆ ಅನೇಕ ವಿಷಯಗಳಿಗಾಗಿ ಆತನನ್ನು ದೂರುತ್ತಿರುತ್ತೇವೆ.[17]

ಪೌಲನು ಹೇಳ ಬಯಸಿದ್ದೇನೆಂದರೆ, ಮಾನವರು ದೇವರನ್ನು ತೀರ್ಪುಮಾಡುವದಕ್ಕೆ ಪ್ರಯತ್ನಿಸುತ್ತಾರಾದರೂ, ಅಂತಿಮವಾಗಿ ದೇವರು ನ್ಯಾಯವಂತನೇ ಎಂದು ಸಾಭಿತಾಗುವದು. ಒಂದು ದಿನ ಎಲ್ಲಾ ಜನರಿಗೂ ಸಹ ಆತನು ಎಲ್ಲಾ ವಿಷಯಗಳಲ್ಲಿಯೂ ಉತ್ಕೃಷ್ಟವಾಗಿ ನ್ಯಾಯವುಳ್ಳವನು, ಮತ್ತು ನಂಬಿಗಸ್ತನೇ ಆಗಿದ್ದನು ಎಂಬದನ್ನು ಒಪ್ಪಿಕೊಳ್ಳಬೇಕಾಗುತ್ತದೆ. CJB ಹೀಗೆ ಹೇಳುತ್ತದೆ, ದೇವರನ್ನು "ವಿಚಾರಣೆಗೆ ಗುರಿಮಾಡಿದರೆ" ಆತನು "ತೀರ್ಪನ್ನು ಗೆಲ್ಲುವನು." ನ್ಯಾಯತೀರ್ಪು ಮುಕ್ತಾಯವಾದಾಗ, ಎಲ್ಲರೂ ಏಕಸ್ವರದಲ್ಲಿ ದೇವರು ತಾನು ಮಾಡಿದ ಸಮಸ್ತದಲ್ಲಿಯೂ ನ್ಯಾಯ ಹಾಗೂ ನೀತಿಯುಳ್ಳವನಾಗಿದ್ದನೆಂದು ಹೇಳುವರು.

## ಆಕ್ಷೇಪಣೆ ಮೂರು: "ದೇವರ ನೀತಿವಂತಿಕೆಯು ಕಡೆಮೆಯಾಗಿ ಎಣಿಸಲ್ಪಟ್ಟಿದೆಯೋ?" (3:5, 6)

**5ನಾವು ನೀತಿ ತಪ್ಪಿನಡೆಯುವದರಿಂದ ದೇವರಲ್ಲಿರುವ ನೀತಿ ಪ್ರಸಿದ್ಧಿಗೆ ಬರುವದಾದರೆ ನಾವು ಏನು ಹೇಳೋಣ? ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು? (ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ) ಎಂದಿಗೂ ಅಲ್ಲ. 6ದೇವರು ಅನ್ಯಾಯಸ್ಥನಾಗಿದ್ದರೆ ಲೋಕಕ್ಕೆ ಹೇಗೆ ನ್ಯಾಯತೀರಿಸಾನು?**

**ವಚನ 5.** ಮೂರನೆಯ ಆಕ್ಷೇಪಣೆಯು ಹೀಗೆ ಆರಂಭಗೊಳ್ಳುತ್ತದೆ, **ನಾವು ನೀತಿ ತಪ್ಪಿ ನಡೆಯುವದರಿಂದ ದೇವರಲ್ಲಿರುವ ನೀತಿ ಪ್ರಸಿದ್ಧಿಗೆ ಬರುವದಾದರೆ.** ಅನುವಾದಿಸಲ್ಪಟ್ಟ "ಪ್ರಸಿದ್ಧಿಗೆ ಬರುವದಾದರೆ" (συνίστημι, *sunistēmi*) ಎಂಬುದು ಸಂಯುಕ್ತ ಪದವಾಗಿದ್ದು σύν (*sun*, "ಯೊಂದಿಗೆ") ಮತ್ತು– ἵστημι (*histēmi*, "ಇಡು") ಎಂಬ ಪದಗಳ ಜೋಡನೆಯಾಗಿರುತ್ತದೆ. ಅದು ಒಬ್ಬ ವ್ಯಕ್ತಿಯನ್ನು ಮತ್ತೊಬ್ಬನಿಗೆ ಅನುಕೂಲಕರವಾದ ರೀತಿಯಲ್ಲಿ ಪರಿಚಯ ಮಾಡಿ ಮಾತನ್ನಾಡುವದಕ್ಕೆ ಉಪಯೋಗಿಸಲ್ಪಡುತ್ತಿತ್ತು ("ಒಟ್ಟಾಗಿ ಇಡು"). AB ಇದನ್ನು "ನಮ್ಮ ನೀತಿಯು. . . .

ದೇವರ ನೀತಿಯನ್ನು ಸ್ಥಾಪಿಸುತ್ತದೆ ಮತ್ತು ಪ್ರದರ್ಶಿಸುತ್ತದೆ" ಎಂದು ಹೇಳುತ್ತದೆ. ದಾವೀದನ ಪಾಪದಿಂದಾದ (ಅನೀತಿ) ಒಂದು ಫಲಿತವೇನೆಂದರೆ ದೇವರು ನ್ಯಾಯವಂತನೆಂದು (ನೀತಿ) ತೋರಿಸಲ್ಪಟ್ಟನು (3:4). ಕಾಲ್ಪನಿಕ ವಿರೋಧಿಯು ತನ್ನ ಮುಂದಿನ ಆಕ್ಷೇಪಣೆಯನ್ನು ಒಂದು ಪ್ರಮೇಯದೊಂದಿಗೆ ಆರಂಭಿಸುತ್ತಾನೆ: ಯೆಹೂದ್ಯರ ನಂಬಿಗಸ್ತಿಕೆಯು ದೇವರ ನಂಬಿಗಸ್ತಿಕೆಯ ದಾರಿಯನ್ನು ಬಿಟ್ಟು ಹೋಗಲಿಲ್ಲ, ಆದರೆ ಬದಲಾಗಿ ದೇವರ ನಂಬಿಗಸ್ತಿಕೆಯನ್ನು ಇನ್ನಷ್ಟು ದೊಡ್ಡದಾಗಿ ಕಾಣುವಂತೆ ಮಾಡಿತು. ಮೊಟ್ಟಮೊದಲು, ಅದು ತದ್ವಿರುದ್ಧತೆಯ ಮೂಲಕ ಇದನ್ನು ಮಾಡಿತು-ಹೇಗೆ ಒಂದು ಹೊಲಸು ಬಟ್ಟೆಯೊಂದಿಗೆ ಹೋಲಿಸಿದರೆ ಈಗಷ್ಟೇ ತೊಳೆದ ಬಟ್ಟೆಯು ಎಷ್ಟು ಸ್ವಚ್ಛ ಎಂಬದನ್ನು ತೋರಿಸುತ್ತದೋ ಹಾಗೆಯೇ. ಎರಡನೆಯದಾಗಿ, ಅದು ಯೆಹೂದ್ಯರು ತಪ್ಪುಗಳನ್ನು ಮಾಡಿದಾಗ್ಯೂ

ಅವರೊಂದಿಗಿನ ತನ್ನ ಒಡಂಬಡಿಕೆಯ ವಾಗ್ದಾನವನ್ನು ಮುಂದುವರೆಸುವವನಾಗಿ ತನ್ನ ಕರುಣೆಯನ್ನು ತೋರಿಸುವದಕ್ಕೆ ದೇವರಿಗೆ ಅವಕಾಶ ಒದಗಿಸುವ ಮೂಲಕ ಇದನ್ನು ಮಾಡಿತು. ಈ ವಾದವನ್ನು ಈ ಮಾತುಗಳಲ್ಲಿ ಹೇಳಬಹುದು, "ನಮ್ಮ ಪಾಪಗಳು ದೇವರನ್ನು ಉತ್ತಮನಾಗಿ ಕಾಣಿಸಿಕೊಳ್ಳುವಂತೆ ಮಾಡುತ್ತವೆ" (SEB ನಲ್ಲಿ ಬರೆಯಲ್ಪಟ್ಟಿರುವ ಹಾಗೆ).

ಯೆಹೂದ್ಯರ ಅನೀತಿಯು ದೇವರ ನೀತಿಯನ್ನು ಮತ್ತಷ್ಟು ವಿಸ್ತಾರಗೊಳಿಸಿತೆಂದು ಹೇಳಿಯಾದ ಬಳಿಕ, ವಿರೋಧಿಯು ಮುಂದುವರೆಸಿ ಹೇಳಿದ್ದೇನೆಂದರೆ: **ನಾವು ಏನು ಹೇಳೋಣ?** ಅಥವಾ "ನಾವು ಯಾವ ನಿರ್ಧಾರಕ್ಕೆ ಬರಬೇಕು?" **ಉಗ್ರದಂಡನೆಯನ್ನು ಮಾಡುವ ದೇವರು ಅನ್ಯಾಯಸ್ಥನೇನು?**[18] ಆ ವಿಚಾರವನ್ನು ಈ ರೀತಿ ವಿಸ್ತರಿಸಬಹುದು, "ಪೌಲನೇ, ನೀನು ದೇವರ ಕೋಪಾಗ್ನಿಯ ಬಗ್ಗೆ ಮಾತಾಡಿದಿ [ನೋಡಿರಿ 1:18; 2:5, 8]; ಆದರೆ ದೇವರು ಯೆಹೂದ್ಯರಾದ ನಮ್ಮ ಮೇಲೆ ಕೋಪಾಗ್ನಿಯನ್ನು ತೋರ್ಪಡಿಸುವದೇ ಆದಲ್ಲಿ (ಆತನು ಅದನ್ನು ಅನ್ಯಜನರ ಮೇಲಂತೂ ತೋರಿಸಲೇಬೇಕು ನಿಜ), ಆತನು ನಮಗೆ ಮಾಡಿದ ವಾಗ್ದಾನಗಳನ್ನು ಕಾಪಾಡಿಕೊಳ್ಳಲು ವಿಫಲನಾಗುವನು. ಅದು ಆತನನ್ನು ಅನೀತಿಗೊಳಿಸುವದು-ಮತ್ತು ಆತನು ಖಂಡಿತ ಅನೀತಿವಂತನಲ್ಲ. ನಮ್ಮನ್ನು ದಂಡಿಸುವದು ದೇವರಿಗೆ ನ್ಯಾಯಯುತವಾಗಿರುವದಿಲ್ಲ!" ಯೆಹೂದ್ಯರು ಪಟ್ಟುಬಿಡದೆ ಒಂದು ವಿಚಾರವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು, ಏನೆಂದರೆ ಅವರು ಎಷ್ಟೇ ಪಾಪದಿಂದ ತುಂಬಿದ್ದರೂ, ಅವರು ಆಗಲೂ ದೇವರ ಒಡಂಬಡಿಕೆಯ ಜನಾಂಗವಾಗಿದ್ದಾರೆ ಎಂಬದಾಗಿ. ಹಾಗಿರುವಾಗ, ತಾವು ಎಷ್ಟೇ ಕೆಟ್ಟದ್ದಾಗಿ ನಡೆದುಕೊಂಡಿದ್ದಾಗ್ಯೂ ಅಂತ್ಯದಲ್ಲಿ, ದೇವರು ಅವರನ್ನು ರಕ್ಷಿಸುವನು ಎಂದು ನಂಬಿದ್ದರು.

ಪೌಲನು ಯೆಹೂದ್ಯರ ಸಂಗಡ ಮಾತಾಡುತ್ತಿರುವ ವೇಳೆ ನಿಜವಾಗಿಯೂ ಈ ಆಕ್ಷೇಪಣೆಯನ್ನು ಎದುರಿಸಿದ್ದನು, ಆದರೆ ಅದರ ಬಗ್ಗೆ ಸ್ವರವೆತ್ತುವದಕ್ಕೆ ಆಗಲೂ ಆತನಿಗೆ ಸಂಕೋಚವಿತ್ತು. ಆತನು ಕ್ಷಮೆ ಕೇಳುವ ಭಾವನೆಯೊಂದಿಗೆ ತನ್ನ ಉತ್ತರ/ಪ್ರತಿಕ್ರಿಯೆಯನ್ನು ಪ್ರತಿವಾದದ ವಿವರಣೆಯೊಂದಿಗೆ ಪ್ರಾರಂಭಿಸುತ್ತಾನೆ: **(ಈ ಮಾತನ್ನು ಲೋಕರೀತಿಯಾಗಿ ಆಡಿದ್ದೇನೆ).** ಅಂದರೆ, "ಮಾನವರು ತಮ್ಮ ಪಾಪಗಳನ್ನು ಸಮರ್ಥಿಸಿಕೊಳ್ಳಲು ಹೋಗಿ ಎಷ್ಟು ಹಾಸ್ಯಾಸ್ಪದವಾಗಿ ವರ್ತಿಸುತ್ತಾರೆಂಬುದನ್ನು ನಿಮಗೆ ತೋರಿಸಲು ಪ್ರಯತ್ನಿಸುತ್ತಿದ್ದೇನೆ!"

**ವಚನ 6.** ದೇವರು ಎಂದಾದರೂ ಅನೀತಿವಂತನಾಗಿರಬಲ್ಲನೆಂಬ ಪರೋಕ್ಷ ಆರೋಪಕ್ಕೆ ಕಠೋರ ಮಾತುಗಳಲ್ಲಿ ಪ್ರತಿಕ್ರಿಯಿಸುತ್ತಾನೆ **ಎಂದಿಗೂ ಅಲ್ಲ!** ಆದಾದ ಮೇಲೆ ಆತನು ಒರಟಾದ ರೀತಿಯಲ್ಲಿ ಅದನ್ನು ಖಂಡಿಸುತ್ತಾನೆ: **ದೇವರು ಅನ್ಯಾಯಸ್ಥನಾಗಿದ್ದರೆ ಲೋಕಕ್ಕೆ ಹೇಗೆ ನ್ಯಾಯತೀರಿಸಾನು?** ಈ ಮಾತುಗಳಲ್ಲಿ (1) ಒಂದು ಸ್ಪಷ್ಟ ಅರ್ಥವಿರುವಂತೆಯೂ (2) "ಅಷ್ಟೇನು ಸ್ಪಷ್ಟವಲ್ಲದ" ಅರ್ಥವಿಲ್ಲದಂತೆಯೂ ಇರುತ್ತದೆ. ಮೇಲ್ಗಡೆಯಲ್ಲಿ, ಪೌಲನು ಹೇಳುತ್ತಿರುವದೇನೆಂದರೆ, "ದೇವರು ಅನೀತಿವಂತನಾಗಿದ್ದರೆ, ಆತನು ಲೋಕಕ್ಕೆ ನ್ಯಾಯತೀರಿಸಲು ಅನರ್ಹನು. ಆತನು ಲೋಕಕ್ಕೆ ನ್ಯಾಯತೀರಿಸುವನೆಂಬುದನ್ನು ನೀವು ನಂಬುತ್ತಿರಾದ್ದರಿಂದ (ನೋಡಿರಿ ಆದಿಕಾಂಡ 18:25), ಆತನು ನೀತಿವಂತನೆಂಬುದನ್ನು ನೀವು ಒಪ್ಪಿಕೊಳ್ಳಲೇಬೇಕು."

ಹೇಗೂ, ಪೌಲನು ಅದಕ್ಕಿಂತ ಹೆಚ್ಚಿನದನ್ನು ಹೇಳುತ್ತಿದ್ದಾನೆ. ಆತನು ಯೆಹೂದ್ಯರ ಅನೀತಿಯು ದೇವರ ನೀತಿಯನ್ನು ಹೆಚ್ಚಿಸುತ್ತದೆ ಮತ್ತು ತನ್ನನ್ನು "ಉತ್ತಮನೆಂದು

ತೋರುವಂತೆ" ಮಾಡಿದದ್ದರಿಂದ ದೇವರು ಯೆಹೂದ್ಯರನ್ನು ದಂಡಿಸುವದು ನ್ಯಾಯವಲ್ಲ ಎಂಬ ವಾದಕ್ಕೆ ಉತ್ತರವನ್ನು ಕೊಡುತ್ತಿದ್ದಾನೆ. ಅದಕ್ಕೆ ಪ್ರತಿಯಾಗಿ ಪೌಲನು ಹೇಳಿದ್ದೇನೆಂದರೆ, "ನಮ್ಮ ವಾದವನ್ನು ಸಾಮಾನ್ಯ ಲೋಕದ ರೀತಿಯಲ್ಲಿ ಅನ್ವಯಿಸಿಕೊಳ್ಳೋಣ. ಅನ್ಯಜನರು ನಿಮಗಿಂತಲೂ ಹೆಚ್ಚು ಅನೀತಿವಂತರೆಂದು ನೀವು ನಂಬುತ್ತೀರಲ್ಲವೇ (ನೋಡಿರಿ 2:1). ಅನೀತಿಯು ದೇವರ ನೀತಿಯನ್ನು ಹೆಚ್ಚಿಸುವದೇ ಆದಲ್ಲಿ, ನಿಮ್ಮ ಅನೀತಿಗಿಂತಲೂ ಹೆಚ್ಚಾಗಿರುವಂಥ ಅನ್ಯಜನರ ಅನೀತಿಯು ದೇವರ ನೀತಿಯನ್ನು ಇನ್ನು ಎಷ್ಟೋ ಅಧಿಕವಾಗಿ ಹೆಚ್ಚಿಸಬೇಕಲ್ಲವೇ. ಅನ್ಯಜನರಿಗೆ ನ್ಯಾಯತೀರಿಸುವದಾದರೆ ಆತನು ಎರಡರಷ್ಟು ಅನ್ಯಾಯ ಮಾಡಿದಂತಾಗುತ್ತದೆ. ನಿಮ್ಮ ವಾದದ ಪ್ರಕಾರ, ದೇವರು *ಯಾರಿಗೂ* ನ್ಯಾಯತೀರಿಸಲಾಗದು. ನೀವು ಆತನನ್ನು ಲೋಕದ ನ್ಯಾಯಾಧಿಪತಿಯಾಗಿರದಂತೆ ಅನರ್ಹಗೊಳಿಸಿದ್ದೀರಿ!"

ಪೌಲನ ಪ್ರತಿಕ್ರಿಯೆಯ ಬಗ್ಗೆ ಆಲೋಚಿಸಿದ ಬಳಿಕ, ನಾವು ಯೆಹೂದ್ಯರ ಆಕ್ಷೇಪಣೆಯನ್ನು ನೋಡಿಬಿಟ್ಟು ಹೀಗೆ ಹೇಳುವ ಶೋದನೆಗೆ ಒಳಗಾಗಬಹುದು: "ಓ, ಅದೊಂದು ಮೂರ್ಖ ವಾದವಷ್ಟೇ! ಅದು ನಿಜಕ್ಕೂ ಹಾಸ್ಯಾಸ್ಪದವಾಗಿ ತೋರುತ್ತದೆ!" ಹೌದು, ನಿಜ, ಆದರೆ ನಾವು ಒಂದು ವಿವೇಚಿಸಬಹುದಾದ ಅಂಶವನ್ನು ನೋಡಬೇಕು. ನಾವು ಜೀವಿತದಲ್ಲಿ ಅನೇಕ ಸಂಗತಿಗಳನ್ನು ನೆಚ್ಚಿಕೊಂಡಿರಲು ಸಾಧ್ಯವಿಲ್ಲ, ಆದರೆ ಇದನ್ನು ಮಾತ್ರ ನೆಚ್ಚಿಕೊಂಡಿರಬಹುದಾಗಿದೆ: ಜನರು ತಪ್ಪು ಮಾಡುವಾಗ, ಅವರು ತಮ್ಮನ್ನು ಸಮರ್ಥಿಸಿಕೊಳ್ಳಲು ಪ್ರಗತಿಶೀಲ ವಿವರಣೆಗಳನ್ನು ಕೊಡಲು ಪ್ರಯತ್ನಿಸುವರು. ಆದಾಮನು ಕರ್ತನಿಗೆ ಹೀಗೆ ಹೇಳಿದನು, "ನನ್ನ ಜೊತೆಯಲ್ಲಿರುವದಕ್ಕೆ ನೀನು ಕೊಟ್ಟ ಸ್ತ್ರೀಯು ಆ ಮರದ ಹಣ್ಣನ್ನು *ನನಗೆ* ಕೊಟ್ಟಳು; ನಾನು ತಿಂದೆನು" (ಆದಿಕಾಂಡ 3:12; ಒತ್ತಿ ಹೇಳಿದ್ದು ನನ್ನದು). ಒಂದು ಚಿಕ್ಕ ಮಗು ತಟ್ಟೆಯೊಂದನ್ನು ಒಡೆಯುತ್ತದೆ, ಬಳಿಕ ನಾಯಿಯನ್ನು ತೋರಿಸಿ, "ಅದೇ ಮಾಡಿದ್ದು" ಎಂದು ಹೇಳುವದು. ಇತ್ತೀಚಿನ ಗೀಳು (latest fad) ಅನುಸರಿಸಲು ಹೋಗಲಿರುವ ಒಬ್ಬ ಯುವಕನು ತನ್ನ ಹೆತ್ತವರಿಗೆ, "ಆದರೆ *ಎಲ್ಲರೂ* ಅದನ್ನೇ ಮಾಡುತ್ತಿದ್ದಾರೆ!" ಎಂದು ಹೇಳುತ್ತಾನೆ. ಒಬ್ಬ ವಿವಾಹಿತ ಪುರುಷನು ತನ್ನ ಅನೈತಿಕ ಸಂಬಂಧವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾ ದುಃಖದಿಂದ ಹೇಳುತ್ತಾನೆ, "ನನ್ನ ಹೆಂಡತಿಯು ನನ್ನನ್ನು ಅರ್ಥವೇ ಮಾಡಿಕೊಳ್ಳುವದಿಲ್ಲ!" ಒಬ್ಬರು ಹೇಳಿದ ಹಾಗೇ, ಪಶ್ಚಾತ್ತಾಪ ಪಡುವದಕ್ಕಿಂತಲೂ ತರ್ಕಮಾಡುವದು ಸುಲಭವಾಗಿ ರುತ್ತದೆ. Leon Morris ಹೀಗೆ ಬರೆದನು, "ಪಾಪಿಗಳಾದ ನಾವು ನಮ್ಮನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾ ನಂಬಲಶಕ್ಯವಾದ ಜಾಣ್ಮೆಯನ್ನು ಪ್ರದರ್ಶಿ ಸುತ್ತೇವೆ."[19]

## ಆಕ್ಷೇಪಣೆ ನಾಲ್ಕು: "ನೀವು ದೇವರ ಮಹಿಮೆಯ ಕುರಿತು ಗೊಂದಲಕ್ಕಿಡಾಗಿಲ್ಲವೇ?" (3:7, 8)

**[7]ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವದು ಯಾಕೆ? [8]ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮನ್ನು ಕುರಿತು-ಇವರು ಹೀಗೆ ಬೋಧನೆ**

**ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ; ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ.**

**ವಚನ 7.** ಅದು ನಮ್ಮನ್ನು ನಾಲ್ಕನೆಯ ಆಕ್ಷೇಪಣೆಗೆ ತಂದು ನಿಲ್ಲಿಸುತ್ತದೆ. ಬಹುಶಃ. ಪೌಲನು ಹೇಳುತ್ತಾನೆ, **ನನ್ನ ಸುಳ್ಳಿನಿಂದ ದೇವರ ಸತ್ಯವು ಪ್ರಸಿದ್ಧಿಗೆ ಬಂದು ಆತನ ಮಹಿಮೆ ಹೆಚ್ಚಾದರೆ ಇನ್ನು ನನಗೆ ಪಾಪಿಯೆಂದು ತೀರ್ಪಾಗುವದು ಯಾಕೆ?**

ಪೌಲನು 7ನೇ ವಚನದಲ್ಲಿ "ನನ್ನ ಸುಳ್ಳಿನಿಂದ" ಎಂದು ಹೇಳಿದನು ಮತ್ತು "ನನಗೆ" ಎಂಬ ಪದವನ್ನು ಉಯೋಗಿಸಿದನೆಂಬುದನ್ನು ಕೆಲವರು ಗಮನಕ್ಕೆ ತರುತ್ತಾರೆ. ಅವರು ಸಲಹೆ ಮಾಡುವದೇನೆಂದರೆ ಪೌಲನು ಕೇವಲ ಮೂರು ಆಕ್ಷೇಪಣೆಗಳನ್ನು ಪರಿಚಯಿಸಿದನು ಮತ್ತು 7ನೇ ವಚನದಲ್ಲಿ ತನ್ನ ವಿರೋಧಿಯ ತರ್ಕವನ್ನು ಸ್ವತಃ ತನಗೆ ಅನ್ವಯಿಸಿಕೊಂಡನು. ಈ ವಚನದ ವ್ಯಾಖ್ಯಾನದ ಪ್ರಕಾರ ಪೌಲನು ಈ ರೀತಿಯಾಗಿ ಹೇಳುತ್ತಿರುವಂತೆ ತೋರುತ್ತದೆ: "ನಿಮ್ಮ ಪಾಪಗಳು ದೇವರ ಮಹಿಮೆಯನ್ನು ಹೆಚ್ಚಿಸಿದವೆಂದೂ ಈ ಕಾರಣದಿಂದ ಆತನು ನಿಮಗೆ ತೀರ್ಪು ಮಾಡಬಾರದೆಂದೂ ನೀವು ಹೇಳುತ್ತೀರಿ. ಆದರೆ, ಅದೇ ಸಮಯದಲ್ಲಿ, ನೀವು ನನ್ನನ್ನು ಒಬ್ಬ ಸುಳ್ಳುಗಾರನೆಂದು ಕರೆಯುತ್ತೀರಿ. ನಿಮ್ಮ ತರ್ಕವು ಸರಿಯಿದ್ದಲ್ಲಿ, ನೀವು ಹೇಳುವಂಥ ನನ್ನ ಸುಳ್ಳು ಸಹ ದೇವರ ಮಹಿಮೆಯನ್ನು ಹೆಚ್ಚಿಸಬೇಕಲ್ಲವೆ. ಅದು ಹಾಗಿರುವದಾದರೆ, ನೀವು ನನ್ನನ್ನು ಪಾಪಿ ಎಂದು ದೂಷಿಸುವದರಲ್ಲಿ ಯಾವದೇ ಅರ್ಥವಿರುವದಿಲ್ಲ!"

ಈ ರೀತಿಯ ವ್ಯಾಖ್ಯಾನವು ಖಂಡಿತ ಸಾಧ್ಯತೆಯಿರುತ್ತದೆ ಮತ್ತು ವಾಕ್ಯಭಾಗಕ್ಕೆ ಅದು ಅನ್ಯಾಯವನ್ನು ಮಾಡುವದಿಲ್ಲ. ಹೇಗೂ, "ಸುಳ್ಳು" ಎಂಬ ಪದದ ವಿಷಯದಲ್ಲಿ ನೋಡುವದಾದರೆ, ಕಾಲ್ಪನಿಕ ವಿರೋಧಿಯು ಇಲ್ಲಿ ಪೌಲನು ವಚನ 4ರಲ್ಲಿ ಪ್ರತಿ ಮನುಷ್ಯನೂ (ಪ್ರತಿ ಯೆಹೂದ್ಯನು ಎಂಬ ಸನ್ನಿವೇಶದಲ್ಲಿ) ಸುಳ್ಳುಗಾರನಾಗಿದ್ದಾನೆಂದು ಮಾಡಿದ ಆರೋಪದ ಬಗ್ಗೆ ಸೂಚಿಸುತ್ತಿದ್ದಾನೆಂದು ತೋರುತ್ತದೆ. ಪೌಲನು "ನಾನು" ಎಂಬದಾಗಿ ಉಪಯೋಗಿಸುವ ಕುರಿತು ನೋಡುವದಾದರೆ, ಆತನು ತನ್ನ ವಾಚಕರೊಂದಿಗೆ ಗುರುತಿಸಿಕೊಳ್ಳುವದಕ್ಕೆ ಅದನ್ನು ಉಪಯೋಗಿಸುತ್ತಿದ್ದಾನೆ.[20] ಪೌಲನು 7ನೇ ವಚನದಲ್ಲಿ ನಾಲ್ಕನೆಯ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಿದ್ದಾನೆಂದು ಹೇಳಬಹುದು, ಅದು ಈಗಷ್ಟೆ ವ್ಯಕ್ತಪಡಿಸಿದ ಆಕ್ಷೇಪಣೆಯಂತೆಯೇ ಇರುತ್ತದೆ (ನೋಡಿರಿ NIV; AB; CEV; NLT). ಯೆಹೂದಿ ವಿರೋಧಿಯು ಬಹುಶಃ ಹೀಗೆ ವಾದಿಸುತ್ತಿದ್ದಿರಬಹುದು, "ನಾವು ಸುಳ್ಳು ಹೇಳುವದು ದೇವರ ನಂಬಿಗಸ್ತಿಕೆಯನ್ನು ಹೆಚ್ಚಿಸುವದಾದರೆ ಮತ್ತು ಹೀಗೆ ಅಂತಿಮವಾಗಿ ದೇವರ ಮಹಿಮೆಯನ್ನು ಇನ್ನಷ್ಟು ಅಧಿಕಗೊಳಿಸುವದಾದರೆ, ಯೆಹೂದ್ಯರಾದ ನಾವು ಪಾಪಿಗಳು ಎಂಬದಾಗಿ ನೀನು (ಪೌಲ) ಏಕೆ ಪ್ರತಿಪಾದಿಸುತ್ತಿರುವಿ?"

**ವಚನ 8.** ಪೌಲನ ಮೂಲಭೂತ ಉತ್ತರವೇನಾಗಿತ್ತೆಂದರೆ, 5 ಮತ್ತು 7ನೇ ವಚನಗಳಲ್ಲಿ ವ್ಯಕ್ತಪಡಿಸಲಾಗಿರುವ ವಾದವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ದಾದರೆ, ಒಬ್ಬನು ಈ ನಿರ್ಧಾರಕ್ಕೆ ಬರಬೇಕಾಗುತ್ತದೇನೆಂದರೆ ಪಾಪ ಮಾಡುವದು *ಒಳ್ಳೇದು* ಯಾಕೆಂದರೆ ಅಂತ್ಯದಲ್ಲಿ, "ಪಾಪವು ದೇವರನ್ನು ಉತ್ತಮನೆಂದು ಕಾಣಿಸಿಕೊಳ್ಳುವಂತೆ ಮಾಡುತ್ತದೆ." ಈ ವಚನದಲ್ಲಿ, ಪೌಲನು ಅದನ್ನು ಈ ರೀತಿಯಲ್ಲಿ ಹೇಳುತ್ತಾನೆ, **ಮೇಲು ಬರುವಂತೆ ಕೇಡು ಮಾಡೋಣ ಎಂದು ಯಾಕೆ ಹೇಳಬಾರದು? ಕೆಲವರು ನಮ್ಮನ್ನು ಕುರಿತು-ಇವರು ಹೀಗೆ**

**ಬೋಧನೆ ಮಾಡುವವರೆಂದು ದೂಷಿಸಿ ಹೇಳುತ್ತಾರಲ್ಲಾ; ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ.**

"ಮೇಲು ಬರುವಂತೆ ಕೇಡು ಮಾಡೋಣ . . . ಎಂದು ಯಾಕೆ ಹೇಳಬಾರದು?" ಆ ರೀತಿ ಹೇಳಿದಾಗ, ಈ ತರ್ಕವು ಯಾರನ್ನಾದರೂ ಹಿಮ್ಮೆಟ್ಟಿಸುವದಾಗಿದೆ. ಕೆಟ್ಟದ್ದು *ಎಂದಿಗೂ* ಒಳ್ಳೇದಲ್ಲ, ಮತ್ತು ಪಾಪ *ಎಂದಿಗೂ* ಪ್ರಶಂಸಿಸಲ್ಪಡಬಾರದು.

ಯಾರಾದರೂ ಸಹ, "ಬನ್ನಿ ಪಾಪ ಮಾಡೋಣ, ಅದರಿಂದ ಮೇಲಾಗಲಿ" ಎಂದು ವಾದಿಸಬಲ್ಲರೋ? ಜನರು ಯಾವಾಗಲೂ ಇದನ್ನೇ ಮಾಡುತ್ತಾರೆ! ಅವರು ಈ ಮೇಲಿನ ಮಾತುಗಳನ್ನೇ ಉಪಯೋಗಿಸದಿರಬಹುದು, ಆದರೆ ಅವರ ಮಾತಿನ ತತ್ವವು ಅದೇ ಆಗಿರುತ್ತದೆ. 8ನೇ ವಚನದ ಮೊದಲ ಅರ್ಧಭಾಗದಲ್ಲಿ, ಪೌಲನು ಮಧ್ಯದಲ್ಲೊಂದು ಮಾತು ಸೇರಿಸುತ್ತಾನೆ: "(ನಮ್ಮ ಮೇಲೆ ಕೆಲವರು ದೂಷಿಸಿ ಹೇಳುವ ಹಾಗೆ ಮತ್ತು ನಾವು ಹೇಳುತ್ತಿದ್ದೇವೆಂದು ಆರೋಪಿಸುವ ಹಾಗೆ)." "ನಾವು" ಎಂಬುದು ಬಹುಶಃ "ಸಂಪಾದಕೀಯ ನಾವು" ಆಗಿರಬಹುದು, ಅದು ಪೌಲನನ್ನು ಮಾತ್ರವೇ ಸೂಚಿಸುತ್ತದೆ. ಆತನು ತನ್ನ ವಿರೋಧಿಗಳು *ಆತನ* ಮತ್ತು ಆತನ ಉಪದೇಶಗಳನ್ನು ಕುರಿತು ಮಾಡುವ ದೂಷಣೆ ಬಗ್ಗೆ ಮಾತಾಡುತ್ತಿದ್ದಾನೆ. ಆತನು "ನಾವು ಕೆಟ್ಟದ್ದನ್ನು ಮಾಡೋಣ, ಹೀಗೆ ಅದರಿಂದ ಮೇಲು ಬರುವದು" ಎಂದು ಕಲಿಸುತ್ತಿರುವದಾಗಿ ಹೇಳಿಕೊಳ್ಳುತ್ತಿದ್ದರೆಂದು ತೋರುತ್ತದೆ. ಅದು ಕೃಪೆಯ ಬಗ್ಗೆ ಪೌಲನು ಮಾಡುತ್ತಿದ್ದ ಬೋಧನೆಯ ವಿಷಯವಾಗಿರಬಹುದು. 5:20 ರಲ್ಲಿ, "ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಭಲವಾಯಿತು" ಎಂದು ಪೌಲನು ಬರೆಯುತ್ತಾನೆ. ಪೌಲನ ವಿರೋಧಿಗಳು ಈ ಉಪದೇಶವನ್ನು ತಿರುಚಿಹಾಕಿ, "ನಾವು ಹೆಚ್ಚೆಚ್ಚು ಪಾಪ ಮಾಡಿದ ಹಾಗೆ, ನಮಗೆ ಹೆಚ್ಚು ಕೃಪೆಯು ಸಿಕ್ಕುತ್ತದೆ ಆದ್ದರಿಂದ ನಾವು ಏನೆಲ್ಲಾ ಸಾಧ್ಯವೋ ಅಷ್ಟೆಲ್ಲಾ ಪಾಪ ಮಾಡಬೇಕಿದೆ!" ಎನ್ನಲಾರಂಭಿಸಿದ್ದರು (ನೋಡಿರಿ 2 ಪೇತ್ರ 3:16). ಪೌಲನು ಆ ದೂಷಣೆಯಿಂದ ಕೂಡಿದ ತಪ್ಪುನಿರೂಪಣೆಯ ಬಗ್ಗೆ 6:1, 2ರಲ್ಲಿ ವಿವರಿಸಿ ಬರೆಯುತ್ತಾನೆ.

"ಮೇಲು ಬರುವಂತೆ ಕೇಡು ಮಾಡೋಣ" ಎಂಬ ತತ್ವವು ಖಂಡನೆಗೆ ಯೋಗ್ಯವೆಂದು ಪೌಲನು ಭಾವಿಸಲಿಲ್ಲ. ಬದಲಾಗಿ, ಆತನು ತನ್ನ ಕ್ಲುಪ್ತವಾದ ಆದರೆ ಶಕ್ತಿಶಾಲಿ ಹೇಳಿಕೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ: **ಅಂಥವರಿಗೆ ದಂಡನೆಯ ತೀರ್ಪಾಗುವದು ನ್ಯಾಯ.** ಮೂಲಪ್ರತಿಯಲ್ಲಿ ಅಕ್ಷರಶಃ, "ಅವರ ನ್ಯಾಯತೀರ್ಪು ನ್ಯಾಯವಾದದ್ದೇ" ಎಂದಿರುತ್ತದೆ. "ಅವರ" ಎಂಬುದು "ಮೇಲು ಬರುವಂತೆ ಕೇಡು ಮಾಡೋಣ" ಎಂದು ಹೇಳಿದವರನ್ನು ಸೂಚಿಸುತ್ತದೋ, ಆ ಹೇಳಿಕೆಯನ್ನೇ ಸೂಚಿಸುತ್ತದೋ ಅಥವಾ ಪೌಲನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿದವರನ್ನು ಸೂಚಿಸುತ್ತದೋ ಎಂಬದು ಸ್ಪಷ್ಟವಾಗಿಲ್ಲ (ಇತರ ತರ್ಜುಮೆಗಳನ್ನು ಹೋಲಿಸಿ ನೋಡಿರಿ). ಇವುಗಳಲ್ಲಿ ಯಾವದನ್ನು ಪೌಲನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದರೂ, ಇಲ್ಲಿ ಒತ್ತು "ನ್ಯಾಯ" ಎಂಬದರ ಮೇಲೆ ಇರುತ್ತದೆ. ಯೆಹೂದ್ಯರು ತಾವು ಬಯಸಿದ ಎಲ್ಲಾ ರೀತಿಯಲ್ಲಿ ವಾದವನ್ನು ಮಾಡಬಹುದು-ಆದರೆ ಅಂತ್ಯದಲ್ಲಿ, ಅವರು ಆಗಲೂ ಪಾಪಿಗಳೇ ಆಗಿದ್ದರು. ಆದ್ದರಿಂದ ದೇವರು ಅವರಿಗೆ ದಂಡನೆ ತೀರ್ಪು ನೀಡುವದು ಅನ್ಯಾಯವಲ್ಲಾ; ಅದು "ನ್ಯಾಯ" ವೇ ಆಗಿತ್ತು.

1 ರಿಂದ 8ರ ವರೆಗಿನ ವಚನಗಳು ಹೃದಯದೊಂದಿಗೆ ಮಾತಾಡುವ ಹೇಳಿಕೆಗಳಿಂದ ತುಂಬಿರುತ್ತವೆ. John Calvin ಗೆ ಮನವರಿಕೆಯಾಗಿದ್ದೇನೆಂದರೆ ವಚನ 4ರಲ್ಲಿನ ಪೌಲನ-

"ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ" (KJV)- ಮಾತುಗಳು "ಎಲ್ಲಾ ಕ್ರೈಸ್ತ ತತ್ವಜ್ಞಾನದ ಪ್ರಾಥಮಿಕ ಸಿದ್ಧಸೂತ್ರವಾಗಿದೆ"[21] Edwards ಈ ಹೇಳಿಕೆಯನ್ನು "ಎಲ್ಲರೂ ಸುಳ್ಳುಗಾರರೆಂಬ ದಂಡಿಸುವಂಥ ಸತ್ಯ," ಆದರೆ "ದೇವರು ಸತ್ಯವಂತನು ಎಂಬ ವಿಮೋಚಿಸುವ ನಿರೀಕ್ಷೆಯನ್ನು"[22] ಒಳಗೊಂಡಿರುವಂಥದೆಂದು ಕಂಡನು. ಮನುಷ್ಯರು ಸುಳ್ಳುಗಾರರಾಗಿದ್ದರೂ ದೇವರು ಸತ್ಯವಂತನು. ಮನುಷ್ಯರು ವಿಶ್ವಾಸರ್ಹರಲ್ಲದಿದ್ದಾಗ್ಯೂ ದೇವರು ಭರವಸಯೋಗ್ಯನು. ಮನುಷ್ಯರನ್ನು ವಿಶ್ವಾಸಿಸಲು ಸಾಧ್ಯವಿಲ್ಲ, ಆದರೆ ದೇವರನ್ನು ವಿಶ್ವಾಸಿಸಬಹುದು.

ಒಂದು ಮಹತ್ವದ ಸತ್ಯವು ಎದ್ದು ಕಾಣುತ್ತದೆ: ಯೆಹೂದ್ಯರು ಎತ್ತಬಹುದಾದ ಪ್ರತಿಯೊಂದು ಆಕ್ಷೇಪಣೆಗಳಿಗೆ ಪೌಲನು ಉತ್ತರಿಸಿದನು. ಎಲ್ಲಾ ವಿಷಯಗಳಲ್ಲಿ, ಯೆಹೂದ್ಯರು ನೀಡಿದ ಪ್ರತಿರೋಧಗಳಿಗೆ, ಪ್ರೇರಿತ ಪ್ರತಿಕ್ರಿಯೆಯು "ಆಕ್ಷೇಪಣೆಯನ್ನು ತಳ್ಳಿಹಾಕಲಾಗಿದೆ!" ಎಂದಿತ್ತು. ಯೆಹೂದ್ಯರು ಎಷ್ಟೇ ವಾದಗಳನ್ನು ಮಾಡಿದಾಗ್ಯೂ ಅವರು ಆಗಲೂ ರಕ್ಷಣೆಯ ಅಗತ್ಯವಿರುವ ಪಾಪಿಗಳೇ ಆಗಿದ್ದರು!

## ಅನ್ಯಜನರೂ ಯೆಹೂದ್ಯರೂ ಪಾಪದ ಅಡಿಯಲ್ಲಿದ್ದಾರೆ ಮತ್ತು ದೇವರ ನೀತಿಯ ಅಗತ್ಯತೆಯಲ್ಲಿದ್ದಾರೆ (3:9-20)

ಈ ವಚನಗಳು ರೋಮಾಪುರ ಪತ್ರಿಕೆಯ ಪ್ರಮುಖ ಭಾಗದ ಮೊದಲ ವಿಭಾಗದ ಅಂತ್ಯವನ್ನೊಳಗೊಂಡಿವೆ. ಈ ವಿಭಾಗದುದ್ದಕ್ಕೂ, ಪೌಲನು ನ್ಯಾಯಾಂಗದ ಪರಿಭಾಷೆಯನ್ನು ಉಪಯೋಗಿಸಿದ್ದಾನೆ. ಉದಾಹರಣೆಗೆ, 2:15ರಲ್ಲಿ ಆತನು ಅನ್ಯಜನರ ವಿಷಯವಾಗಿ, "ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿ ಪ್ರತಿವಾದಿಗಳಂತೆ ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ" ಎಂದು ಬರೆಯುತ್ತಾನೆ. 3:9-20ರಲ್ಲಿ ಪೌಲನು ಪುನಃ ನ್ಯಾಯ ವಿಚಾರಣೆಯ ಪರಿಭಾಷೆಯನ್ನು ಉಪಯೋಗಿಸುತ್ತಾನೆ. ಉದಾಹರಣೆಗೆ, ಆತನು ಹೇಳಿದ್ದೇನೆಂದರೆ, "ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ" (3:9). Morrisನು ಇಲ್ಲಿ ಲಕ್ಷಕ್ಕೆ ತರುವದೇನೆಂದರೆ, "ಭಾಷೆಯು [ವಚನ 9 ರಲ್ಲಿ] ಕಾನೂನು ಭಾಷೆಯಾಗಿದೆ, ರೋಮಾಪುರ ಪತ್ರಿಕೆಯ ಬಹಳಷ್ಟು ಭಾಗದಲ್ಲಿರುವಂತೆಯೇ ಇದಾಗಿದೆ."[23] REBಯಲ್ಲಿ ಹೀಗಿದೆ, "ಯೆಹೂದ್ಯರಾಗಲಿ ಗ್ರೀಕರಾಗಲಿ ಎಲ್ಲರೂ ಪಾಪದ ಬಲದಡಿಯಲ್ಲಿ ಸಿಕ್ಕಿಕೊಂಡಿದ್ದಾರೆಂಬುದನ್ನು ನಾವು ಮುಂಚೆಯೇ ಸಾಭಿತುಗೊಳಿ ಸಿದ್ದೇವಲ್ಲಾ." 1:18 ರಲ್ಲಿ ಆರಂಭವಾದ ನ್ಯಾಯ ವಿಚಾರಣೆಯು, ಈಗ ಮುಕ್ತಾಯಕ್ಕೆ ಬರುತ್ತಿದೆ. ಈಗ "ಅಂತಿಮ ತೀರ್ಪಿನ" ಸಮಯವಾಗಿರುತ್ತದೆ.

### ಮೂಲಭೂತ ವಾಗ್ದಾನ (3:9)

**9ಹಾಗಾದರೆ ಏನು ಹೇಳಬೇಕು? ನಾವು ಅನ್ಯರಿಗಿಂತ ಉತ್ತಮಸ್ಥಾನದಲ್ಲಿದ್ದೇವೋ? ಎಷ್ಟು ಮಾತ್ರಕ್ಕೂ ಇಲ್ಲ. ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ.**

**ವಚನ 9.** 3:1ರಲ್ಲಿ, ಈ ಪ್ರಶ್ನೆಯು ಕೇಳಲ್ಪಟ್ಟಿತು: “ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು?” ಪೌಲನು ಹೀಗೆ ಉತ್ತರಿಸಿದ್ದನು, “ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು” (3:2). ಈಗ ಅದೇ ರೀತಿಯ ಪ್ರಶ್ನೆಯನ್ನು ಕೇಳಲಾಗುತ್ತಿದೆ:[24] **ಹಾಗಾದರೆ ಏನು ಹೇಳಬೇಕು?** ನಾವು ಅನ್ಯರಿಗಿಂತ ಉತ್ತಮಸ್ಥಾನದಲ್ಲಿದ್ದೇವೋ**?** RSVಯಲ್ಲಿ ಹೀಗಿರುತ್ತದೆ, “ಯೆಹೂದ್ಯರಾದ[25] ನಾವು ಉತ್ತಮರೋ? [ಅಂದರೆ ಅನ್ಯಜನರಿಗಿಂತ ಉತ್ತಮರೋ]?” ಈ ಸಾರಿ ಪೌಲನು, **ಎಷ್ಟು ಮಾತ್ರಕ್ಕೂ** ಇಲ್ಲ ಎಂದು ಉತ್ತರಿಸುತ್ತಾನೆ. ಉತ್ತರಗಳಲ್ಲಿ ಏಕೆ ವ್ಯತ್ಯಾಸ? ಯಾಕೆಂದರೆ, ಪ್ರಶ್ನೆಗಳು ಒಂದಕ್ಕೊಂದು ಹೋಲುತ್ತವಾದರೂ ಅವುಗಳು ಒಂದೇ ಆಗಿರುವದಿಲ್ಲ.

> ಯೆಹೂದ್ಯನು ಅನ್ಯಜನಾಂಗದವನಿಗಿಂತ ಶ್ರೇಷ್ಠತ್ವದಲ್ಲಿದ್ದನೋ?
> ಹೌದು, ಯಾಕೆಂದರೆ ಆತನ ಬಳಿಯಲ್ಲಿ ಲಿಖಿತ ಧರ್ಮಶಾಸ್ತ್ರ ಇತ್ತು (3:2).
>
> ಆತನು ತನ್ನ ಶ್ರೇಷ್ಠತ್ವದ ಸದುಪಯೋಗಮಾಡಿದ್ದನೋ?
> ಇಲ್ಲ, ಯಾಕೆಂದರೆ ಆತನು ಧರ್ಮಶಾಸ್ತ್ರವನ್ನು ಕೈಕೊಳ್ಳಲು ವಿಫಲನಾಗಿದ್ದನು (ನೋಡಿರಿ 2:13, 23, 25).
>
> ದೇವರಿಂದ ಯಾವದೇ ಲಿಖಿತ ಧರ್ಮಶಾಸ್ತ್ರ ಕೊಡಲ್ಪಡದ ಅನ್ಯನಿಗಿಂತ ಆತನು ಉತ್ತಮನಾಗಿದ್ದನೋ? ಇಲ್ಲ.

1:18-32ರಲ್ಲಿ, ಅನ್ಯಜನರು (ಯೆಹೂದ್ಯೇತರರು, ಅಥವಾ ಗ್ರೀಕರು) ತಮಗೆ ಲಭ್ಯವಿದ್ದ ಧರ್ಮಶಾಸ್ತ್ರಕ್ಕೆ ವಿಧೇಯರಾಗಿರಲಿಲ್ಲ ಎಂಬದನ್ನು ಪೌಲನು ಸಾಭಿತುಗೊಳಿಸಿದ್ದನು. 2:2-3:8 ರಲ್ಲಿ, ಯೆಹೂದ್ಯರು ಹಾಗೆಯೇ ಆಗಿದ್ದಾರೆಂದು ಆತನು ಮುಕ್ತಾಯಕ್ಕೆ ಬಂದಿದ್ದನು. ಈಗ ಆತನು ಹೇಳಿದ್ದೇನೆಂದರೆ, **ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ** (1:18 ರಿಂದ ಇಲ್ಲಿಯವರೆಗೆ) **ತೋರಿಸಿಕೊಟ್ಟಿದ್ದೇವಲ್ಲಾ.** “ನಾವು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ” ಎಂಬ ಮಾತುಗಳು προαιτιάομαι (*proaitiaomai*) ಎಂಬದರಿಂದ ಬಂದಿವೆ, ಅದು “ಆರೋಪಿಸು” ಅಥವಾ “ಅಪವಾದಿಸು” (αἰτιάομαι, *aitiaomai*) ಎಂಬ ಪದದೊಂದಿಗೆ ಜೊತೆಯಾಗಿ “ಮುಂಚೆ” (πρό, *pro*) ಎಂಬ ಪದವನ್ನೊಳಗೊಂಡಿ ರುತ್ತದೆ.[26] ಈ ಪದವು “ಒಂದು ಅಪರಾಧಕ್ಕಾಗಿ ಮುಂಚೆಯೇ ದೋಷಿಯೆಂದು ತೀರ್ಮಾನಿಸಲ್ಪಟ್ಟವನು ಎಂದು ಬಿರುದು ಕೊಡಲು ಉಪಯೋಗಿಸಲಾಗುವ ಕಾನೂನು ಪದವಾಗಿತ್ತು.”[27]

ಯಾವ “ಅಪರಾಧ”? ಉತ್ತರವು ಪಾಪ. 1:18ನೇ ವಚನದಿಂದ ಪೌಲನ ಚರ್ಚೆಯು ಮಾನವ ಜನಾಂಗದ ಪಾಪದ ಕುರಿತಾಗಿರುತ್ತದೆ, ಆದರೆ “ಪಾಪ” ಎಂಬ ಪದದ ಮೊದಲ ಉಪಯೋಗ ಇದಾಗಿರುತ್ತದೆ. ಆತನು ಸುಮ್ಮನೆ “ಎಲ್ಲರೂ ಪಾಪ ಮಾಡಿದ್ದಾರೆ” ಎಂದು ಹೇಳಲಿಲ್ಲ (3:23 ರಲ್ಲಿ ಹೇಳಿದ ಹಾಗೆ), ಆದರೆ ಎಲ್ಲರೂ “ಪಾಪಕ್ಕೆ ಒಳಬಿದ್ದವರೇ” ಎಂದನು. “ಒಳಬಿದ್ದವರು” ಎಂಬದು ὑπό (*hupo*) ಎಂಬ ಉಪಸರ್ಗದ ಅನುವಾದವಾಗಿದೆ. *Hupo* ಎಂಬುದು “ನಿಯಂತ್ರಣದ ಸ್ಥಾನದಲ್ಲಿರುವದೊಂದನ್ನು ಗುರುತಿಸುವ” ಪದವಾಗಿರುತ್ತದೆ;

ಅಂಥ ಸಂದರ್ಭಗಳಲ್ಲಿ ಅದರರ್ಥವು, "ಇಂಥದ್ದರ ನಿಯಂತ್ರಣದಲ್ಲಿರುವ" ಎಂದಾಗುತ್ತದೆ.[28] (ನೋಡಿರಿ ಮತ್ತಾಯ 8:9; ಗಲಾತ್ಯ 3:25; 1 ತಿಮೊಥೆ 6:1). ರೋಮಾ 3:9 ರಲ್ಲಿ, RSVಯು ಇದನ್ನು "ಪಾಪದ ಶಕ್ತಿಯ ಅಡಿಯಲ್ಲಿರುವ" ಎಂದು ತರ್ಜುಮೆ ಮಾಡಲಾಗಿರುತ್ತದೆ. AB ಯಲ್ಲಿ ಇದು ಹೀಗಿರುತ್ತದೆ, "ಅದರಿಂದ ಕೈಯೊಳಗೆ ಹಿಡಿಯಲ್ಪಟ್ಟು ಅದರ ಅಧಿಕಾರ ಮತ್ತು ನಿಯಂತ್ರನಕ್ಕೊಳಪಟ್ಟದ್ದು."

"ಪಾಪ" ವನ್ನು ಇಲ್ಲಿ ಒಬ್ಬ ನಿರಂಕುಶ ಯಜಮಾನ ಎಂಬಂತೆ ಬಿಂಬಿಸಲಾಗಿದೆ. ಒಬ್ಬ ಮಾನವನು "ಪಾಪದ ಶಕ್ತಿಗೆ ಒಳಗಾಗಿ ಹುಟ್ಟುವದಿಲ್ಲ" ; ಆದರೆ ಆತನು ವೈಯಕ್ತಿಕ ಪಾಪವನ್ನು ಮಾಡಲು ಶಕ್ತನಾಗುವಷ್ಟು ದೊಡ್ಡವನಾದಾಗ, ಆತನು ಪಾಪಕ್ಕೆ *ಅಡಿಯಾಳು* ಆಗುತ್ತಾನೆ (6ನೇ ಅಧ್ಯಾಯ). ಮಾನವನು ಬಿಡುಗಡೆಗೊಳ್ಳುವದಕ್ಕಿರುವ ಏಕೈಕ ನಿರೀಕ್ಷೆಯು ಕ್ರಿಸ್ತನ ರಕ್ತವೇ.

## ವಿವರವಾದ ಸಾಕ್ಷ್ಯಾಧಾರ (3:10-19)

**10ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ; ಅವು ಯಾವವೆಂದರೆ-**
**"ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ;**
**11ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ.**
**12ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು.**
**ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.**
**13ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ. ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ; ಅವರ ತುಟಿಗಳ ಹಿಂದೆ ಹಾವಿನ ವಿಷವದೆ.**
**14ಅವರ ಬಾಯಿ ಶಾಪದಿಂದಲೂ ಕ್ರೋಧದ ಮಾತುಗಳಿಂದಲೂ ತುಂಬಿ ಅದೆ.**
**15ಅವರ ಕಾಲುಗಳು ರಕ್ತವನ್ನು ಸುರಿಸಲು ಆತುರಪಡುತ್ತವೆ.**
**16ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ.**
**17ಸಮಾಧಾನದ ಮಾರ್ಗವನ್ನೇ ಅರಿಯರು.**
**18ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ ಎಂಬವುಗಳೇ.**
**19ಧರ್ಮಶಾಸ್ತ್ರದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆಯೆಂದು ಬಲ್ಲೆವಷ್ಟೆ; ಹೀಗೆ ಎಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು.**

ಪೌಲನು ಈ ಮುಂಚೆ ತನ್ನ ಆಧಾರ ವಾಕ್ಯವನ್ನು ಹೇಳಿದ್ದನು: ಯೆಹೂದ್ಯರಾಗಲಿ ಅನ್ಯಜನರಾಗಲಿ ಇಬ್ಬರೂ ಪಾಪದ ಅಡಿಯಲ್ಲಿದ್ದಾರೆ ಮತ್ತು ದೇವರ ನೀತಿಯ ಅಗತ್ಯತೆಯಲ್ಲಿದ್ದಾರೆ. ಆತನಿಗೆ ಒಂದಂತೂ ಗೊತ್ತಿತ್ತು, ಏನೆಂದರೆ ಇವರಲ್ಲಿ ಒಂದು ಗುಂಪು-ಯೆಹೂದ್ಯರು-ಆ ತೀರ್ಪನ್ನು ವಿರೋಧಿಸಿ ನಿರ್ಣಾಯಕವಾದ ಸಾಕ್ಷ್ಯಾಧಾರ ನೀಡಬೇಕೆಂದು ಬೇಡಿಕೆಯಿಡುವರೆಂಬುದು ಆತನಿಗೆ ಗೊತ್ತಿತ್ತು. ಆ ಕಾರಣದಿಂದ ಅವರು ಬಹಳ ಹೆಚ್ಚಳಪಟ್ಟುಕೊಳ್ಳುತ್ತಿದ್ದ ಧರ್ಮಶಾಸ್ತ್ರದ ಕಡೆಗೆ ತಿರುಗಿಕೊಳ್ಳುತ್ತಾನೆ (ನೋಡಿರಿ 2:23).

10 ರಿಂದ 18 ವಚನಗಳಲ್ಲಿ, ಪೌಲನು ಹಳೇ ಒಡಂಬಡಿಕೆಯ ಪುಸ್ತಕಗಳಲ್ಲಿನ ಕನಿಷ್ಠ ಎರಡು ಪುಸ್ತಕಗಳ ಒಂಬತ್ತು ವಚನಗಳಿಂದ ಉಲ್ಲೇಖ ಮಾಡುತ್ತಾನೆ: ಕೀರ್ತನೆ ಮತ್ತು

ಯೆಶಾಯ.[29] ಬೈಬಲ್ ಕಾಲದಲ್ಲಿ, ಈ ವಿಧಾನವನ್ನು *charaz* ಎಂದು ಕರೆಯಲಾಗುತ್ತಿತ್ತು, ಅದರ ಅರ್ಥವು "ಮುತ್ತುಗಳನ್ನು ಒಂದಾಗಿ ಪೋಣಿಸುವದು"[30] ಎಂದಾಗಿರುತ್ತದೆ. ಇಂದು, ಇದಕ್ಕೆ ನಾವು "ಸಾಕ್ಷ್ಯಾಧಾರ ವಾಕ್ಯಭಾಗಗಳ" ಸರಮಾಲೆ ಎಂದು ಕರೆಯಬಹುದು. ಪೌಲನು ಈ ವಿಧಾನವನ್ನು ಹಲವಾರು ಸಾರಿ ಉಪಯೋಗಿಸುತ್ತಾನೆ (ನೋಡಿರಿ 9:25-27; 10:18-21; 11:8-10; 15:9-12), ಆದರೆ ಇದು ಪತ್ರಿಕೆಯಲ್ಲಿ ಹಳೇ ಒಡಂಬಡಿಕೆಯ ವಚನಗಳ ಅತಿ ಉದ್ದವಾದ ಭಾಗವಾಗಿದೆ. ವಾಸ್ತವದಲ್ಲಿ, ಹೊಸ ಒಡಂಬಡಿಕೆಯಲ್ಲಿಯೇ ಅಂಥದೊಂದು ಅನುಕ್ರಮದಲ್ಲಿ ಅತಿ ಉದ್ದವಾದದ್ದಾಗಿದೆ.

**ವಚನಗಳು 10-12. ಆತನು ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ** ಎಂದು ಆರಂಭಿಸುತ್ತಾನೆ. ಪೌಲನು ಸಾಮಾನ್ಯವಾಗಿ ಮಾಡುವಂತೆಯೇ, ಹಳೇ ಒಡಂಬಡಿಕೆಯ ಗ್ರೀಕ್ ತರ್ಜುಮೆಯಿಂದ ಉಲ್ಲೇಖಿಸುತ್ತಾನೆ. ಆತನು ಮೊದಲು ಕೀರ್ತನೆ 14:1-3 ರಿಂದ ಉಲ್ಲೇಖಿಸುತ್ತಾನೆ,[31] ಇದು ಮಾನವರ *ಬಂಡಾಯದ ಸ್ಥಿತಿಯ* ಕುರಿತಾಗಿರುತ್ತದೆ: **"ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ; ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ. ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು. ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ."** ಇಲ್ಲಿ "ನೀತಿವಂತನು" ಎಂಬದನ್ನು ದೇವರ ಸಂಗಡ ಸರಿಯಾಗಿರುವದು ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಎಲ್ಲಾ ಜವಾಬ್ದಾರಿಯುಳ್ಳ ಜನರು ಸರಿ ಎಣಿಸುವ ಕೆಲವು ಸಂಗತಿಗಳನ್ನು ಮಾಡುವರು, ಆದರೆ ಅವರು ತಪ್ಪಾದ ಕೆಲವು ಸಂಗತಿಗಳನ್ನು ಸಹ ಮಾಡುವರು. ಅದರ ಫಲಿತವಾಗಿ, ಅವರು ದೇವರ ಮುಂದೆ ದೋಷಿಗಳಾಗಿ ನಿಲ್ಲುತ್ತಾರೆ (ನೋಡಿರಿ ಯಾಕೋಬ 2:10).

ಇದು ಏಕೆ ಹೀಗಿರುತ್ತದೆ? ಈ ಪರಿಸ್ಥಿತಿಯನ್ನು ಮಣ್ಣು ಮತ್ತು ಸ್ವಲ್ಪ ನೀರಿನಿಂದ ತುಂಬಿದ್ದ ಒಂದು ಪಾತ್ರೆಯ ದೃಷ್ಟಾಂತದಿಂದ ವಿವರಿಸಬಹುದು. ಸ್ವಲ್ಪ ಸ್ವಚ್ಛ ನೀರನ್ನು ಮಣ್ಣಿನಲ್ಲಿ ಹಾಕಿರಿ. ನೀರು ಮಣ್ಣನ್ನು ಸ್ವಚ್ಛ ಮಾಡುತ್ತದೋ? ಇಲ್ಲ. ಈಗ ಸ್ವಲ್ಪ ಮಣ್ಣನ್ನು ನೀರಿನಲ್ಲಿ ಹಾಕಿರಿ. ಮಣ್ಣು ನೀರನ್ನು ಸ್ವಚ್ಛ ಮಾಡುತ್ತದೋ? ಖಂಡಿತ ಇಲ್ಲ. ಪಾಪವು ಸಹ ಹಾಗೆಯೇ: ನಿಮ್ಮ ಜೀವಿತಲ್ಲಿ ಎಷ್ಟೇ ಒಳ್ಳೇದು ಇದ್ದರೂ ಸ್ವಲ್ಪ ಕೆಟ್ಟದ್ದು ಸಹ ಇರುತ್ತದೆ-ಮತ್ತು ಅದು ನಿಮ್ಮನ್ನು ಪಾಪಿಯಾಗಿ ಮಾಡುತ್ತದೆ (ನೋಡಿರಿ ಯಾಕೋಬ 2:10). ಇದಕ್ಕೆ ಯಾರಾದರೂ ಹೊರತಾಗಿರುತ್ತಾರೋ?[32] ಈ ವಿಷಯದಲ್ಲಿ ಕೀರ್ತನೆಗಾರನು ಇದರ ಬಗ್ಗೆ ಬಹಳ ಸ್ಪಷ್ಟವಾಗಿ ತಿಳಿಸುತ್ತಾನೆ. ಪೌಲನು ಆತನ ಮಾತುಗಳನ್ನು ಉಲ್ಲೇಖಿಸುತ್ತಾ ಹೀಗೆ ಬರೆಯುತ್ತಾನೆ, ". . . ಇಲ್ಲ. . . . ಒಬ್ಬನಾದರೂ ಇಲ್ಲ. . . . ಇಲ್ಲವೇ ಇಲ್ಲ. . . . ಒಬ್ಬನಾದರೂ ಇಲ್ಲ" !

**ವಚನಗಳು 13, 14.** ಕೀರ್ತನೆ 14ರ ಸಾರ್ವತ್ರಿಕ ಖಂಡನೆ ತಮಗೆ ಅನ್ವಯವಾಗುವದಿಲ್ಲವೆಂದು ಯಾರಾದರೂ ನಿರಾಕರಿಸುವದನ್ನು ತಡೆಯಲು, ಪೌಲನು ಮುಂದೆ ಅತ್ಯಂಥ ಸಾಮಾನ್ಯ ಪಾಪವೊಂದನ್ನು ಉಲ್ಲೇಖಿಸುತ್ತಾನೆ: ನಾಲಿಗೆಯ ಪಾಪ. ಆತನು ಮಾನವರ ಹೇಸಿಗೆಯ ಸಂಭಾಷಣೆಯ ಕುರಿತ ಮೂರು ವಾಕ್ಯಭಾಗಗಳನ್ನು ಪ್ರಸ್ತಾಪಿಸುತ್ತಾನೆ: **"ಅವರ ಗಂಟಲು ತೆರೆದಿರುವ ಸಮಾಧಿಯಾಗಿದೆ, ಅವರು ನಾಲಿಗೆಯಿಂದ ವಂಚನೆಯ ಮಾತುಗಳನ್ನಾಡುತ್ತಾರೆ"** (ನೋಡಿರಿ ಕೀರ್ತನೆ 5:9); **"ಅವರ ತುಟಿಗಳ ಹಿಂದೆ ಹಾವಿನ ವಿಷವದೆ"** (ನೋಡಿರಿ ಕೀರ್ತನೆ 140:3); **"ಅವರ ಬಾಯಿ ಶಾಪದಿಂದಲೂ ಕ್ರೋಧದ**

**ಮಾತುಗಳಿಂದಲೂ ತುಂಬಿ ಅದೆ"** (ನೋಡಿರಿ ಕೀರ್ತನೆ 10:7). ಯಾವನಾದರೂ ಅದನ್ನು ನಿರಾಕರಿಸಲು ಸಾಧ್ಯವೋ, ಒಂದಲ್ಲಾ ಒಂದು ಸಮಯದಲ್ಲಿ, ಆತನು ತನ್ನ ನಾಲಿಗೆಯಿಂದ ಪಾಪ ಮಾಡಿರುತ್ತಾನೆ? ಖಂಡಿತ, ನಾವೆಲ್ಲರೂ ಯಾಕೋಬನ ಸಂಗಡ ಒಪ್ಪಿಕೊಳ್ಳಲೇಬೇಕು, ಆತನು ನಾಲಿಗೆಯನ್ನು "ಸುಮ್ಮನಿರಲಾರದ ಕೆಡುಕಾಗಿದೆ; ಮರಣಕರವಾದ ವಿಷದಿಂದ ತುಂಬಿ ಇದೆ" ಎಂದು ಹೇಳಿದ್ದಾನೆ (ಯಾಕೋಬ 3:8).

**ವಚನ 15-17.** ಅನೀತಿವಂತರು ಪಾಪದ ಎಷ್ಟು ಆಳತನಕ್ಕೆ ಹೋಗಬಲ್ಲರು? ಪೌಲನು ಈಗ ಮಾನವರ *ಪರಿಣಾಮಕ ನಡವಳಿಕೆ* ಬಗ್ಗೆ ಮಾತಾಡುತ್ತಾನೆ, ಯೆಶಾಯ 59:7, 8 ರಿಂದ ಉಲ್ಲೇಖಿಸುತ್ತಾನೆ: "ಅವರ ಕಾಲುಗಳು ರಕ್ತಸುರಿಸಲು ಆತುರ ಪಡುತ್ತವೆ. ಅವರು ಹೋದ ದಾರಿಗಳಲ್ಲಿ ನಾಶಸಂಕಟಗಳು ಉಂಟಾಗುತ್ತವೆ." Richard Rogers ಈ ಪದಗಳನ್ನು ಗಮನಕ್ಕೆ ತರುತ್ತಾರೆ, 13 ಮತ್ತು 14 ವಚನಗಳಿಂದ "ಗಂಟಲು," "ನಾಲಿಗೆಗಳು," "ತುಟಿಗಳು," ಮತ್ತು "ಬಾಯಿ" ಮತ್ತು 15 ನೇ ವಚನದಿಂದ "ಕಾಲುಗಳು." ಆತನು ನಂತರ ಮಾನವರಿಗೆ "ತಲೆಯಿಂದ ಕಾಲುಗಳ" ವರೆಗೆ ಒಂದು "ಮರಣಾಂತಿಕ ವ್ಯಾಧಿ ಇರುತ್ತದೆ"[33] ಎಂದುವ್ಯಾಖ್ಯಾನಿಸಿದನು.

ವಚನ **18.** ಪೌಲನು ಕೀರ್ತನೆ 36:1ರಿಂದ ಉಲ್ಲೇಖಿಸುವ ಮೂಲಕ ತನ್ನ ವಾಕ್ಯಭಾಗಗಳ ಸರಣಿಯನ್ನು ಮುಕ್ತಾಯಗೊಳಿಸುತ್ತಾನೆ: **"ಅವರ ಕಣ್ಣೆದುರಿಗೆ ದೇವರ ಭಯವೇ ಇಲ್ಲ."** "ಭಯ" (φόβος, *phobos*) ಎಂಬದು ಆಗಾಧವಾದ ಗೌರವ ಮತ್ತು ಪೂಜ್ಯ ಭಾವವನ್ನು ಸೂಚಿಸುತ್ತದೆ. ದೇವರನ್ನು ಗೌರವಿಸುವದಕ್ಕೆ ವಿಫಲವಾಗುವದು ಎಲ್ಲಾ ಪಾಪದ ಹೃದಯದಲ್ಲಿರುತ್ತದೆ. ದೇವರನ್ನು ಗೌರವಿಸದವನು ಇತರರನ್ನು ಗೌರವಿಸಲಾರನು; ಆತನು ತನ್ನನ್ನು ಸಹ ಗೌರವಿಸಲಾರನು.

ಕೆಲವರು ರೋಮಾ 3:9-18 ನ್ನು ಉಪಯೋಗಿಸಿ "ಸಂಪೂರ್ಣ ಅನುವಂಶಿಕವಾದ ಪಾಪವಾಸ್ಥೆ" ಯನ್ನು ಸಾಭಿತುಗೊಳಿಸಲು ಪ್ರಯತ್ನಿಸುತ್ತಾರೆ: ಈ ಬೋಧನೆ ಹೇಳುವ ದೇನೆಂದರೆ ಕೂಸುಗಳು ಹುಟ್ಟಿದಾಗ, ಅವರ ಆತ್ಮಗಳು ಆದಾಮನ ಪಾಪದ ಅಪರಾಧಿತ್ವ ಭಾರವನ್ನು ಹೊತ್ತುಕೊಂಡಿರುತ್ತವೆ ಎಂಬದಾಗಿ. ಈ ಸಂದರ್ಭದಲ್ಲಿ ಎರಡು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬಹುದು. ಮೊದಲನೆಯದು, ಸಾಮಾನ್ಯವಾಗಿ ಬೈಬಲ್ ಈ ಸಿದ್ಧಾಂತವನ್ನು ಕಲಿಸುವದಿಲ್ಲ. ಮಕ್ಕಳು ನಿರ್ಮಲರಾಗಿಯೂ ಪರಿಶುದ್ಧರಾಗಿಯೂ ಹುಟ್ಟಿರುತ್ತಾರೆ (ನೋಡಿರಿ ಮತ್ತಾಯ 18:3); ಪ್ರತಿ ವ್ಯಕ್ತಿಯು ಸಹ ಅವನ/ಅವಳ ಪಾಪಕ್ಕೆ ಹೊಣೆಗಾರನು, ಹೊರತು ಆದಾಮನ ಪಾಪವು ಅಲ್ಲ (ನೋಡಿರಿ ಯೆಹೆಜ್ಕೇಲ 18:20). ಎರಡನೆಯದಾಗಿ, ರೋಮಾ 3:9-18 ರಲ್ಲಿ ಉಲ್ಲೇಖಿಸಲ್ಪಟ್ಟಿರುವ ವಾಕ್ಯಭಾಗವು ಅಂತಹ ಸಿದ್ಧಾಂತವನ್ನು ಕಲಿಸುವದಿಲ್ಲ. ಹಳೇ ಒಡಂಬಡಿಕೆಯ ವಾಕ್ಯ ಭಾಗಗಳು ಜವಾಬ್ದಾರಿಯುಳ್ಳ ವ್ಯಕ್ತಿಗಳ ಬಗ್ಗೆ ಮಾತಾಡುತ್ತಿವೆ ಹೊರತು ಕೂಸುಗಳ ಬಗ್ಗೆ ಅಲ್ಲ.

**ವಚನ 19.** ಪೌಲನು ಯೆಹೂದ್ಯರಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದನು. ಕೀರ್ತನೆ ಮತ್ತು ಯೆಶಾಯ ಪುಸ್ತಕಗಳಿಂದ ಮಾಡಲಾದ ಬಹುಪಾಲು ಉಲ್ಲೇಖಗಳು ಮೂಲತಃ ಅನ್ಯಜನರಿಗೆ ಅಥವಾ ಇಸ್ರಾಯೇಲರಲ್ಲಿದ್ದ ಅಪನಂಬಿಗಸ್ತರಾದವರಿಗೆ ಸಂಭೋದಿಸಿ ಬರೆದವುಗಳಾಗಿದ್ದವು. ಈ ಕಾರಣಕ್ಕಾಗಿ, ಪೌಲನು ಇದನ್ನು ಸೇರಿಸಿ ಬರೆಯುತ್ತಾನೆ, **ಧರ್ಮಶಾಸ್ತ್ರದ**[34] **ನುಡಿಗಳಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ**[35] **ಹೇಳಿವೆಯೆಂದು ಬಲ್ಲೆವಷ್ಟೆ.** ಆತನ ವಾದವನ್ನು ಈ ರೀತಿ ಹೇಳಬಹುದು: ಧರ್ಮಶಾಸ್ತ್ರದಲ್ಲಿನ ನಿಖರವಾದ

ವಾಕ್ಯಭಾಗಗಳು ಇತರರಿಗೆ ಸಂಭೋದಿಸಲ್ಪಡಬಹುದು, ಆದರೆ ದೇವರು ಧರ್ಮಶಾಸ್ತ್ರವನ್ನು *ಯೆಹೂದ್ಯರಿಗೆ* ಕೊಟ್ಟನು. ದೇವರು ಧರ್ಮಶಾಸ್ತ್ರದಲ್ಲಿ ಏನೇನು ಸೇರಿಸಿದ್ದಾನೋ, ಅವುಗಳು ಯೆಹೂದ್ಯರು ತಮ್ಮ ಜೀವಿತಗಳಿಗೆ ಅನ್ವಯಿಸಿಕೊಳ್ಳ ಬೇಕೆಂಬುದು ಆತನ ಉದ್ದೇಶವಾಗಿತ್ತು. ಆದ್ದರಿಂದ, ಅಂತಿಮ ವಿಶ್ಲೇಷಣೆಯಂತೆ, ಧರ್ಮಶಾಸ್ತ್ರದಲ್ಲಿ ಬರೆದದ್ದೆಲ್ಲವೂ "ಧರ್ಮಶಾಸ್ತ್ರಕ್ಕೆ ಒಳಗಾದವರಿಗೇ" ಬರೆಯಲ್ಪಟ್ಟಿತು.

ಧರ್ಮಶಾಸ್ತ್ರವು ತನ್ನ ಅಧಿಕಾರದಡಿಯಲ್ಲಿ ಇರುವವರಿಗೆ ಮಾತಾಡುತ್ತದೆ, **ಹೀಗೆ ಎಲ್ಲರ ಬಾಯಿ ಕಟ್ಟಿಹೋಗುವದು, ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು.** "ಕಟ್ಟಲ್ಪಡಬೇಕಾಗಿದ್ದ" ಕೊನೆಯ "ಬಾಯಿ" ಯು ಯೆಹೂದ್ಯರದ್ದಾಗಿತ್ತು. ಅದು ಸಾಧಿಸಲ್ಪಟ್ಟರೆ, "ಲೋಕವೆಲ್ಲಾ" (ಯೆಹೂದ್ಯರೂ ಅನ್ಯಜನರೂ) ತಾವು ನಿಜವಾಗಿಯೂ "ದೇವರ ಮುಂದೆ ಅಪರಾಧಿಗಳು" ಎಂಬದನ್ನು ಮನದಟ್ಟು ಮಾಡಿಕೊಳ್ಳುವರು (ನೋಡಿರಿ 14:12).

ಪುನಃ, ನ್ಯಾಯಾಲಯದ ಸಾದೃಶ್ಯವನ್ನು ಉಪಯೋಗಿಸಲಾಗಿದೆ. "ಕಟ್ಟಲ್ಪಟ್ಟ ಬಾಯಿಗಳ ಉಲ್ಲೇಖವು ನ್ಯಾಯಲಯದಲ್ಲಿನ ಪ್ರತಿವಾದಿಯ ಚಿತ್ರಣವನ್ನು ನೆನಪಿಗೆ ತರುತ್ತದೆ, ಆತನಿಗೆ ತನ್ನ ಪರವಾಗಿ ವಾದವನ್ನು ಮಂಡಿಸಲು ಅವಕಾಶ ಕೊಡಲಾಗಿದ್ದರೂ ಮೌನವಾಗಿಯೇ ನಿಲ್ಲುತ್ತಾನೆ, ಯಾಕೆಂದರೆ ತನ್ನ ವಿರುದ್ಧವಾಗಿರುವ ಸಾಕ್ಷ್ಯಾಧಾರಗಳನ್ನು ನೋಡಿ ಮಾತೇ ಹೊರಡದಂತಾಗಿರುತ್ತದೆ."[36] NEB ಯಲ್ಲಿ ಹೀಗಿರುತ್ತದೆ, "ಒಬ್ಬನಿಗೂ ತನ್ನ ಪರವಾಗಿ ಸಮರ್ಥಿಸಿಕೊಂಡು ಹೇಳುವದಕ್ಕೆ ಏನೂ ಇರುವದಿಲ್ಲ."

## ಸ್ಥಿರವಾದ ತತ್ವ (3:20)

**[20]ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪ ಅರುಹು ಉಂಟಾಗುತ್ತದಷ್ಟೆ.**

ಯೆಹೂದ್ಯರ "ಬಾಯನ್ನು ಕಟ್ಟಿಹಾಕುವದಕ್ಕೆ" ಪೌಲನು ಇನ್ನೊಂದು ಸಂಗತಿಯನ್ನು ಹೇಳುವ ಅಗತ್ಯವಿತ್ತು. ಆ ದಿಸೆಯಲ್ಲಿ ಆತನು ಈಗಷ್ಟೆ, ಧರ್ಮಶಾಸ್ತ್ರವು ಅವರನ್ನು ಅಪರಾಧಿಯೆಂದು ನಿರ್ಣಯಿಸಿದೆ ಎಂದು ಹೇಳಿದ್ದನು. ಅದು ಅವರಿಗೆ ಅಂಗೀಕರಿಸಿಕೊಳ್ಳಲು ಬಹಳ ಕಷ್ಟಕರವಾಗಿತ್ತು. ಅವರು ನಂಬಿದ್ದೇನೆಂದರೆ, ಅವರಿಗೆ ರಕ್ಷಣೆಯ ನಿಶ್ಚಿತತೆ ಇರುವದಾಗಿದ್ದರೆ, ಅದು ದೇವರು ತಮಗೆ ಧರ್ಮಶಾಸ್ತ್ರವನ್ನು ಒಪ್ಪಿಸಿದ್ದಾನೆಂಬದೇ ಆಗಿತ್ತು. ಅವರ ಆ ನೆಚ್ಚಿನ ನಂಬಿಕೆಗೆ ಪೌಲನು ನೀಡುವ ಉತ್ತರವು "ಅಪರಾಧ ನಿರ್ಣಯದ" ವಿಭಾಗಕ್ಕೆ ಮುಕ್ತಾಯವೂ ಮುಂದಿನ "ನೀತಿನಿರ್ಣಯ" ವಿಭಾಗಕ್ಕೆ ಸೇತುವೆಯೂ ಆಗಿರುತ್ತದೆ.

**ವಚನ 20.** ರೋಮಾಪುರ ಪತ್ರಿಕೆಯನ್ನು ಅರ್ಥಮಾಡಿಕೊಳ್ಳಲು ಮಹತ್ವವಾಗಿರುವ ಒಂದು ತತ್ವವನ್ನು ಸ್ಥಾಪಿಸುತ್ತದೆ: **ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.**[37] ಅಕ್ಷರಶಃ, ಗ್ರೀಕ್ ಪ್ರತಿಯು ಸರಳ ಅರ್ಥವನ್ನು ಕೊಡುವದಾಗಿ "ಧರ್ಮಶಾಸ್ತ್ರದ ಕ್ರಿಯೆಗಳಿಂದ ಯಾವನೂ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ" ಎಂದು ಹೇಳುತ್ತದೆ. ಬಹು ಪಾಲು ತರ್ಜುಮೆಗಳು, NASBಯೂ ಸೇರಿದಂತೆ, "ಧರ್ಮಶಾಸ್ತ್ರ" (ಅಥವಾ ಅದಕ್ಕೆ

ಹೋಲಿಕೆಯಾಗುವಂಥ) ಎಂಬದಾಗಿ ಹೇಳುತ್ತವೆ ಯಾಕೆಂದರೆ ಪೌಲನು ನಿರೀಕ್ಷಿತ ಯೆಹೂದ್ಯರ ಆಕ್ಷೇಪಣೆಗೆ ಉತ್ತರಿಸುತ್ತಿದ್ದಾನೆ ಮತ್ತು ಪ್ರಾಥಮಿಕವಾಗಿ, ಮನಸ್ಸಿನಲ್ಲಿ ಮೋಶೆಯ ಧರ್ಮಶಾಸ್ತ್ರವನ್ನಿಟ್ಟುಕೊಂಡು ಬರೆಯುತ್ತಾನೆ. ಅದೇ ಸಮಯದಲ್ಲಿ, ಪೌಲನು ಒಂದು ಮಹತ್ವದ ಸತ್ಯವನ್ನು ಪರಿಚಯಿಸುತ್ತಿದ್ದಾನೆಂಬ ಅಂಶವನ್ನು ಸಹ ಮರೆಯಬಾರದು: ಯಾವನಾದರೂ *ಯಾವುದೇ* ಧರ್ಮಶಾಸ್ತ್ರದ ಕ್ರಿಯೆಗಳನ್ನು ಅನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.

ಅದು ಏಕೆ ಹಾಗೆ? ಪೌಲನು ಮುಂದುವರೆಸುತ್ತಾನೆ, **ಧರ್ಮಶಾಸ್ತ್ರದಿಂದ**[38] **ಪಾಪದ ಅರುಹು**[39] **ಉಂಟಾಗುತ್ತದಷ್ಟೆ.** ದೇವರ ಧರ್ಮಶಾಸ್ತ್ರವು ಪಾಪದ ತಿಳುವಳಿಕೆಯನ್ನು ಅನುಗ್ರಹಿಸುತ್ತಿದ್ದರಿಂದ, ಅದು ಎಲ್ಲಾ ಜನರನ್ನೂ ಪಾಪಿಗಳೆಂದು ಪ್ರಕಟಗೊಳಿಸುತ್ತದೆ. D. Martyn Lloyd-Jones ಹೀಗೆ ವಾದಿಸುತ್ತಾನೆ, "ನೀವು ಒಬ್ಬನ ಬಗ್ಗೆ ಉತ್ತಮನು, ಅತ್ಯಂಥ ಸಭ್ಯ, ಅತ್ಯಂಥ ಮೇಧಾವಿ, ಅತಿ [ಉದಾರವಾದ[, ಅತಿ ಶ್ರೇಷ್ಠ ಆದರ್ಶವಾದಿ, ಮಹಾನ್ ಚಿಂತಕ ಎಂದು ಆತನ ವಿಷಯದಲ್ಲಿ ನಿಮಗೆ ಇಷ್ಟವಾದ್ದನ್ನು ಹೇಳಬಹುದು- ಧರ್ಮಶಾಸ್ತ್ರದ ಪರೀಕ್ಷೆಯನ್ನು ಎದುರಿಸಿ ತೇರ್ಗಡೆಯಾದ ವ್ಯಕ್ತಿಯು ಒಬ್ಬನೂ ಇರುವದಿಲ್ಲ. ನಿಮ್ಮ ತೂಗುಗುಂಡನ್ನು[40] (ಲಂಬಕ ಸೂತ್ರ) ಬಿಡಿರಿ, ಯಾರೊಬ್ಬನೂ ಅದಕ್ಕೆ ಸತ್ಯವಂತನೆಂದು ನಿರೂಪಿಸಲ್ಪಡುವದಿಲ್ಲ."[41] Phillips ತರ್ಜುಮೆಯು ಇದೇ ರೀತಿಯ ಸಾದೃಶ್ಯವನ್ನು ಉಪಯೋಗಿಸುತ್ತದೆ: "ನಾವು ಎಷ್ಟು ವಕ್ರರು ಎಂಬದನ್ನು ಧರ್ಮಶಾಸ್ತ್ರದ ನೇರ ಬೇಲಿಯು ತೋರಿಸುತ್ತದೆ."

ಪೌಲನು ಈ ಸತ್ಯವನ್ನು 7ನೇ ಅಧ್ಯಾಯಕ್ಕೆ ವಿಸ್ತರಿಸುತ್ತಾನೆ, ಆದರೆ ಈ ತತ್ವದ ಒಂದು ಅಂಶವನ್ನು ಈಗ ಒತ್ತಿ ಹೇಳಬೇಕಾಗಿರುತ್ತದೆ: ಧರ್ಮಶಾಸ್ತ್ರದ-ಯಾವುದೇ ಧರ್ಮಶಾಸ್ತ್ರದ- ಉದ್ದೇಶವು ತಪ್ಪು ನಡೆಯನ್ನು *ಬಯಲಿಗೆ ತರುವದೇ* ಹೊರತು ತಪ್ಪು ನಡೆಗಳನ್ನು *ಮನ್ನಿಸುವದಲ್ಲ.* ಉದಾಹರಣೆಗೆ, ಹೆದ್ದಾರಿಯ ವೇಗದ ನಿಯಮಗಳನ್ನು ತೆಗೆದುಕೊಳ್ಳಿರಿ. ಒಬ್ಬನು ತನ್ನ ಕಾರನ್ನು ಚಲಾಯಿಸುವಾಗ, ಆತನು ಏಕಾಗ್ರತೆಯನ್ನು ಕಳೆದುಕೊಳ್ಳುತ್ತಾನೆ ಮತ್ತು ಆತನ ವೇಗವು ದೇಶದ ಕಾನೂನಿನ ಮೀತಿಯನ್ನು ಮೀರುತ್ತದೆ ಎಂದು ಉಹಿಸಿಕೊಳ್ಳಿರಿ. ಆಗ ಒಬ್ಬ ಪೋಲಿಸ್ ಆತನನ್ನು ನಿಲ್ಲಿಸುತ್ತಾನೆ. "ನೀನು ಗಂಟೆಗೆ 55 ಕೀ.ಮಿ. ವಲಯದಲ್ಲಿ ಗಂಟೆಗೆ 65 ಕೀ.ಮಿ. ಗಳಷ್ಟು ವೇಗವಾಗಿ ಚಲಾಯಿಸುತ್ತೀರುವಿ," ಎಂದು ಕೇಳುತ್ತಾನೆ. ಆಗ "ಅದಕ್ಕೇನು, ಪರವಾಗಿಲ್ಲ" ಎಂದು ಚಾಲಕ ಅನ್ನುತ್ತಾನೆ. "ಮೊದಲ 50 ಮೈಲುಗಳ ವರೆಗೂ ನಾನು ವೇಗದ ಮೀತಿಯ ಒಳಗೇ ಓಡಿಸುತ್ತಿದ್ದೆನು. ಆದ್ದರಿಂದ ಈ ಒಂದು ತಪ್ಪನ್ನು ಅದು ಮುಚ್ಚುತ್ತದೆ." ಆಗ ಪೋಲಿಸ್ ಅಧಿಕಾರಿಯ ಪ್ರತಿಕ್ರಿಯೆಯು ಏನಾಗಿರಬಹುದೆಂದು ನಿಮಗೆ ಅನ್ನಿಸುತ್ತದೆ? ಅವನ ಉತ್ತರವನ್ನು ಕೇಳಿ ನಕ್ಕು ,ನಂತರ ನಗುವದನ್ನು ನಿಲ್ಲಿಸಿ, ಆತನಿಗೆ ದೊಡ್ಡ ಮೊತ್ತದ ದಂಡ ಕಟ್ಟುವಂತೆ ರಷೀದಿಯನ್ನು ಕೊಡುತ್ತಾನೆಂಬದರಲ್ಲಿ ಸಂಶಯವಿಲ್ಲ.

ಯಾಕೋಬನು ಬೇರೆ ಸಾದೃಶ್ಯವನ್ನು ಉಪಯೋಗಿಸುತ್ತಾನೆ, ವಾಕ್ಯವನ್ನು ಕನ್ನಡಿಗೆ ಹೋಲಿಸುತ್ತಾನೆ (ಯಾಕೋಬ 1:23). ಕನ್ನಡಿಯು ಒಬ್ಬನ ಕೆನ್ನೆಯ ಮೇಲೆ ಕೊಳೆ ಇರುವದನ್ನು ತೋರಿಸಬಲ್ಲದು, ಆದರೆ ಅದು ಆ ಕೊಳೆಯನ್ನು ತೆಗೆಯಲಾರದು. ಅದೇ ರೀತಿಯಲ್ಲಿ, Rogers ಹೇಳುವ ಹಾಗೆ, "ಧರ್ಮಶಾಸ್ತ್ರವು ತಿಳುವಳಿಕೆಯನ್ನು ನೀಡಬಲ್ಲದು, ಆದರೆ ಅಳಿಸಿಹಾಕಲಾರದು."[42]

ಈ ತತ್ವವನ್ನು ನಾವು ಹೃದಯಕ್ಕೆ ತೆಗೆದುಕೊಳ್ಳುವದು ಬಹಳ ಮಹತ್ವದ್ದಾಗಿರುತ್ತದೆ. ನಮ್ಮಲ್ಲಿ ಅನೇಕರು ಧರ್ಮಶಾಸ್ತ್ರದ ಆಯಕಟ್ಟಿನಂತಿದ್ದೇವೆ. ನಾವು ಯಾವದು "ಸರಿ" ಮತ್ತು ಯಾವದು "ತಪ್ಪು" ಎಂಬದನ್ನು ತಿಳಿಯಲಿಚ್ಚಿಸುತ್ತೇವೆ. ನಾವು "ನಿಯಮಗಳು" ಯಾವವು ಎಂಬದನ್ನು ತಿಳಿಯಲು ಬಯಸುತ್ತೇವೆ. ಅದರಲ್ಲಿ ಯಾವ ತಪ್ಪೂ ಇಲ್ಲ. . .ಆದರೆ ಅಲ್ಲೊಂದು ಅಪಾಯವಿರುತ್ತದೆ: ಧರ್ಮವು ಕೇವಲ ನಿಯಮವನ್ನು ಪಾಲಿಸುವ ಬಗ್ಗೆ ಮಾತ್ರ ಕಾಳಜಿ ಹೊಂದಿರುತ್ತದೆ ಎಂಬ ನಿರ್ಧಾರಕ್ಕೆ ನಾವು ಬರುವ ಅಪಾಯವಿದೆ. ಈ ವಿಚಾರವನ್ನು ಅಪಾರ್ಥಮಾಡಿಕೊಳ್ಳಬೇಡಿರಿ. ನಮ್ಮ ಶಕ್ತಿಮೀರಿ ದೇವರ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದು ಬಹಳ ಪ್ರಾಮುಖ್ಯವಾದದ್ದು. ಯೋಹಾನನು ಹೀಗೆ ಬರೆಯುತ್ತಾನೆ, "ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳುಕೊಳ್ಳುತ್ತೇವೆ. ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ" (1 ಯೋಹಾನ 2:3, 4). ಅದೇ ಸಮಯದಲ್ಲಿ, ಒಬ್ಬನು ರಕ್ಷಣೆಯನ್ನು ಸಂಪಾದಿಸಿಕೊಳ್ಳುವಷ್ಟರ ಮಟ್ಟಿಗೆ "ಸಾಕಷ್ಟು ಒಳ್ಳೇವನು" ಅಥವಾ "ಸಾಕಷ್ಟು ವಿಧೇಯನು" ಎಂದು ಎಂದಿಗೂ ಯೋಚಿಸಬಾರದು. ಒಬ್ಬನು ಎಷ್ಟೇ ಕಠಿಣವಾಗಿ ಪ್ರಯತ್ನಿ ಸಿದರೂ, ಆತನು ಧರ್ಮಪ್ರಮಾಣಗಳನ್ನು ಪರಿಪೂರ್ಣವಾಗಿ ಪಾಲಿಸಲಾಗುವದಿಲ್ಲ.

ವಿಷಯ ಹೀಗಿರುವಾಗ, ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಪಾಲಿಸುವದರ ಮೇಲಲ್ಲದೆ ನಮ್ಮ ರಕ್ಷಣೆಯು ಬೇರೊಂದರ ಆಧಾರದಲ್ಲಿರಬೇಕಾದ ಅಗತ್ಯವಿದೆ. ಇದು ನಮ್ಮಲ್ಲಿ ತುರ್ತು ಪ್ರಶ್ನೆಗಳನ್ನು ಎಬ್ಬಿಸಬೇಕು. ಮನುಷ್ಯನು ಧರ್ಮಶಾಸ್ತ್ರ ಕೈಕೊಂಡು ನಡೆಯುವದರಿಂದ ರಕ್ಷಿಸಲ್ಪಡಲಾರನಾದ್ದರಿಂದ, ಆತನು ರಕ್ಷಣೆ ಹೊಂದುವದಕ್ಕೆ *ಸಾಧ್ಯವೋ*? ಆತನು ಹೇಗೆ ರಕ್ಷಿಸಲ್ಪಡಬಲ್ಲನು? ಆತನಿಗೊಂದು ನಿರೀಕ್ಷೆ ಇರುತ್ತದೋ? ಪೌಲನು ಹೀಗೆ ತನ್ನ ವಾಚಕರ ಮನಸ್ಸುಗಳನ್ನು "ನೀತಿವಂತರೆಂಬ ನಿರ್ಣಯ" ದ ಚರ್ಚೆಗೆ ಸಿದ್ಧಗೊಳಿಸಿದನು.

## ನಂಬಿಕೆಯ ಮೂಲಕ ಎಲ್ಲಾ ಜನರಿಗೆ ನೀತಿಯುಂಟಾಗುವದು (3:21-31)

ರೋಮಾಪುರ ಪತ್ರಿಕೆಯ ಸಂಕ್ಷೇಪ್ತ ವಿವರಣೆಯಲ್ಲಿ (ನೋಡಿರಿ 18ನೇ ಪುಟ), "ಸಿದ್ಧಾಂತ" ಎಂಬ ಶಿರೋನಾಮೆಯ ಅಡಿ ಯಲ್ಲಿ, "ದಂಡನೆಯ ತೀರ್ಪು," "ನೀತಿಕರಣ," "ಶುದ್ಧೀಕರಣ," ಮತ್ತು "ಮಹಿಮಾಕರಣ" ಎಂಬ ಅಂಶಗಳು ಬರುತ್ತವೆ. R. C. Bell ಹೀಗೆ ಬರೆಯುತ್ತಾನೆ,

> ಕ್ರೈಸ್ತತ್ವವನ್ನು ಒಂದು ದೊಡ್ಡ ಆರಾಧನಾಮಂದಿರ ಎಂದು ಭಾವಿಸಿಕೊಳ್ಳುವದಾದರೆ, ದಂಡನೆಯ ತೀರ್ಪು (1:18–3:20) ಕಟ್ಟಡವನ್ನು ಕಟ್ಟಬೇಕಾಗಿರುವ ಸ್ಥಳವನ್ನು ಸ್ವಚ್ಛಗೊಳಿಸುವದಾಗಿದೆ; ನೀತಿವಂತರೆಂಬ ನಿರ್ಣಯವು (3:21–5:21) ಕಟ್ಟಡಕ್ಕೆ ಬೇಕಾಗಿರುವ ಆಳವಾದ, ಬಲಿಷ್ಠ ಅಸ್ತಿವಾರ; ಶುದ್ಧೀಕರಣವು (ಅಧ್ಯಾಯ 6, 7) ಕಟ್ಟಡದ ಮುಖ್ಯಭಾಗ; ಮತ್ತು ಮಹಿಮಾಕರಣವು (ಅಧ್ಯಾಯ 8) ಶಿಖರ ಅಥವಾ ಗುಮ್ಮಟವಾಗಿದೆ.[43]

ಈಗ ನಾವು ನಿರ್ಮಾಣದ ಸ್ಥಳವನ್ನು ಸ್ವಚ್ಛಗೊಳಿಸಿದ್ದೇವೆ ("ದಂಡನೆಯ ತೀರ್ಪು," ಅಪರಾಧ ನಿರ್ಣಯ) ಮತ್ತು ಅಸ್ತಿವಾರ ("ನೀತಿವಂತರೆಂಬ ನಿರ್ಣಯ") ಹಾಕುವ ಕೆಲಸ ಆರಂಭಿಸುವದಕ್ಕೆ ಸಿದ್ಧರಾಗಿದ್ದೇವೆ.

1:18–3:20 ರಲ್ಲಿ, ಪೌಲನು "ಯೆಹೂದ್ಯರೂ ಅನ್ಯಜನರೂ ಪಾಪಕ್ಕೆ ಒಳಗಾದವರಾಗಿದ್ದಾರೆ" ಎಂದೂ "ನೀತಿವಂತನಿಲ್ಲ, ಒಬ್ಬನೂ ಇಲ್ಲ" ಎಂದೂ ಆರೋಪಿಸಿದನು (3:9, 10). ಇಲ್ಲಿಯ ತನಕ, ನಾವು ಒಂದು ಹತಾಶೆಯ ಚಿತ್ರಣವನ್ನು ನೋಡುತ್ತಾ ಬಂದೆವು, ಕತ್ತಲು ಮತ್ತು ಮಂಕಾದ ಕಾರ್ಮೋಡ ಆವರಿಸಲ್ಪಟ್ಟ ರೀತಿಯಲ್ಲಿತ್ತು. ಅದಾದ ಮೇಲೆ, 3:21 ರಲ್ಲಿ "ಈಗಲಾದರೋ" ಎಂಬ ಮಾತುಗಳು ಕಾಣಿಸಿಕೊಳ್ಳುತ್ತವೆ. ಹೀಗೆ ಚರ್ಚೆಯು ಈಗ "ದುರಂತದಿಂದ ವಿಜಯೋತ್ಸವದೆಡೆಗೆ ಸಾಗುತ್ತದೆ."[44]

ಈ "ನೀತಿವಂತರೆಂಬ ನಿರ್ಣಯ" ದ ಮೇಲಿನ ವಿಭಾಗವು ಎರಡೂವರೆ ಅಧ್ಯಾಯಗಳನ್ನೊಳಗೊಂಡಿರುತ್ತದೆ (3:21-5:21). ಇದರ ಭಾಗವಾಗಿ, ಈ ವಾಕ್ಯವೃಂದವು (3:21-26) ಗ್ರೀಕ್ ಪ್ರತಿಯಲ್ಲಿ ಅತಿ ಉದ್ದವಾದ ವಾಕ್ಯವಾಗಿದೆ.[45] Morris ಈ ವಾಕ್ಯವನ್ನು ಹೀಗೆ ಕರೆದನು, "ಬಹುಶಃ ಇದುವರೆಗೂ ಬರೆಯಲ್ಪಟ್ಟಿರುವ ಅತ್ಯಂಥ ಪ್ರಾಮುಖ್ಯವಾದ ಏಕ ವಾಕ್ಯವೃಂದವಾಗಿರುತ್ತದೆ."[46] Moo, ಹೀಗೆ ಬರೆದನು, "ಸತ್ಯವೇದ ಅಷ್ಟು ಕಡಿಮೆ ವಚನಗಳಲ್ಲಿ ಅಷ್ಟೊಂದು ಅಧಿಕವಾದ ದೈವಶಾಸ್ತ್ರದ ವಿಚಾರಗಳನ್ನು ಒಟ್ಟಾಗಿ ಕ್ರೂಡಿಕರಿಸುವದು ವಿರಳವಾದದ್ದು,"[47] ಮತ್ತು Edwards 3:21-26 ನ್ನು, "ಕ್ರೈಸ್ತ ನಂಬಿಕೆಯ ಶಬ್ದ ಸಂಗ್ರಹ"[48] ಎಂದು ಬಣ್ಣಿಸುತ್ತಾನೆ

ನೀತಿವಂತಿಕೆ ಎಂಬ ಪದದಲ್ಲಿ ಅಡಕವಾಗಿರುವ ಒಂದು ಕೇಂದ್ರ ವಿಚಾರವು, ಈ ವಚನಗಳುದ್ದಕ್ಕೂ ಪ್ರಭಲವಾಗಿ ಎದ್ದು ಕಾಣುತ್ತದೆ (3:21, 22, 25, 26). ರಕ್ಷಣೆಯ ಮಹಾ ಕಥೆಯು ಈ ಪದದ ಸುತ್ತ ಕೇಂದ್ರಿಕೃತವಾಗಿರುತ್ತದೆ.

## ದೇವರ ನೀತಿಯು ತೋರಿ ಬಂದದ್ದು (3:21-26)

**21ಈಗಲಾದರೋ ದೇವರಿಂದ ದೊರಕುವ ನೀತಿಯು ಧರ್ಮಶಾಸ್ತ್ರನಿಯಮಗಳಿಲ್ಲದೆ
ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ
ಸಾಕ್ಷಿಗೊಂಡಿರುತ್ತದೆ. 22ದೇವರಿಂದಾಗುವ ಆ ನೀತಿಯು ಯಾವದೆಂದರೆ ಯೇಸು ಕ್ರಿಸ್ತನನ್ನು
ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚುಕಡಿಮೆ ಏನೂ ಇಲ್ಲ.
23ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. 24ಅವರು
ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ
ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು. 25ಈತನು ತನ್ನ
ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು
ಮುಂದಿಟ್ಟನು. 26ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ
ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ
ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ
ಕಾಣಿಸಿಕೊಂಡಿ ದ್ದಾನೆ.**

1:16, 17 ರಲ್ಲಿ, ಪೌಲನು ದೇವರಿಂದ ದೊರಕುವ ನೀತಿಯ ವಿಷಯವನ್ನು

ಪರಿಚಯಿಸಿದನು-ಮಾನವರು ತನ್ನೊಂದಿಗೆ ಸರಿಯಾದ ಸಂಬಂಧವನ್ನು ಆನಂದಿಸುವ ಹಾಗೆ ದೇವರು ಮಾಡಿದ ಕೃಪಾಭರಿತವಾದ ವ್ಯವಸ್ಥೆಯಾಗಿರುತ್ತದೆ. ಪೌಲನು ತಕ್ಷಣವೇ ಆ ವಿಚಾರವನ್ನು ಸವಿಸ್ತಾರವಾಗಿ ವಿವರಿಸುವದರ ಬದಲಾಗಿ, ಮಾನವರಿಗೆ ದೇವರ ನೀತಿಯ *ಅಗತ್ಯತೆ* ಇದೆ ಎಂಬ ಬಗ್ಗೆ ದೀರ್ಘವಾದ ಚರ್ಚೆಯನ್ನು ಮಾಡಲಾರಂಭಿಸುತ್ತಾನೆ. ಕೊನೆಗೆ, ಹೇಗೂ, ಆತನು ಮೂಲ ಚರ್ಚೆಯನ್ನು ಮುಂದುವರೆಸುವದಕ್ಕೆ ಸಿದ್ಧನಾಗಿದ್ದನು.

ಇದುವರೆಗೆ ನಾವು ಈ ಪತ್ರಿಕೆಯ ಮೂಲಕ ಹಾದು ಬಂದ ಪ್ರಯಾಣವನ್ನು ಈ ಕೆಳಗಿನ ಒಬ್ಬ ಮಾರ್ಗದರ್ಶಕನಿಗೆ ಹೋಲಿಸಬಹುದು, ಆತನು ಒಂದು ಸುಂದರವಾದ ಪಟ್ಟಣವನ್ನು ದೂರದಿಂದಲೇ ತೋರಿಸಿ ಹೀಗೆ ಹೇಳುತ್ತಾನೆ, "ನಾನು ನಿಮ್ಮನ್ನು ಕರೆದೊಯ್ಯಲು ಬಯಸುವದು *ಅಲ್ಲಿಗೇ* ಆಗಿದೆ." ಅದಾದ ಬಳಿಕ, ಆತನು ನಮ್ಮನ್ನು ಒಂದು ಕಾಡಿನೊಳಗೆ ನಡಿಸಿಕೊಂಡು ಮುಂದೆ ಒಂದು ಇಕ್ಕಟ್ಟಾದ ಕಣಿವೆಗಳಲ್ಲಿ ಕರೆದೊಯ್ಯುತ್ತಾನೆ, ಹಾಗೂ ದಟ್ಟವಾದ ಮೋಡಗಳನ್ನು ಮುರಿದು ಹೊರಬರುತ್ತೇವೆ-ಮತ್ತು ಇಗೋ, ನಮ್ಮ ಕಣ್ಣುಗಳ ಮುಂದೆ ಸರ್ವ ಮಹಿಮೆಯೊಂದಿಗೆ ಕೂಡಿದ ಪಟ್ಟಣ! ಅದೇ ರೀತಿ, ಪೌಲನು ಅಂತಿಮವಾಗಿ ನಮ್ಮನ್ನು ದೇವರ ನೀತಿಯೆಂಬ ವಿಸ್ಮಯಕರ ವಿಷಯಕ್ಕೆ ಕರೆತಂದಿರುತ್ತಾನೆ.

**ವಚನ 21.** ಈ ವಚನಗಳು ದೇವರ ನೀತಿಯ ಬಗ್ಗೆ ಹಲವಾರು ಸತ್ಯಗಳನ್ನು ಮುಂದಿಡುತ್ತವೆ. ಒಂದು ಸತ್ಯವು ವಚನ 21 ರಲ್ಲಿ ಸಿಕ್ಕುತ್ತದೆ, ಅದೇನೆಂದರೆ ನೀತಿಯು ಪ್ರಕಟವಾಗಿದೆ. ಈ ವಚನವು ಎಷ್ಟೊಂದು ಅರ್ಥದಿಂದ ತುಂಬಿದೆಯೆಂದರೆ ನಾವು ಇದನ್ನು "ಜೀರ್ಣಿಸಿಕೊಳ್ಳಲು ಸಾಧ್ಯವಾಗುವಂತೆ ತುಂಡು ತುಂಡಾಗಿ" ಮುರಿಯಬೇಕಾಗಿರುತ್ತದೆ.

ಈ ವಚನವು **ಈಗಲಾದರೋ ದೇವರ ನೀತಿಯು ಧರ್ಮಶಾಸ್ತ್ರನಿಯಮಗಳಿಲ್ಲದೆ** ಎಂದು ಆರಂಭವಾಗುತ್ತದೆ. NASB ಯು ಆಂಗ್ಲದಲ್ಲಿ "ಧರ್ಮಶಾಸ್ತ್ರಕ್ಕೆ" ದೊಡ್ಡ "L" ಹೊಂದಿರುತ್ತದೆ, ಯಾಕೆಂದರೆ ಪೌಲನು ಪ್ರಾಥಮಿಕವಾಗಿ ಯೆಹೂದ್ಯರನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಿದ್ದಾನೆ. ಈ ವಚನದಲ್ಲಿ "ಧರ್ಮಶಾಸ್ತ್ರ" ಎಂಬುದು ವಿಶೇಷವಾಗಿ ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. ಹೇಗೂ, ಮೂಲ ಗ್ರೀಕ್ ಪ್ರತಿಯಲ್ಲಿ ಕೇವಲ "ಧರ್ಮಶಾಸ್ತ್ರವಿಲ್ಲದೆ" ಎಂದಿರುತ್ತದಷ್ಟೆ (ನೋಡಿರಿ NEB), ಆದ್ದರಿಂದ ಪೌಲನು ಸಹ ಸಾಮಾನ್ಯ ನಿಯಮವನ್ನು ಸಾರುತ್ತಿದ್ದಾನೆ. ಮುಂಚೆಯ ವಿಭಾಗದ ಅಂತ್ಯದಲ್ಲಿ, ಆತನು "ನೇಮನಿಷ್ಠೆಗಳನ್ನನುಸರಿಸಿ" ಯಾವನಾದರೂ "ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ" (3:20) ಎಂದು ಹೇಳಿದ್ದನು. ವಿಷಯ ಹಾಗಿರುವದರಿಂದ, ರಕ್ಷಣೆಯು ಧರ್ಮಶಾಸ್ತ್ರವನ್ನನುಸರಿಸುವದಕ್ಕಿಂತಲೂ ಬೇರೊಂದು ಆಧಾರದ ಮೇಲಿರತಕ್ಕದ್ದು.

ಮುಂದೆ, ಪೌಲನು ಹೇಳಿದ್ದೇನೆಂದರೆ **ದೇವರಿಂದ ದೊರಕುವ ನೀತಿಯು . . . ಪ್ರಕಟವಾಗಿದೆ.**[49] ಈ ಮುಂಚೆ ಚರ್ಚಿಸಿದ ಹಾಗೆ, ದೇವರಿಗೆ ಅನ್ವಯಿಸುವಾಗ, "ನೀತಿಯು" ಸಾಮಾನ್ಯವಾಗಿ "ಸರಿ-ಜೀವನ, ಸಂಪೂರ್ಣ ಸರಿಯಾಗಿರುವದು" ಎಂಬದನ್ನು ಸೂಚಿಸುತ್ತದೆ. ಮಾನವರಿಗೆ ಅನ್ವಯಿಸುವಾಗ, ಅದರ ಒಂದು ಅರ್ಥವೆಂದರೆ, "ಸರಿಯಾದ ಸಂಬಂಧದಲ್ಲಿರುವದು (ಕರ್ತನ ಸಂಗಡ), ಹೊರಿಸಲ್ಪಟ್ಟ ನೀತಿ." 3:21 ರಲ್ಲಿ "ದೇವರ ನೀತಿ" ಎಂಬ ಪದವು ದೇವರ ಸ್ವಂತ ಸ್ವಭಾವವನ್ನು ಸೂಚಿಸಬಹುದಾಗಿದೆ ಅಥವಾ ಅನೀತಿಯುಳ್ಳ ಜನರಿಗೆ ನೀತಿಯನ್ನು ಹೊರಿಸುವದಕ್ಕಾಗಿ ಆತನು ಮಾಡಿದ ವ್ಯವಸ್ಥೆಯನ್ನು ಸೂಚಿಸಬಹುದಾಗಿದೆ. ಪೌಲನು ಎರಡನೆಯ ಅರ್ಥದಲ್ಲಿ "ನೀತಿ" ಯನ್ನು

ಉಪಯೋಗಿಸಿರಬಹುದಾದ ಸಾಧ್ಯತೆ ಬಹಳಷ್ಟಿರುತ್ತದೆ.

ಈ ಅಭಿಪ್ರಾಯದ ತರ್ಕವು ಈ ಕೆಳಗಿನಂತಿರಬಹುದಾಗಿದೆ. 1:17 ರಲ್ಲಿ, ಪೌಲನು ಹೇಳಿದ್ದೇನೆಂದರೆ, ಸುವಾರ್ತೆಯಲ್ಲಿ "ದೇವರಿಂದ ದೊರಕುವ ನೀತಿಯು ತೋರಿಬರುತ್ತದೆ." ಆ ವಚನದಲ್ಲಿ "ನೀತಿಯು" ಬಹುಶಃ ಮನುಷ್ಯರಿಗೆ "ಸರಿಯಾದ ಗಣನೆ "ಯನ್ನು ಒದಗಿಸುವದಕ್ಕಾಗಿ ದೇವರು ಮಾಡಿರುವ ಸಂಕಲ್ಪವನ್ನು ಸೂಚಿಸುತ್ತದೆ. ಆತನು ನಮಗೆ ಆದಾದ ತಕ್ಷಣವೇ ದೇವರ ಸಂಗಡ ಹೇಗೆ "ಸರಿಯಾದ ಗಣನೆಯನ್ನು (ಸಂಬಂಧವನ್ನು)" ಪಡೆಯಬೇಕು ಎಂಬದನ್ನು ಹೇಳದೆ, ಪೌಲನು ಮೊದಲು ಮಾನವರು ಹೇಗೆ ದೇವರ ಸಂಗಡ ಸರಿಯಾಗಿ ಇಲ್ಲ ಎಂಬದನ್ನು ತಿಳಿಸುತ್ತಾನೆ (ನೋಡಿರಿ 1:18). ಈ ಗೊಂದಲಕ್ಕೆ ನೀಡಬಹುದಾದ ಸ್ವಾಭಾವಿಕ ಪ್ರತಿಕ್ರಿಯೆಯು ಹೀಗಿರಬಲ್ಲದು, "ನಾನೇನು ಮಾಡಬಲ್ಲೆ?" ಎಂದು ಗೋಳಿಡುವದು. ರೋಮಾ 3:21 ರಲ್ಲಿ, ಪೌಲನು ಆ ಪ್ರಶ್ನೆಗೆ ಉತ್ತರಿಸಲು ಆರಂಭಿಸುತ್ತಾನೆ, ದೇವರು ಮಾನವರಿಗಾಗಿ ಏನು ಮಾಡಿದನೆಂಬದನ್ನು ವಿವರಿಸುತ್ತಾನೆ. ಅಂದರೆ 3:21ನೇ ವಚನವು 1:17 ನೇ ವಚನದ ಮುಂದುವರೆದ ಭಾಗವಾಗಿದೆ ಎಂದರ್ಥ- ಎರಡೂ ವಚನಗಳಲ್ಲಿ "ನೀತಿ" ಎಂಬುದು ಒಂದೇ ಅರ್ಥವನ್ನು ಹೊಂದಿರುವದಾಗಿದೆ. CJBಯು 3:21ರಲ್ಲಿನ "ನೀತಿ" ಎಂಬದನ್ನು "ಜನರನ್ನು ತನ್ನ ದೃಷ್ಟಿಯಲ್ಲಿ ನೀತಿವಂತರನ್ನಾಗಿಸುವ ದೇವರ ದಾರಿ" ಎಂದು ತರ್ಜುಮೆಗೊಳಿಸಿದೆ.

ಅದೇ ಸಮಯದಲ್ಲಿ, ಆ ಪ್ರಕ್ರಿಯೆಯಲ್ಲಿ ಸ್ವತಃ ದೇವರ ನೀತಿಯು ಒಂದು ಭಾಗವಾಗಿರುತ್ತದೆಂಬ ಅಂಶದ ಮೇಲಿನ ದೃಷ್ಟಿಯನ್ನು ಒಬ್ಬನು ಕಳೆದುಕೊಳ್ಳಕೂಡದು. 3:25, 26ರಲ್ಲಿ, ಪೌಲನು "ಆತನ (ದೇವರ) ನೀತಿಯ" ಬಗ್ಗೆ ಮಾತಾಡಿದಾಗ, ಆತನು ಮನಸ್ಸಿನಲ್ಲಿ ದೇವರ ಗುಣಸ್ವಭಾವವನ್ನಿಟ್ಟುಕೊಂಡು ಹೇಳಿದನೆಂಬದು ಸ್ಪಷ್ಟವಾಗಿ ತೋರುತ್ತದೆ. ಆದುದರಿಂದ, 21 ರಿಂದ 26 ವಚನಗಳ ವರೆಗೆ "ನೀತಿ" ಯ ಎರಡು ಅರ್ಥಗಳು ಒಂದರಮೇಲೊಂದು ಅತಿಕ್ರಮಿಸುವಂತೆ ಕಾಣುತ್ತದೆ. John R. W. Stott ಬರೆದದ್ದೇನೆಂದರೆ, ಈ ವಾಕ್ಯಭಾಗದಲ್ಲಿ, "ದೇವರ (ಅಥವಾ ದೇವರಿಂದಾಗುವ) ನೀತಿಯು ಆತನ ಗುಣಸ್ವಭಾವ, ಆತನ ರಕ್ಷಣೆಯ ತೊಡಗುವಿಕೆ ಹಾಗೂ ತನ್ನ ಮುಂದೆ ನಿಲ್ಲಲು ನೀತಿವಂತಿಕೆಯನ್ನು ವರವಾಗಿ ಕೊಡುವದು ಇವೆಲ್ಲವುಗಳ *ಸಂಯೋಗ* ಆಗಿರುತ್ತದೆ."[50] ನೀತಿಯುಳ್ಳ ದೇವರು ಅನೀತಿವಂತರಿಗೆ ನೀತಿಯ ದಾರಿಗಳನ್ನು ಒದಗಿಸುತ್ತಾನೆ.

"ಪ್ರಕಟವಾಗಿದೆ" ಎಂಬ ಪದವು φανερόω (*phaneroō*) ಎಂಬದರಿಂದ ಬಂದಿದ್ದು ಅದರರ್ಥವು "ಗೋಚರಿಸುವಂತೆ ಮಾಡು, ಸ್ಪಷ್ಟಗೊಳಿಸು. . . . ತಿಳಿಯಪಡಿಸು."[51] ಗತಕಾಲದ ದಿನಗಳಲ್ಲಿ, ದೇವರು ಅನೀತಿವಂತರನ್ನು ಹೇಗೆ ನೀತಿವಂತರೆಂದು ಎಣಿಸುತ್ತಿದ್ದನೆಂಬದು ಸ್ಪಷ್ಟವಾಗಿ ತಿಳಿದಿಲ್ಲ; ಈಗ ಅದು ತಿಳಿಯಪಡಿಸಲ್ಪಟ್ಟಿದೆ. ವಾಸ್ತವದಲ್ಲಿ, ಪೌಲನು ಈಗ ಅದನ್ನು ದೇವರ ಸಂಕಲ್ಪದ ಬಗ್ಗೆ ಪರಿಚಯವಿಲ್ಲದ ಯಾರಿಗೇ ಆಗಲಿ ತಿಳಿಯಪಡಿಸುವದಕ್ಕಿದ್ದನು.

ಈ ವಚನವು ದೇವರ ನೀತಿಯು **ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ** ಎಂದು ಹೇಳುವ ಮೂಲಕ ಮುಕ್ತಾಯಗೊಳ್ಳುತ್ತದೆ. "ಮೋಶೆಯ ಧರ್ಮಶಾಸ್ತ್ರ ಮತ್ತು ಪ್ರವಾದಿಗಳ" ಎಂಬುದು ಇಡೀ ಹಳೇ ಒಡಂಬಡಿಕೆಯನ್ನು ಸೂಚಿಸುವ ಸಾಮಾನ್ಯ ವಿಧವಾಗಿತ್ತು (ಮತ್ತಾಯ 7:12; 11:13; 22:40). ವಿಮೋಚನೆಯು "ಧರ್ಮಶಾಸ್ತ್ರವಿಲ್ಲದೆ" ಇದ್ದಿರಬಹುದು, ಆದರೆ ಅದರ ಬಗ್ಗೆ ಧರ್ಮಶಾಸ್ತ್ರದಲ್ಲಿ ಸಾಕ್ಷಿಯಿಲ್ಲ

ಎಂದು ಅದರ ಅರ್ಥವಾಗಿರಲಿಲ್ಲ. ಮಾನವರನ್ನು ನೀತಿವಂತರೆಂದು ಎಣಿಸಬೇಕೆಂಬ ದೇವರ ಸಂಕಲ್ಪವು ದೇವರು ಅನಂತರದಲ್ಲಿ ಯೋಚಿಸಿದ ಆಲೋಚನೆಯಾಗಿರಲಿಲ್ಲ ಎಂಬದನ್ನು ವಾಚಕರು ತಿಳಿದುಕೊಳ್ಳಬೇಕೆಂಬದು ಪೌಲನ ಇಚ್ಛೆಯಾಗಿತ್ತು.

ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ನುಡಿಗಳು ಯಾವದಕ್ಕೆ ಸಾಕ್ಷಿಯಾಗಿದ್ದವು? "ನಂಬಿಕೆಯ ಮೂಲಕ ದೇವರ ನೀತಿಯು ದೊರಕುತ್ತದೆ" ಎಂಬದಕ್ಕೆ ಸಾಕ್ಷಿಯಾಗಿದ್ದವು, ಅದು ಮುಂದಿನ ವಚನದಲ್ಲಿ ಚರ್ಚಿಸಲ್ಪಟ್ಟಿದೆ. ಒಬ್ಬ ವ್ಯಕ್ತಿಯು ನಂಬಿಕೆಯ ಮೂಲಕ ನೀತಿವಂತನೆಂದು ಎಣಿಸಲ್ಪಡುವ ನಿಯಮವು ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಪುಸ್ತಕಗಳಲ್ಲಿಯೂ ದೃಢೀಕರಿಸಲ್ಪಟ್ಟಿದೆ. ರೋಮಾ 4 ರಲ್ಲಿ ಪೌಲನಿಂದ ಉಲ್ಲೇಖಿಸಲ್ಪಟ್ಟ ಅಬ್ರಹಾಮನು ಉದಾಹರಣೆಯು ಧರ್ಮಶಾಸ್ತ್ರದಿಂದ (ಹಳೇ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು) ಬಂದದ್ದು. ರೋಮಾ 1:17 ರಲ್ಲಿ ಪೌಲನ ವಾಕ್ಯಭಾಗವು ಪ್ರವಾದಿಗಳಿಂದ ಉಲ್ಲೇಖಿಸಲ್ಪಟ್ಟದ್ದಾಗಿದೆ (ಹಬಕ್ಕೂಕ 2:4). ಹಳೇ ಒಡಂಬಡಿಕೆಯಲ್ಲಿ ನಂಬಿಕೆಯ ಉದಾಹರಣೆಗಳು ಸಾಕಷ್ಟಿವೆ (ನೋಡಿರಿ ಹಬಕ್ಕೂಕ 11).

**ವಚನ 22.** ಪೌಲನ ತರ್ಕವನ್ನು ಸೂಕ್ಷ್ಮವಾಗಿ ಗಮನಿಸೋಣ. ನಾವು ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಪಾಲಿಸುವದರಿಂದ ರಕ್ಷಿಸಲ್ಪಡುವದಕ್ಕೆ ಸಾಧ್ಯವಿಲ್ಲವಾದರೆ, ಯಾವದರ ಆಧಾರದಲ್ಲಿ ನಾವು ರಕ್ಷಿಸಲ್ಪಡುವೆವು? ನಾವು ಪುನಃ 1:16, 17 ರಲ್ಲಿ ಅಪೊಸ್ತಲನ ಆರಂಭಿಕ ಹೇಳಿಕೆಯನ್ನು ಗಮನಿಸೋಣ:

> ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕರಿಗೆ ಅಂತೂ *ನಂಬುವವರೆಲ್ಲರಿಗೂ* ರಕ್ಷಣೆ ಉಂಟುಮಾಡುವಂಥದಾಗಿದೆ. ಹೇಗೆಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು *ನಂಬಿಕೆಯಿಂದಲೇ* ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು *ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು* ಪ್ರಕಟಿಸುವಂಥದಾಗಿದೆ (ಒತ್ತಿ ಹೇಳಿದ್ದು ನನ್ನದು).

ನಂಬಿಕೆಯ ಮೇಲಿನ ಒತ್ತು 3:22 ರಲ್ಲಿ ಪ್ರತಿಧ್ವನಿಸುತ್ತದೆ: **ದೇವರಿಂದಾಗುವ ಆ ನೀತಿಯು ಯಾವದಂರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು** (ಒತ್ತಿ ಹೇಳಿದ್ದು ನನ್ನದು). "ಯೇಸು ಕ್ರಿಸ್ತನನ್ನು ನಂಬುವ ದರಿಂದ" ಎಂಬ ಪದವನ್ನು "ಯೇಸು ಕ್ರಿಸ್ತನ ನಂಬಿಕೆ" ಎಂದು ಅನುವಾದಿಸಬಹುದು (ನೋಡಿರಿ KJV).[52] ಕೆಲವರು ಇದನ್ನು ಭೂಮಿಗೆ ಬಂದು ಮಾನವರಿಗಾಗಿ ಸಾಯುವದರಲ್ಲಿ ತೋರಿದ ಯೇಸು ಕ್ರಿಸ್ತನ *ನಂಬಿಗಸ್ತಿಕೆ* ಎಂದು ಯೋಚಿಸುತ್ತಾರೆ (CJB ನೋಡಿರಿ), ಆದರೆ ಬಹುಪಾಲು ಲೇಖಕರು ಹಾಗೂ ಅನುವಾದಕರು ನಂಬುವದೇನೆಂದರೆ ಅದು ಯೇಸುವಿನಲ್ಲಿ *ನಂಬಿಕೆ* ಆಗಿದೆ ಎಂಬದಾಗಿ (ನೋಡಿರಿ NKJV; NIV; RSV). ಹೇಗೂ, ಎಲ್ಲರೂ ಒಪ್ಪಿಕೊಳ್ಳುವ ಸಂಗತಿ ಏನೆಂದರೆ, "ನಂಬುವವರೆಲ್ಲರಿಗೆ" ಎಂಬ ಮಾತುಗಳಲ್ಲಿ ವೈಯಕ್ತಿಕ ನಂಬಿಕೆಯ ಛಾಯೆ ಕಾಣಿಸುತ್ತದೆ (3:22). "ನಂಬುವವರೆಲ್ಲರಿಗೆ" ಎಂಬ ಪದವು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. CJB ಯಲ್ಲಿ "ವಿಶ್ವಾಸಿಸುತ್ತಾ ಇರುವವರಿಗೆಲ್ಲಾ" ಎಂದಿರುತ್ತದೆ.

ನೀತಿಯ ಕುರಿತಾದ ಎರಡನೆಯ ಸತ್ಯವೇನೆಂದರೆ ಅದು ನಂಬಿಕೆಯ ಆಧಾರದ ಮೇಲಾಗಿದೆ. ನಂಬಿಕೆ/ವಿಶ್ವಾಸ ನಮ್ಮ ವಾಕ್ಯಭಾಗದಲ್ಲಿ ಮುಖ್ಯ ಪದವಾಗಿದೆ. ದೇವರು *ಯಾವಾಗಲೂ* ಜನರನ್ನು ನಂಬಿಕೆ/ವಿಶ್ವಾಸದ ಆಧಾರದಲ್ಲಿ ಆಶೀರ್ವದಿಸಿದ್ದಾನೆಂಬದರ

ಮೇಲೆ 4ನೇ ಅಧ್ಯಾಯವು ಒತ್ತು ಕೊಡುತ್ತದೆ.

ನಾವು ಮುಂಚೆ "ನಂಬುವವರಿಗೆ" ಮತ್ತು "ನಂಬಿಕೆ/ವಿಶ್ವಾಸ" ಎಂಬ ಪದಗಳ ಬಗ್ಗೆ ಚರ್ಚಿಸಿದ್ದೇವೆ. 22ನೇ ವಚನದ ಮಹತ್ವದ ವಿಷಯವೇನೆಂದರೆ, ಈ ಪತ್ರಿಕೆಯಲ್ಲಿ ಮೊಟ್ಟಮೊದಲ ಬಾರಿಗೆ, ನಂಬಿಕೆ ನಿರ್ದಿಷ್ಟವಾಗಿ *ಕ್ರಿಸ್ತನಿಗೆ* ಜೋಡಿಸಲ್ಪಟ್ಟಿದೆ. "ಪೌಲನು ಇಲ್ಲಿ ನಂಬಿಕೆಯನ್ನು ಸಾಮಾನ್ಯ ಅರ್ಥದಲ್ಲಿ ಸೂಚಿಸುತ್ತಿಲ್ಲ, ಅಥವಾ ದೇವರ ನಿರ್ಧಾರಗಳಲ್ಲಿ ಇಡುವ ಸಾಮಾನ್ಯವಾದ ವಿಶ್ವಾಸ ಎಂಬಂತೆ ನೋಡುತ್ತಿಲ್ಲ; ಆತನು ನಂಬಿಕೆಯನ್ನು ಪಾಪಿಗಳಿಗಾಗಿ ಸಾಯುವದಕ್ಕೆ ಭೂಮಿಗೆ ಬಂದವನೊಂದಿಗೆ ಜೋಡಣೆ ಮಾಡುತ್ತಿದ್ದಾನೆ."[53] ಯೇಸುವಿನಲ್ಲಿ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವದಕ್ಕೆ ಉತ್ತಮ ಪದವೆಂದರೆ *ವಿಶ್ವಾಸ:* ನಮ್ಮ ರಕ್ಷಣೆಯ ವಿಷಯದಲ್ಲಿ, ನಾವು ನಮ್ಮನ್ನು, ನಮ್ಮ ಸ್ವಂತ ಸಾಮರ್ಥ್ಯ ಮತ್ತು ಒಳ್ಳೇ ಕ್ರಿಯೆಗಳಲ್ಲಿ ವಿಶ್ವಾಸಿಸುವದನ್ನು ನಿಲ್ಲಿಸಿ ನಾವು ಯೇಸುವನ್ನು ವಿಶ್ವಾಸಿಸುವದಕ್ಕೆ, ಆತನು ನಮಗಾಗಿ ಮಾಡಿದ ಕಾರ್ಯದಲ್ಲಿ ವಿಶ್ವಾಸಿಸುವದಕ್ಕೆ ಮುಂದಾಗುತ್ತೇವೆ.

ವಚನ 22 ಒಂದು ಪ್ರಸಿದ್ಧ ಹೇಳಿಕೆಯೊಂದಿಗೆ ಮುಕ್ತಾಯಗೊಳ್ಳುತ್ತದೆ: **ಹೆಚ್ಚುಕಡಿಮೆ ಏನೂ ಇಲ್ಲ.** ಈ ಮಾತುಗಳು ಯಾವದನ್ನು ಸೂಚಿಸುತ್ತವೆ? ಉತ್ತರ ಸ್ಪಷ್ಟವಾಗಿಲ್ಲ ಯಾಕೆಂದರೆ 21 ರಿಂದ 26 ವಚನಗಳು ಒಂದು ಮುಂದುವರೆಯುವ ವಾಕ್ಯವೃಂದವಾಗಿ ರುತ್ತದೆ. ಕೆಲವು ತರ್ಜುಮೆಗಳು ಈ ವಾಕ್ಯವೃಂದವನ್ನು ವಿಭಾಗಿಸಿ "ಹೆಚ್ಚುಕಡಿಮೆ ಏನೂ ಇಲ್ಲ" ಎಂಬದನ್ನು ಮುಂದಿನ "ನಂಬುವವರೆಲ್ಲರಿಗೂ" ಎಂದು ಸೂಚಿಸುತ್ತಾರೆ (ನೋಡಿರಿ NEB; NLT). ಅದು "ಹೆಚ್ಚುಕಡಿಮೆ ಏನು ಇಲ್ಲ" ಎಂಬ ಮಾತಿನ ಅರ್ಥವು ರಕ್ಷಿಸಲ್ಪಟ್ಟವರೆಲ್ಲರೂ-ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ-ಒಂದೇ ಆಧಾರದ ಮೇಲೆ ರಕ್ಷಿಸಲ್ಪಡುವರು ಎಂದಾಗಿಸುತ್ತದೆ. ಇದು ಸ್ಪಷ್ಟವಾಗಿ ಸತ್ಯವೇದಕ್ಕನುಸಾರವಾದ ಸತ್ಯವಾಗಿದೆ (ನೋಡಿರಿ ಗಲಾತ್ಯ 3:26-28). J. D. Thomas ಈ ರೀತಿ ಹೇಳಿದನು: "ಮನುಷ್ಯನು ಯಾವ ದೇಶ, ಸಂಸ್ಕೃತಿಯಲ್ಲಿದ್ದರೂ ರಕ್ಷಿಸಲ್ಪಡಬಲ್ಲನು ಯಾಕೆಂದರೆ ದೇವರು ಬೇರೆ ಬೇರೆ ಜನರ ವಿಷಯದಲ್ಲಿ ಬೇರೆ ಬೇರೆ ದಾರಿಗಳನ್ನು ಅನುಸರಿಸುತ್ತಾನೆಂದು ನಂಬುವಂಥ ವೇದಾಂತಿಗಳು ರೋಮಾಪುರ ಪತ್ರಿಕೆಯ ಸಂದೇಶವನ್ನು ಅರ್ಥಮಾಡಿಕೊಳ್ಳುವದಿಲ್ಲ."[54]

ಇನ್ನು ಕೆಲವು ತರ್ಜುಮೆಗಳು ಮುಂದಿನ ವಾಕ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಈ "ಹೆಚ್ಚುಕಡಿಮೆ ಏನೂ ಇಲ್ಲ" ಎಂಬದನ್ನು ವಿಭಾಗಿಸುತ್ತವೆ: "ಎಲ್ಲರೂ ಪಾಪ ಮಾಡಿದ್ದಾರೆ" (3:23; ನೋಡಿರಿ NKJV; NIV; RSV). ಮುಂಚಿನ ಎರಡು ಅಧ್ಯಾಯಗಳಲ್ಲಿ ಯೆಹೂದ್ಯರೂ ಅನ್ಯಜನರೂ ಪಾಪಿಗಳಾಗಿದ್ದಾರೆ ಎಂಬದನ್ನು ಪೌಲನು ಸಾಭಿತುಗೊಳಿಸಿದ್ದನಾದ್ದರಿಂದ, "ಹೆಚ್ಚುಕಡಿಮೆ ಏನೂ ಇಲ್ಲ" ಎಂಬುದು 23ನೇ ವಚನದಲ್ಲಿ ವ್ಯಕ್ತಿಪಡಿಸಲಾಗಿರುವ ಪಾಪದ ಸಾರ್ವತ್ರೀಕ ಸ್ವಭಾವವನ್ನು ಸೂಚಿಸಬಹುದಾದ ಹೆಚ್ಚು ಸಾಧ್ಯತೆಯಿರುತ್ತದೆ.

**ವಚನ 23.** ಈ ಸಂದರ್ಭದಲ್ಲಿ, ನಾವು ಬಹಳ ಸಾರಿ ಉಲ್ಲೇಖಿಸಲ್ಪಡುವಂಥ ವಚನವೊಂದಕ್ಕೆ ಬಂದಿದ್ದೇವೆ. ಇದು 1:18 -3:20 ಸಾರಾಂಶದಂತಿರುತ್ತದೆ, ಮಾನವ ದುರಂತದ ಒಂದು ಮುಖ್ಯಾಂಶದಂತಿರುತ್ತದೆ. ಇದರ ಪದಗಳು ಅರ್ಥದಿಂದ ತುಂಬಿರುತ್ತವೆ.

ವಚನವು ಹೀಗೆ ಆರಂಭಗೊಳ್ಳುತ್ತದೆ, ಎಲ್ಲರೂ ಪಾಪ ಮಾಡಿ**.** "ಪಾಪ" ಎಂಬದರ ವಿವಿಧ ನಮೂನೆಯ ಪದಗಳು ರೋಮಾಪುರ ಪತ್ರಿಕೆಯ ಮೊದಲ ಎಂಟು ಅಧ್ಯಾಯಗಳಲ್ಲಿ

ಐವತ್ತಕ್ಕಿಂತ ಹೆಚ್ಚು ಸಾರಿ ಉಪಯೋಗಿಸಲ್ಪಟ್ಟಿವೆ, ಆದ್ದರಿಂದ ಆ ಪದದ ಅರ್ಥವೇನೆಂಬದನ್ನು ತಿಳಿದುಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. "ಪಾಪ ಮಾಡಿ (ದ್ದಾರೆ)" ಎಂಬುದು ἁμαρτάνω (*hamartanō*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದರರ್ಥವು "ಗುರಿಯನ್ನು ತಪ್ಪುವದು."[55] ಈ ಕ್ರಿಯಾಪದವು ἁμαρτία (*hamartia*) ಎಂಬ ನಾಮಪದಕ್ಕೆ ಸಂಬಂಧಿಸಿದ್ದಾಗಿದೆ, ಇದು ನೈತಿಕ ಮತ್ತು ಆತ್ಮೀಕ ವಿಫಲತೆಯನ್ನು ಸೂಚಿಸುವ "ಅತ್ಯಂಥ ಸಮಗ್ರವಾದ ಪದವಾಗಿರುತ್ತದೆ."[56] ಈ ಪದವನ್ನು ಗ್ರೀಕರು ಒಬ್ಬ ಬಿಲ್ಲುಗಾರನು ಗುರಿಯನ್ನು ತಪ್ಪುವದನ್ನು ಸೂಚಿಸಲು ಉಪಯೋಗಿಸುತ್ತಿದ್ದರು.[57] ಇಲ್ಲಿ ಅರ್ಥವೇನೆಂದರೆ ನಮ್ಮ ಆತ್ಮೀಕ "ಗುರಿ" ಯು ದೇವರು ಮತ್ತು ನಮ್ಮ ಜೀವಿತಗಳಿಗಾಗಿರುವ ಆತನ ಚಿತ್ತವಾಗಿದೆ. ಎಲ್ಲರೂ ಆ ಗುರಿಯನ್ನು ತಪ್ಪಿದ್ದಾರೆ ಎಂಬದನ್ನು ಪೌಲನು ತೋರಿಸಿಕೊಟ್ಟಿದ್ದನು (1:18–3:20). 3:23 ರಲ್ಲಿ, "ಪಾಪ ಮಾಡಿ (ದ್ದಾರೆ)" ಎಂಬುದು ಭೂತಕಾಲದಲ್ಲಿದೆ. ಒಬ್ಬ ವ್ಯಕ್ತಿಯು ಮೊದಲ ಸಾರಿ ಪಾಪ ಮಾಡುವಾಗ, ರಕ್ಷಣೆಯ ಅಗತ್ಯತೆಯಲ್ಲಿರುವ ಒಬ್ಬ ಪಾಪಿಯಾಗುತ್ತಾನೆ.

ರೋಮಾಪುರ ಪತ್ರಿಕೆಯಲ್ಲಿ "ಪಾಪ" ಕ್ಕೆ ಸಮಾನಾರ್ಥಕ ಪದವು "ಅತಿಕ್ರಮಣ." ಈ "ಅತಿಕ್ರಮಣ" ಎಂದು ಅನುವಾದಿಸಲ್ಪಟ್ಟ ಒಂದು ಗ್ರೀಕ್ ಪದವು παραβαίνω (*parabainō*) ಎಂಬ ಸಂಯುಕ್ತ ಪದ. ಇದು βαίνω (*bainō*, "ನಾನು ಹೋಗು ತ್ತೇನೆ") ಮತ್ತು παρά (*para*, "ಒಟ್ಟೊಟ್ಟಿಗೆ") ಎಂಬ ಪದಗಳನ್ನೊಳಗೊಂಡಿದೆ. ಅದರ ಅರ್ಥವು "ಬದಿಯನ್ನು ಹಿಡಿದು ಹೋಗು. . . . ಅತಿಕ್ರಮಿಸು" ಎಂದಾಗಿದೆ.[58] ನಾಮವಾಚಕ ರೂಪವು ರೋಮ 4:15 ರಲ್ಲಿ ಹೀಗೆ ಅನುವಾದಿಸಲ್ಪಟ್ಟಿದೆ "ಉಲ್ಲಂಘನೆ" ಮತ್ತು 5:14 ರಲ್ಲಿ "ಅಪರಾಧ." "ಅತಿಕ್ರಮಣ" ಎಂಬದರ ಆಂಗ್ಲ ಪದವು ಅಕ್ಷರಶಃ "ಆಚೆ ದಾಟಿ ಹೋಗು" ಎಂದು ಅನುವಾದಿಸಲ್ಪಟ್ಟಿ ರುತ್ತದೆ.[59] ನೆಲದಲ್ಲಿ ಒಂದು ಗೆರೆ ಎಳೆಯಲ್ಪಟ್ಟಿದೆ ಮತ್ತು ಒಬ್ಬನು ಅದನ್ನು ದಾಟಿ ಹೋಗುತ್ತಾನೆಂದು ಯೋಚಿಸಿರಿ. ನಂತರ ಆ ಗೆರೆಯನ್ನು ದೇವರು ನಮ್ಮ ಸುರಕ್ಷತೆಗಾಗಿ ಏರ್ಪಡಿಸಿರುವ ಗಡಿಗಳು ಮತ್ತು ನಿರ್ಬಂಧಗಳು ಎಂಬದಾಗಿ ಯೋಚಿಸಿರಿ.

ರೋಮಾಪುರ ಪತ್ರಿಕೆಯಲ್ಲಿ "ಪಾಪ" ಎಂಬದಕ್ಕಿರುವ ಇನ್ನೊಂದು ಪದವೆಂದರೆ "ಅಪರಾಧಗಳು" (4:7). "ಅಪರಾಧಗಳು" ಎಂಬುದು ἀνομία (*anomia*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದು "ಧರ್ಮಶಾಸ್ತ್ರ" (νόμος, *nomos*) ಎಂಬದಕ್ಕೆ ನಕಾರಾತ್ಮಕವನ್ನು (α, *a*) ಸೇರಿಸುತ್ತದೆ. ಈ ಪದವು ದೇವರ ಚಿತ್ತದ ಬಗ್ಗೆ ಸ್ವಲ್ಪವೂ ಗಣನೆ ಕೊಡದ ವ್ಯಕ್ತಿಯನ್ನು ಚಿತ್ರಿಸುತ್ತದೆ.

ಮುಂದೆ, 23ನೇ ವಚನವು ಹೇಳುತ್ತದೆ **ಎಲ್ಲರೂ ಹೊಂದದೆ ಹೋಗಿದ್ದಾರೆ.** "ಹೊಂದದೆ ಹೋಗಿದ್ದಾರೆ" ಎಂಬುದು ὑστερέω (*hustereō*) ಎಂಬದರಿಂದ ಬಂದಿದೆ, ಅದರರ್ಥವು "ಕಮ್ಮಿಯಾಗಿರು . . . ಕೊರತೆಯಾಗು."[60] ಇದನ್ನು ಒಬ್ಬ ಓಟಗಾರನು ಓಟ ಸ್ಪರ್ಧೆಯಲ್ಲಿ ಗೆರೆಯನ್ನು ಮುಟ್ಟಲಾರದೆ ಹೋಗುವದಕ್ಕೆ ಉಪಯೋಗಿಸಬಹುದು. ನಾವು ಒಬ್ಬ ಬಿಲ್ಲುಗಾರನ ಸಾದೃಶ್ಯವನ್ನು ಉಪಯೋಗಿಸುವದಾ ದರೆ, ಆತನ ಬಿಲ್ಲು ಗುರಿಗಿಂತ ಹಿಂದೆ ಬೀಳುವ ಮೂಲಕ "ಗುರಿಯನ್ನು ತಪ್ಪುವದನ್ನು" ಸೂಚಿಸುವದಕ್ಕೆ ಈ ಪದವನ್ನು ಉಪಯೋಗಿಸಬಹುದು.[61] "ಕಡಿಮೆಯಾಗು (ಹೊಂದದೆ ಹೋಗು)" ಎಂಬದು ಗ್ರೀಕ್.ನಲ್ಲಿ ವರ್ತಮಾನ ಕಾಲದಲ್ಲಿರುತ್ತದೆ ಮತ್ತು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ನಾವು ಗತಕಾಲದಲ್ಲಿ ಪಾಪ ಮಾಡಿ ಪಾಪಿಗಳಾಗಿದ್ದು ಮಾತ್ರವಲ್ಲದೆ, ನಾವು ಅನುದಿನವೂ ಪಾಪ ಮಾಡುವವರಾಗಿರುತ್ತೇವೆ!

ನಾವೆಲ್ಲರೂ "ಹೊಂದದೆ ಹೋಗುವ (ಕಡಿಮೆ ಬೀಳುವ)" "ಗುರಿ"ಯು ಯಾವದೆಂದರೆ **ದೇವರ ಮಹಿಮೆಯೇ.** "ದೇವರ ಮಹಿಮೆ (δόξα, *doxa*)" ಎಂಬುದು ತನ್ನ ಅತ್ಯಂಥ ಉನ್ನತ ಅರ್ಥದಲ್ಲಿ, ಆತನ ಸ್ವಂತ ಅಮೋಘ ಪ್ರಸನ್ನತೆಯ ವ್ಯಕ್ತ ಪಡಿಸುವಿಕೆಯಾಗಿದೆ; ಆದರೆ ದೇವರ ಆ ಮಹಿಮೆಯನ್ನು ತನ್ನ ಜನರೊಂದಿಗೆ ಹಂಚಿಕೊಳ್ಳಲು ಇಚ್ಚಿಸುತ್ತಾನೆಂದು ಬೈಬಲ್ ಕಲಿಸುತ್ತದೆ (ನೋಡಿರಿ 8:18; 9:23). ಅಲ್ಲದೆ, ನಾವು ಭೂಮಿಯ ಮೇಲಿರುವ ಉದ್ದೇಶವು ದೇವರನ್ನು ಮಹಿಮೆ ಪಡಿಸುವದು ಎಂಬದಾಗಿ ಸಹ ಬೈಬಲ್ ಸಾರುತ್ತದೆ (ನೋಡಿರಿ 4:20; 11:36; ಯೆಶಾಯ 43:7; ಮತ್ತಾಯ 5:16). "ದೇವರ ಮಹಿಮೆ" ಎಂಬ ಪದದಲ್ಲಿ ಬಹಳಷ್ಟು ಅಡಗಿರುತ್ತದೆ, ಅದನ್ನು ಅನುವಾದಕರು ಏಕ ಪದದಲ್ಲಿ ವ್ಯಕ್ತಪಡಿಸುವದಕ್ಕೆ ಕಷ್ಟಪಡುತ್ತಾರೆ. NEBಯು ಇದನ್ನು "ದೈವಿಕ ವೈಭವ" ಎನ್ನುತ್ತದೆ, TEVಯು ಅದನ್ನು "ದೇವರ ರಕ್ಷಣೆಯುಂಟು ಮಾಡುವ ಪ್ರಸನ್ನತೆ" ಎನ್ನುತ್ತದೆ. Phillips ತರ್ಜುಮೆ ಇದನ್ನು ಈ ಭಾವಾರ್ಥದಲ್ಲಿ ಹೇಳುತ್ತದೆ, "ದೇವರ ಸಂಕಲ್ಪದ ಸೌಂದರ್ಯ," NLTಯು ಇದನ್ನು "ದೇವರ ಮಹಿಮಕರವಾದ ಮಾನದಂಡ" ಎನ್ನುತ್ತದೆ.

ನಾವು ಪ್ರಮುಖವಾಗಿ "ದೇವರ ಮಹಿಮೆ" ಎಂಬುದು ಆತನ ಸ್ವಂತ ಮಹಿಮೆ ಎಂದು ಭಾವಿಸುತ್ತೇವೋ ಅಥವಾ ನಮಗಾಗಿ ಕೊಡಲಿಚ್ಚಿಸಿದ ಮಹಿಮೆಯೆಂದು ಭಾವಿಸುತ್ತೇವೋ, ಹೇಗೆ ತೆಗೆದುಕೊಂಡರೂ ನಾವು ಅದಕ್ಕೆ "ಕೊರತೆಯಾಗಿ (ಕಡಿಮೆಯಾಗಿ)" ಕಂಡಿದ್ದೇವೆ. ಆತನ ಸ್ವಮಹಿಮೆಯ ವಿಷಯವಾಗಿ ನೋಡುವದಾದರೆ, ನಾವು ಆ ಮಹಿಮೆಯನ್ನು ನೋಡುವಾಗ ನಾವು ಎಷ್ಟು ಕೆಟ್ಟವರು ಎಂಬದು ತಿಳಿದುಬರುತ್ತದೆ (3:10-18). ಆತನು ನಮಗೆ ಕೊಡಬೇಕೆಂದಿದ್ದ ಮಹಿಮೆ ವಿಷಯವಾಗಿ ನೋಡಿದರೆ, ನಾವು ಏನಾಗಿರಬೇಕೆಂದು ಆತನ ಇಚ್ಚೆಯಾಗಿತ್ತೋ ಅದಕ್ಕೆ ನಾವು ಎಷ್ಟು ಕಡಿಮೆಯಾಗಿದ್ದೇವೆಂಬುದು ತಿಳಿಯುತ್ತದೆ!

**ವಚನ 24a.** 1:18-3:20 ರಲ್ಲಿ ಸ್ಥಾಪಿಸಲ್ಪಟ್ಟ ಪ್ರಕಾರ, ನಾವೆಲ್ಲರೂ ಪಾಪಿಗಳು, ನಮ್ಮನ್ನು ನಾವೇ ರಕ್ಷಿಸಿಕೊಳ್ಳಲು ಅಶಕ್ತರು. *ದೇವರು* ಅದನ್ನು ಸರಿಪಡಿಸಲು ಮೊದಲ ಹೆಜ್ಜೆಯನ್ನಿಟ್ಟಿದ್ದನು. "ದೇವರಿಂದ ದೊರಕುವ ನೀತಿಯು ಪ್ರಕಟವಾಗಿದೆ. . . . ದೇವರಿಂದ ದೊರಕುವ ನೀತಿಯು. . . . ನಂಬುವವರೆಲ್ಲರಿಗೆ ದೊರಕುವಂತದು" ಎಂಬದಕ್ಕಾಗಿ ನಾವು ಎಷ್ಟು ಕೃತಜ್ಞತೆ ಉಳ್ಳವರಾಗಿರಬೇಕು (3:21, 22)! ಇನ್ನೊಂದು ವಿಸ್ಮಯಕರವಾದ ಸತ್ಯವೇನೆಂದರೆ, ಎಲ್ಲರಿಗೂ ದೇವರ ನೀತಿಯ ಅಗತ್ಯವಿರುವದರಿಂದ, ಅದು ಎಲ್ಲರಿಗೂ ಲಭ್ಯವಿರುತ್ತದೆ.

ಅದು ಹೇಗೆ ಸಾಧ್ಯವಾಗುತ್ತದೆ? ನೀತಿಯುಳ್ಳ ದೇವರು ಸ್ಪಷ್ಟವಾಗಿಯೂ ಸಂಪೂರ್ಣವಾಗಿಯೂ ಅನೀತಿವಂತರಾಗಿರುವ ಜನರನ್ನು ಹೇಗೆ ನೀತಿವಂತರೆಂದು ಎಣಿಸುವದಕ್ಕೆ ಸಾಧ್ಯ? 24ನೇ ವಚನದಲ್ಲಿ, ದೇವರು ಮಾನವರಿಗೆ ಒದಗಿಸಿರುವ ದಾರಿಯ ಮರ್ಮದ ಕಡೆಗೆ ಸಾಗುತ್ತೇವೆ: ಅನೀತಿವಂತ ಜನರನ್ನು ದೇವರು ಹೇಗೆ ನೀತಿವಂತರೆಂದು ಘೋಷಿಸುವದಕ್ಕೆ ಶಕ್ತನಾದನು. ಈ ಮಹತ್ವದ ವಿಷಯದ ಕುರಿತ ನಮ್ಮ ಚರ್ಚೆಯನ್ನು ನಾವು ಎರಡು ಪದಗಳನ್ನು ಎತ್ತಿ ತೋರಿಸುವ ಮೂಲಕ ಆರಂಭಿಸಿದೆವು: "ನೀತಿವಂತರೆಂದು ಎಣಿಸಿದನು" ಮತ್ತು "ಕೃಪೆ."

22 ಮತ್ತು 23 ವಚನಗಳ ಮುಕ್ತಾಯವನ್ನು ಒಂದು ಪ್ರಕ್ಷೇಪ (ಪ್ರತ್ಯೇಕ) ವಿಚಾರವಾಗಿ ನೋಡಬಹುದು, 24ನೇ ವಚನವು ಪುನಃ 22ನೇ ವಚನದಲ್ಲಿ ಹೇಳಲಾದ ಆರಂಭಿಕ ವಿಚಾರವನ್ನು ಮುಂದುವರೆಸುತ್ತದೆ: "ದೇವರಿಂದಾಗುವ ನೀತಿಯು. . . .

ನಂಬುವವರೆಲ್ಲರಿಗೆ," **ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ.** ನಾವು ಎತ್ತಿತೋರಿಸಲಿಚ್ಚಿಸುವ ಮೊದಲ ಪದವೆಂದರೆ "ನೀತಿವಂತರೆಂಬ ನಿರ್ಣಯಹೊಂದಿದ" (δικαιόω, *dikaioō*). ನಾವು 3:21–5:21 ವಚನಗಳನ್ನು "ನೀತಿನಿರ್ಣಯ" ದ ವಿಭಾಗವೆಂದು ನೇಮಿಸುವದರಿಂದ, ನಾವು ಆ ಪದದ ಅರ್ಥವನ್ನು ತಿಳಿಯುವ ಅಗತ್ಯವಿರುತ್ತದೆ.

ಗ್ರೀಕ್ ಪದಗಳಾದ "ನೀತಿ" ಮತ್ತು "ನೀತಿನಿರ್ಣಯ" ಎಂಬವುಗಳು "ಸದಾಚಾರ" ಮತ್ತು "ನ್ಯಾಯಬದ್ಧವಾದ" ಎಂಬ (δίκη, *dikē*) ಪದಗಳ ಕುಟುಂಬಕ್ಕೆ ಸೇರಿದವು ಗಳಾಗಿವೆ. ಹೇಗೂ, 24ನೇ ವಚನವು ರೋಮಾಪುರ ಪತ್ರಿಕೆಯಲ್ಲಿಯೇ ಮೊದಲ ಬಾರಿಗೆ ಈ ನಮೂನೆಯ *dikaioō* ಪದವನ್ನೊಳಗೊಂಡಿರುತ್ತದೆ. ಹೊಸ ಒಡಂಬಡಿಕೆಯಲ್ಲಿ *dikaioō* ಉಪಯೋಗದೊಂದಿಗೆ, "ನಾವು ಹೆಚ್ಚು ಕಡಿಮೆ ಯಾವಾಗಲೂ ಒಂದು ಕಾನೂನು ಸಂಬಂಧವನ್ನು ಕಾಣುತ್ತೇವೆ."[62] "ನೀತಿವಂತರೆಂಬ ನಿರ್ಣಯಿಸಲ್ಪಟ್ಟರು" ಎಂಬದಕ್ಕೆ Phillips ನಲ್ಲಿ "ಉಚಿತವಾಗಿ ನಿರಪರಾಧಿಯೆಂದು ಬಿಡುಗಡೆಗೊಳಿಸಲ್ಪಟ್ಟರಿ" ಎಂದಿರುತ್ತದೆ.

"ನೀತಿವಂತರೆಂಬ ನಿರ್ಣಯ" ಎಂಬ ಪದವು ನಾವು "ನೀತಿವಂತರಾಗಿಸಲ್ಪಟ್ಟೆವು" ಎಂದರ್ಥವಾಗಿರುವದಿಲ್ಲ, ಆದರೆ ನಾವು ದೇವರಿಂದ "ನೀತಿವಂತರೆಂದು ನಿರ್ಣಯಿಸಲ್ಪ ಟ್ಟಿದ್ದೇವೆ" ಎಂದಾಗಿರುತ್ತದೆ.[63] ಆತನು ನಮ್ಮನ್ನು ನಾವು ನೀತಿವಂತರೆನೋ ಎಂಬಂತೆ ನಡಿಸಿಕೊಳ್ಳುತ್ತಾನೆ. ಕೆಲವರು ಪದಗಳನ್ನು ಚಾತುರ್ಯದಿಂದ ಉಪಯೋಗಿಸಿ ಹೀಗೆ ವ್ಯಕ್ತಪಡಿಸುತ್ತಾರೆ: "ಅದು ನಾನೆಂದೂ ಮುಂಚೆ ಪಾಪವನ್ನೇ ಮಾಡಿರಲಿಲ್ಲ ಎಂಬಂತಿ ರುತ್ತದೆ." ಅದನ್ನು ಆಂಗ್ಲದಲ್ಲಿ ವೇಗವಾಗಿ ಹೇಳಿದರೆ ಮೇಲಿನಂತೆಯೇ "just-if-ied never sinned" ಎಂಬಂತೆ ಇರುತ್ತದೆ.

ನಾನು ಮತ್ತು ನೀವು ಪಾಪಿಗಳಾಗಿರುವದರಿಂದ, ನಮ್ಮನ್ನು ನಾವು ಎಂದಿಗೂ "ನೀತಿವಂತರಾಗಿಸಿ" ಕೊಳ್ಳಲು ಸಾಧ್ಯವಿಲ್ಲ. ಹಾಗಾದರೆ, ಅದು ಹೇಗೆ ಸಂಭವಿಸಬಲ್ಲದು? ನಮ್ಮ ವಾಕ್ಯಭಾಗವು ಮುಂದುವರೆಯುತ್ತದೆ, "ನೀತಿವಂತರೆಂದು ನಿರ್ಣಯ ಹೊಂದುವದು ಆತನ ಉಚಿತಾರ್ಥವಾದ ಕೃಪೆಯಿಂದಲೇ" (ಒತ್ತಿ ಹೇಳಿದ್ದು ನನ್ನದು). "ಉಚಿತಾರ್ಥ ವರ" ವೇ ನೀತಿವಂತರೆಂಬ ನಿರ್ಣಯಿಸುವ *ರೀತಿ* ಆಗಿದ್ದರೆ, "ಆತನ ಕೃಪೆಯಿಂದಲೇ' ಎಂಬುದು *ದಾರಿ* ಆಗಿರುತ್ತದೆ. "ಉಚಿತಾರ್ಥ" ಎಂಬುದು ಒಂದೇ ಗ್ರೀಕ್ δωρεάν (*dōrean*) ಪದದಿಂದ ಬಂದಿರುತ್ತದೆ, "ವರ" (δωρεά, *dōrea*) ಎಂಬ ಪದದಿಂದ ತೆಗೆದುಕೊಳ್ಳಲ್ಪಟ್ಟಿರುತ್ತದೆ. *dōrean* ಅಂದರೆ "ಒಂದು ವರದ ರೀತಿಯಲ್ಲಿ."[64] ಒಂದು ಸರಳ ಅನುವಾದವು "ಉಚಿತವಾಗಿ" ಎಂದಾಗುತ್ತದೆ.[65]

ನಾವು ಈ ಮುಂಚೆ ರೋಮ 1:5, 7 ರಲ್ಲಿ (χάρις, *charis*) "ಕೃಪೆ" ಎಂಬ ಪದದ ಬಗ್ಗೆ ಕಲಿತಿದ್ದೇವೆ; ಆದರೆ ಇಲ್ಲಿ ಇದೇ ಮೊದಲ ಬಾರಿಗೆ ನಾವು *ರಕ್ಷಣೆ ಹೊಂದಿದ್ದು* ಕೃಪೆಯಿಂದಲೇ ಎಂಬ ಮಹಾ ಸತ್ಯದ ಬಗ್ಗೆ ಹೇಳಲ್ಪಟ್ಟಿದ್ದೇವೆ (ನೋಡಿರಿ ಎಫೆಸ 2:8). "ಕೃಪೆ" ಎಂಬುದು ರೋಮಾಪುರ ಪತ್ರಿಕೆಯಲ್ಲಿ ಇನ್ನೊಂದು ಮುಖ್ಯ ಪದವಾಗಿದೆ, ಕನಿಷ್ಠ ಇಪ್ಪತ್ತು ಸಾರಿ ಕಾಣಿಸಿಕೊಳ್ಳುತ್ತದೆ. *Charis* ಎಂಬದರ ಮೂಲ ಪದವು ಒಂದು ಕ್ರಿಯಾಪದವಾಗಿದ್ದು ಅದರ ಅರ್ಥವು "ಸಂತೋಷಿಸು" ಎಂದಾಗಿರುತ್ತದೆ.[66] *Charis* ಎಂಬುದೇ ಪೌಲನ "ಕೇಂದ್ರ ಪರಿಕಲ್ಪನೆ" ಆಗಿರುತ್ತದೆ, ಅದರಲ್ಲಿ ಮೂಲ ವಿಚಾರವು "ಉಚಿತಾರ್ಥವಾಗಿ ಕೊಡುವದು" ಸೇರಿರುತ್ತದೆ.[67] "ಕೃಪೆ" ಎಂಬುದು "ಅರ್ಹರಲ್ಲದ ವರಿಗೆ ಸಿಕ್ಕುವ ದಯೆ" ಆಗಿದೆ (ನೋಡಿರಿ

AB) ಮತ್ತು "ಸಂಪಾದಿಸಿಕೊಳ್ಳಲಾಗದ" ಸಂಗತಿಯಾಗಿದೆ.

**ವಚನ 24b.** ನಾವು ನೀತಿವಂತರೆಂದು ನಿರ್ಣಯ ಹೊಂದುವದು **ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು.** ಅನುವಾದಿಸಲ್ಪಟ್ಟ "ವಿಮೋಚನೆಯು" (ἀπολύτρωσις, *apolutrōsis*) ಎಂಬ ಪದವು "ಈಡು" (λύτρωσις, *lutrōsis*) ಎಂಬದರ ಬಲಗೊಂಡ ಪದವಾಗಿರುತ್ತದೆ, ಅದು ಕ್ರಿಸ್ತನ ಮರಣದ ಮಹತ್ವವನ್ನು ಸೂಚಿಸುವದಕ್ಕೆ ಉಪಯೋಗಿಸಲಾದ ಪದವಾಗಿರುತ್ತದೆ (ಇಬ್ರಿಯ 9:12; ನೋಡಿರಿ ಮತ್ತಾಯ 20:28; 1 ತಿಮೊಥೆ 2:6). *Apolutrōsis* "ಎಂಬುದು ಒಬ್ಬ ಬಂಧಿಯನ್ನು ಆತನ ಬಂಧನಕಾರರಿಂದ ಬಿಡಿಸುವದಕ್ಕೆ ಈಡು ಕೊಡುವದನ್ನು ಅಥವಾ ಒಡೆಯನ ಕೈಯೊಳಗಿಂದ ಒಬ್ಬ ಗುಲಾಮನನ್ನು ಬಿಡುಗಡೆಗೊಳಿಸುವದನ್ನು ಸೂಚಿಸಲು ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತಿತ್ತು."[68] ರೋಮಾ 3:9 ರಲ್ಲಿ, ಪೌಲನು ಪಾಪವನ್ನು ಒಬ್ಬ ಕ್ರೂರ ಯಜಮಾನನೆಂಬಂತೆ ಚಿತ್ರಿಸುತ್ತಾ ಹೀಗೆ ಬರೆದನು "ಯೆಹೂದ್ಯರಾಗಲಿ ಅನ್ಯಜನರಾಗಲಿ ಪಾಪಕ್ಕೆ [ಪಾಪದ ಅಧಿಕಾರ ಮತ್ತು ಪ್ರಾಬಲ್ಯಕ್ಕೆ] ಒಳಬಿದ್ದವರು." ಆ ದುರಂತಕರ ಸ್ಥಿತಿಯಿಂದ ಮಾನವರು ಹೇಗೆ ವಿಮೋಚಿಸಲ್ಪಡುವದಕ್ಕೆ ಸಾಧ್ಯವಾಯಿತು? ಕ್ರಿಸ್ತನು ನಮಗಾಗಿ "ಈಡು" ಕೊಟ್ಟು ಬಿಡಿಸಬೇಕಾಯಿತು.

ವಚನ 25 ರಲ್ಲಿ, ಮೊದಲ ಬಾರಿಗೆ ಈ ಪತ್ರಿಕೆಯಲ್ಲಿ, ನೀತಿವಂತರೆಂಬ ನಿರ್ಣಯವು ಕ್ರಿಸ್ತನ ರಕ್ತಕ್ಕೆ ಜೋಡಿಸಲ್ಪಟ್ಟಿದೆ-ಆದರೆ ಅದು ಕಡೇ ಬಾರಿ ಸಹ ಆಗುವದಿಲ್ಲ. 5:9 ರಲ್ಲಿ, ಪೌಲನು "ಆತನ ರಕ್ತದಿಂದ ನೀತಿವಂತರಾಗಿರಲಾಗಿ" ಎಂದು ಬರೆಯುತ್ತಾನೆ. ಪೇತ್ರನು ಸಹ ಅದನ್ನು ದೃಡಿಕರಿಸುತ್ತಾನೆ, "ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ" (1 ಪೇತ್ರ 1:18, 19). ಪಾಪದೊಳಗೆ ಹೋಗಲು *ಅನೇಕ* ದಾರಿಗಳುಂಟು, ಆದರೆ ಪಾಪದಿಂದ ಹೊರಬರುವದಕ್ಕೆ ಇರುವದು *ಒಂದೇ* ದಾರಿ: ಯೇಸುವಿನ ರಕ್ತದ ಮೂಲಕವೇ. ಇಬ್ರಿಯ ಪುಸ್ತಕದ ಲೇಖಕನು ಹೀಗೆ ಬರೆದನು "ರಕ್ತದಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22). "ವಿಮೋಚನಾಕಾರ್ಯದಲ್ಲಿ ಪ್ರಬಲವಾಗಿರುವ ಬಣ್ಣವು ರಕ್ತವಾಗಿದೆ [ಕೆಂಪು]."[69]

"ಯೇಸುವಿನ ರಕ್ತವು" ಯೇಸುವಿನ ಮರಣಕ್ಕೆ-ಯೇಸು ನಮ್ಮ ಪಾಪಗಳ ಅಪರಾಧವನ್ನು ಹೊತ್ತುಕೊಂಡನು-ಲಕ್ಷಣಾಲಂಕಾರ ಪದವಾಗಿದೆ (ಬದಲಾಗಿ ಉಪಯೋಗಿಸಲಾಗುವ ಪದವಾಗಿದೆ).[70] ಕೆಳಗಿನ ಎಲ್ಲಾ ಪದಗಳು, ಯೇಸುವಿಗೆ ಅನ್ವಯಿಸಲ್ಪಡುವಾಗ ಒಂದೇ ವಿಮೋಚನಾ ಕ್ರಿಯೆಯನ್ನು ಸೂಚಿಸುತ್ತವೆ: "ರಕ್ತ," "ಶಿಲುಬೆ," "ಶಿಲುಬೆಗೇರಿಸಲ್ಪಡುವಿಕೆ," "ಶ್ರಮೆ," "ಮರಣ."

ರಕ್ತದ ಮೂಲಕವಾದ ಈ ವಿಮೋಚನೆಯು "ಕ್ರಿಸ್ತಯೇಸುವಿನಲ್ಲಿ" ಆಗಿದೆ (ಒತ್ತಿ ಹೇಳಿದ್ದು ನನ್ನದು) "ಕ್ರಿಸ್ತನಲ್ಲಿ" ಎಂಬುದು ಪೌಲನ ನೆಚ್ಚಿನ ಪದಗಳಲ್ಲೊಂದಾಗಿದೆ. (ಆತನು ಅದನ್ನು 169 ಸಾರಿ ಉಪಯೋಗಿಸಿದನು!)[71] ಅದು ಒಬ್ಬ ಕ್ರೈಸ್ತನು ತನ್ನ ಒಡೆಯನೊಂದಿಗೆ ಹೊಂದಿರುವ ಆಪ್ತವಾದ, ನಿಕಟ ಸಂಬಂಧವನ್ನು ಸೂಚಿಸುತ್ತದೆ. ರೋಮಾ 6:3 ರಲ್ಲಿ, "ಕ್ರಿಸ್ತಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವು" ಎಂದು ಓದುತ್ತೇವೆ.

ನಾವು "ವಿಮೋಚನೆ" ಎಂಬ ಪದದ ಮೇಲಿನ ಚರ್ಚೆಯನ್ನು ನಿಲ್ಲಿಸುವ ಮೊದಲು, ಹಲವಾರು ವರ್ಷಗಳ ಹಿಂದೆ ವಿದ್ವಾಂಸರು "ಯಾರಿಗೆ ಈಡು ಸಂದಾಯ ಮಾಡಲ್ಪಟ್ಟಿತು?"

ಎಂಬ ಬಗ್ಗೆ ವಾಗ್ವಾದ ನಡೆಸಿದರೆಂಬುದನ್ನು ಇಲ್ಲಿ ನಾನು ಪ್ರಸ್ತಾಪಿಸಲೇಬೇಕು. ನಿಯಮದ ಪ್ರಕಾರ, ಒಂದು ಅಂಶವನ್ನು ಸ್ಪಷ್ಟಗೊಳಿಸುವದಕ್ಕಾಗಿ ಸಾದೃಶ್ಯ ಪದವನ್ನು ಉಪಯೋಗಿಸಲಾಗಿದೆ ಹೊರತು ಅನೇಕ ಅಂಶಗಳನ್ನು ಉಂಟುಮಾಡುವದಕ್ಕೆ ಅಲ್ಲ. ಉದಾಹರಣೆಗೆ, ಯೇಸು "ಬಾಗಲು" ಆಗಿದ್ದಾನೆ (ಯೋಹಾನ 10:9), ಆದರೆ ಆತನು ಕೀಲು (ತಿರುಗಣೆ) ಮೇಲೆ ತಿರುಗುತ್ತಾನೆಂದು ಅರ್ಥವಲ್ಲ. "ಯಾರಿಗೆ ಈಡು ಸಂದಾಯ ಮಾಡಲ್ಪಟ್ಟಿತು?" ಎಂದು ಕೇಳುವದು ಆ ಸಾದೃಶ್ಯವನ್ನು ಅತಿಯಾಗಿ ಅರ್ಥಕಲ್ಪಿಸಲು ಎಳೆದೊಯ್ಯುವ ಪ್ರಯತ್ನವಾಗುತ್ತದೆ. ನಾವು ಒಬ್ಬ ಕ್ರೀಡಾಪಟುವು "ತನ್ನ ತಂಡದ ಹಿತಕ್ಕಾಗಿ ತನ್ನನ್ನು ತ್ಯಾಗ ಮಾಡಿಕೊಂಡನು" ಎಂದು ಹೇಳಿದರೆ, "ಆತನು ಯಾವ ಹಿತಕ್ಕಾಗಿ ತನ್ನನ್ನು ತ್ಯಾಗಮಾಡಿಕೊಂಡನು?" ಎಂದು ಕೇಳುವದಿಲ್ಲ. ಈಡು ಕೊಡುವ ಸಾದೃಶ್ಯದ ತಾತ್ಪರ್ಯವೇನೆಂದರೆ, ನಾವು ಪಾಪಕ್ಕೆ ದಾಸರಾಗಿದ್ದೆವು, ನಮ್ಮನ್ನು ನಾವೇ ಬಿಡಿಸಿಕೊಳ್ಳಲು ಯಾವ ದಾರಿಯೂ ಇಲ್ಲದವರಾಗಿದ್ದೆವು, ಮತ್ತು ನಮ್ಮ ಬಿಡುಗಡೆಯನ್ನು ದೊರಕಿಸಿಕೊಳ್ಳಲು ಯೇಸು *ಮರಣಿಸಬೇಕಾಯಿತು* !

**ವಚನ 25a.** ವಚನ 24 "ಕ್ರಿಸ್ತ ಯೇಸು" ಎಂಬ ಮಾತುಗಳಿಂದ ಮುಕ್ತಾಯಗೊಂಡಿತು. ದೇವರು ಈತನನ್ನು ಮುಂದಿಟ್ಟನು ಎಂದು ಹೇಳುವಾಗ ಪೌಲನು ಆಗಲೂ ಯೇಸುವಿನ ಬಗ್ಗೆಯೇ ಮಾತಾಡುತ್ತಿದ್ದಾನೆ. "ಮುಂದಿಟ್ಟನು (ಸಾರ್ವಜನಿಕವಾಗಿ)" ಎಂಬುದು προτίθημι (*protithēmi*) ಎಂಬ ಒಂದು ಸಂಯುಕ್ತ ಪದದಿಂದ ಬಂದದ್ದಾಗಿದ್ದು, ಅದರರ್ಥವು "ಮುಂದೆ ನಿಲ್ಲಿಸು" ಎಂದಾಗಿರುತ್ತದೆ. ಇದು τίθημι (*tithēmi*, "ನಿಲ್ಲಿಸು ಅಥವಾ ಇಡು") ಮತ್ತು πρό (*pro*, "ಮುಂಚೆ")[72] ಎಂಬ ಪದಗಳ ಸಮ್ಮಿಲನವಾಗಿರುತ್ತದೆ.

ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮರಣಿಸಿದಾಗ ದೇವರು ಮಾನವರ ಮೇಲಿನ ತನ್ನ ಪ್ರೀತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದನು. ತಮ್ಮ ನಿಗೂಢತೆಯಿಂದ ಪರಿಚಿತವಾಗಿದ್ದ ಪ್ರಥಮ ಶತಮಾನದ "ನಿಗೂಢ ಪಾಷಂಡಮತಗಳಿಗೆ" ತದ್ವಿರುದ್ಧವಾಗಿ, ಸುವಾರ್ತೆಯು "ಮೂಲೆಯಲ್ಲಿ ನಡೆದ ಕಾರ್ಯವಾಗಿರಲಿಲ್ಲ" (ಅಪೊಸ್ತಲರ ಕೃತ್ಯಗಳು 26:26). ಯೇಸುವಿನ ಸೇವೆಯು ಸಾರ್ವಜನಿಕವಾಗಿತ್ತು, ಆತನು ಜನಸಮೂಹಗಳಿಗೆ ಉಪದೇಶಿಸಿದನು ಮತ್ತು ಅವರ ರೋಗಗಳನ್ನು ಸ್ವಸ್ಥಗೊಳಿಸಿದನು. ಯೆರೂಸಲೇಮಿನ ಹೊರಗೆ ಆತನ ಶಿಲುಬೆಗೇರಿಸಲ್ಪಡುವಿಕೆಯು ಒಂದು ಅಧಿಕೃತ ಹಾಗೂ ಸಾರ್ವಜನಿಕವಾಗಿ ನಡೆದ ಘಟನೆಯಾಗಿತ್ತು, ಅನೇಕ ಜನರು ಸಾಕ್ಷಿಗಳಾಗಿದ್ದರು. ಆತನ ಶಿಷ್ಯರಿಂದ ಸಾರಲ್ಪಟ್ಟ ಸುವಾರ್ತೆಯು ಸಹ ಸಾರ್ವಜನಿಕವಾಗಿಯೇ ಬೋಧಿಸಲ್ಪಡುತ್ತಿತ್ತು.[73]

ಅದು ನಮ್ಮನ್ನು ಅಪರಿಚಿತವಾದ ಪದಕ್ಕೆ ಕರೆತರುತ್ತದೆ, ಅದು ನಮ್ಮ ಬುದ್ಧಿಗೆ ಸವಾಲು ನೀಡುವದಾಗಿದೆ, ದೇವರು ಹೇಗೆ ದುಷ್ಟರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆಂಬುದರ ಹೃದಯಭಾಗಕ್ಕೆ ನಮ್ಮನ್ನು ಕರೆದೊಯ್ಯುತ್ತದೆ: ಆ ಪದವು "ಪ್ರಾಯಶ್ಚಿತ್ತಗೊಳಿಸುವಿಕೆ" (ಶಾಂತಗೊಳಿಸುವಿಕೆ). ಪೌಲನು ಹೇಳಿದ್ದೇನೆಂದರೆ ದೇವರು ಕ್ರಿಸ್ತನನ್ನು . . . **ಈತನು ತನ್ನ ರಕ್ತವನ್ನು**[74] **ಸುರಿಸಿ. . . ಕೃಪಾಧಾರವಾಗಿದ್ದಾನೆಂದು** ತೋರಿಸುತ್ತಿದ್ದಾನೆ. NASB ಯಲ್ಲಿ "ಪ್ರಾಯಶ್ಚಿತ್ತ" ಎಂಬ ಪದವು ಈ ಸ್ಫೂರ್ತಿದಾಯಕ ವಾಕ್ಯ ಭಾಗಗಳಲ್ಲಿ ಸಿಕ್ಕುತ್ತದೆ:[75]

> . . . ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣ

ಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾ ಯಾಜಕನಾದನು (ಇಬ್ರಿಯ 2:17; ಒತ್ತಿ ಹೇಳಿದ್ದು ನನ್ನದು).

ಆತನು ನಮ್ಮ ಪಾಪಗಳನ್ನು ನಿವಾರಣಮಾಡುವ *ಯಜ್ಞವಾಗಿದ್ದಾನೆ*; ನಮ್ಮ ಪಾಪಗಳನ್ನು ಮಾತ್ರವಲ್ಲದೆ. ಸಮಸ್ತ ಲೋಕದ ಪಾಪಗಳನ್ನು ಸಹ *ನಿವಾರಣಮಾಡುತ್ತಾನೆ* (1 ಯೋಹಾನ 2:2; ಒತ್ತಿ ಹೇಳಿದ್ದು ನನ್ನದು).

ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ *ಪಾಪನಿವಾರಣಾರ್ಥವಾಗಿ* ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿಬರುತ್ತದೆ (1 ಯೋಹಾನ 4:10; ಒತ್ತಿ ಹೇಳಿದ್ದು ನನ್ನದು).

"ಪಾಪನಿವಾರಣ" ಎಂಬುದು ಕೆಲವು ಧರ್ಮಗಳ ಜನರಲ್ಲಿ ಹೆಚ್ಚು ನೆಚ್ಚಿನ ಪದವಾಗಿರುವದಿಲ್ಲ. ಕೆಲವರು ಇದನ್ನು ನಮ್ಮ ಶಬ್ದಕೋಶದಿಂದ ಅಳಿಸಿ ಹಾಕಲು ಇಚ್ಛಿಸುವದಕ್ಕೆ ಒಂದು ಕಾರಣವೆಂದರೆ ಅದು ಜನಸಾಮಾನ್ಯನಿಗೆ ಅಪರಿಚಿತವಾದ ಪದವಾಗಿರುತ್ತದೆ. ಸತ್ಯವೇದದ ಪದಗಳ ಪರಿಚಯವಿಲ್ಲದವರಿಗೆ ಸ್ಪಷ್ಟವಾದ ರೀತಿಯಲ್ಲಿ ತಿಳಿಯಪಡಿಸುವದು ಪ್ರಾಮುಖ್ಯವಾಗಿರುತ್ತದೆ; ನಮ್ಮ ಸಂದೇಶವನ್ನು ಬೇಕೆಂದೇ ಅಸ್ಪಷ್ಟಗೊಳಿಸುವದರಲ್ಲಿ ಅರ್ಥವಿಲ್ಲ. ಹೇಗೂ, ಕೆಲವು ದೈವಶಾಸ್ತ್ರಿಕ ಪದಗಳು ಅತ್ಯಂಥ ಅರ್ಥದಿಂದ ತುಂಬಿದವುಗಳಾಗಿದ್ದು ಅವುಗಳನ್ನು ನಾವು ನಿರ್ಲಕ್ಷಿಸುವದಕ್ಕಾಗುವದಿಲ್ಲ.[76] "ಪಾಪನಿವಾರಣೆ (ಪ್ರಾಯಶ್ಚಿತ್ತ)" ಎಂಬದು ಅಂತಹ ಪದಗಳಲ್ಲೊಂದಾಗಿದೆ.

"ಪಾಪನಿವಾರಣೆ (ಪ್ರಾಯಶ್ಚಿತ್ತ)" ಎಂಬುದು ಜನಪ್ರಿಯವಾಗದಿರುವದಕ್ಕೆ ಎರಡನೆಯ ಕಾರಣವೆಂದರೆ, ಅದು ಸೂಚಿಸುವ ಅರ್ಥದ ವಿಷಯದಲ್ಲಿ ಅನೇಕರಿಗೆ ಇರಸುಮುರುಸು ಉಂಟಾಗುತ್ತದೆ: ದೇವರ *ಕೋಪಾಗ್ನಿ*ಯನ್ನು ಶಾಂತಗೊಳಿಸುವ ಅವಶ್ಯಕತೆ. "ಪ್ರಾಯಶ್ಚಿತ್ತ" ಎಂಬದರ ಆಂಗ್ಲ ಪದವು, "ದೇವರನ್ನು ವಿಶೇಷವಾಗಿ ಒಂದು ಸಂಧಾನದ (ರಾಜಿಯ) ಕಾಣಿಕೆಯನ್ನು ನೀಡುವ ಮೂಲಕ ಶಾಂತಗೊಳಿಸುವ (ಪ್ರಸನ್ನಗೊಳಿಸುವ) ಕ್ರಿಯೆ"[77] ಎಂದು ವ್ಯಾಖ್ಯಾನಿಸಲ್ಪಟ್ಟಿದೆ "ಪ್ರಾಯಶ್ಚಿತ್ತ" ಎಂಬದರ ಅನುವಾದಿಸಲ್ಪಟ್ಟ ಗ್ರೀಕ್ ಪದವು (ἱλαστήριον, *hilastērion*) ಅನ್ಯ ಧರ್ಮಿಯರಿಂದ ನಡೆಸಲ್ಪಡುವ "ಪಾಷಂಡ ಪೂಜಾಕ್ರಿಯೆ" ಗಳನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪ ಡುತ್ತಿತ್ತು, ಉದಾಹರಣೆಗೆ ಬಲಿಗಳು, ಅದು "ದೇವರುಗಳಿಗೆ ಪ್ರಸನ್ನಗೊಳಿಸುವ (ಆತನ ಕೋಪವು ಕೆಲವು ಸಾರಿ ಕಾರಣವಿಲ್ಲದೆ ಬರುವ ವಿಚಿತ್ರ ಕೋಪವಾಗಿರುತ್ತಿತ್ತು) ಗುರಿಯನ್ನು ಹೊಂದಿರುವದಾಗಿತ್ತು."[78]

ವ್ಯಾಖ್ಯಾನಕಾರರು ಹಾಗೂ ಅನುವಾದಕರು ವಿರೋಧ ವ್ಯಕ್ತಪಡಿಸುತ್ತಾ ನಿಜ ದೇವರನ್ನು ಅನ್ಯರ ಸುಳ್ಳು ದೇವರ ಸಂಗಡ ಸಮಾನಗೊಳಿಸಲು ಸಾಧ್ಯವಿಲ್ಲ (ಮಾಡ ಕೂಡದು) ಎನ್ನುತ್ತಾರೆ. ಅವರು ಗಮನಕ್ಕೆ ತರುವದೇನೆಂದರೆ ಹಳೇ ಒಡಂಬಡಿಕೆಯ ಗ್ರೀಕ್ ತರ್ಜುಮೆಯು (LXX) "ಕೃಪಾ ಸಿಂಹಾಸನ" ವನ್ನು-(ಒಡಂಬಡಿಕೆಯ ಮಂಜೂಷದ ಮುಚ್ಚಳ)-ಸೂಚಿಸುವದಕ್ಕೆ *hilastērion* ಎಂಬ ಪದವನ್ನು ಮೇಲಿಂದ ಮೇಲೆ ಉಪಯೋಗಿಸುತ್ತದೆ, ಮತ್ತು ಇಬ್ರಿಯ 9:5 ರಲ್ಲಿ *hilastērion* ಸ್ಪಷ್ಟವಾಗಿ ಕೃಪಾ ಸಿಂಹಾಸನವನ್ನು ಸೂಚಿಸುತ್ತದೆ. ಈ ಕೃಪಾ ಸಿಂಹಾಸನದ ಮೇಲೆಯೇ, ವರ್ಷಕ್ಕೊಂದು ಸಾರಿ ಮಹಾಯಾಜಕನು ಜನರ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ಪ್ರಾಣಿಗಳ ರಕ್ತವನ್ನು

ಪ್ರೋಕ್ಷಿಸುತ್ತಿದ್ದನು (ನೋಡಿರಿ ಯಾಜಕಕಾಂಡ 16:14-16; ಇಬ್ರಿಯ 9:7). ಆಕ್ಷೇಪಣೆಕಾರರು "ಪ್ರಾಯಶ್ಚಿತ್ತ" (ಅಥವಾ ಅದಕ್ಕೆ ಹೋಲಿಕೆಯಾದ ಪದ) ಎಂಬುದು *hilastērion* ಪದದ ಉತ್ತಮ ಅನುವಾದವಾಗುವದು ಎಂಬದಾಗಿ ವಾದಿಸುತ್ತಾರೆ (ನೋಡಿರಿ NIV).

ಈ *hilastērion* ಎಂಬುದು ಕೃಪಾ ಸಿಂಹಾಸನವನ್ನು[79] ಸೂಚಿಸುತ್ತದೋ ಇಲ್ಲವೋ ಎಂಬುದು ಅಷ್ಟಾಗಿ ಮುಖ್ಯವೇನಿಸುವದಿಲ್ಲ, ಯಾಕೆಂದರೆ Moo ತೋರಿಸಿ ಕೊಡುವ ಪ್ರಕಾರ, "ಹಳೇ ಒಡಂಬಡಿಕೆಯನ್ನು ಚೆನ್ನಾಗಿ ಓದುವದಾದರೆ ಒಂದು ಸಂಗತಿ ಸ್ಪಷ್ಟವಾಗುತ್ತದೇನೆಂದರೆ ಪಾಪ ಪ್ರಾಯಶ್ಚಿತ್ತ ದಿನದ ಆಚರಣೆಯು ಪಾಪಗಳ ನಿವಾರಣೆ (ನೀಗಿಸುವದು) ಹಾಗೂ ದೇವರ ಕೋಪವನ್ನು ದೂರಮಾಡುವದು (ಶಾಂತಗೊಳಿಸುವದು-ಪ್ರಾಯಶ್ಚಿತ್ತಗೊಳಿಸುವದು)[80] ಎರಡನ್ನೂ ಒಳಗೊಂಡಿತ್ತು." F. F. Bruce ಹೀಗೆ ವ್ಯಾಖ್ಯಾನಿಸಿದರು,

> . . . ಸನ್ನಿವೇಶ ಬಯಸುವದಾದರೆ *hilastērion* ನ ಅರ್ಥದೊಳಗಿಂದ ದೇವರ ಕೋಪವನ್ನು ತಪ್ಪಿಸುವದು ಎಂಬದನ್ನು ಕೈಬಿಡುವದಕ್ಕೆ ಯಾವ ಕಾರಣವೂ ಇಲ್ಲ. ಮತ್ತು ರೋಮಾ 3:25 ರಲ್ಲಿ ಸನ್ನಿವೇಶವು *hilastērion* ನಲ್ಲಿ ದೇವರ ಕೊಪವನ್ನು ತಪ್ಪಿಸುವದು ಎಂಬದನ್ನು ಸೇರಿಸುವಂತೆ ಬಯಸುವದಿಲ್ಲ. ಪೌಲನು ಈಗಾಗಲೇ 1:18 ರಲ್ಲಿ "ಮನುಷ್ಯರ ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದುಷ್ಟತನದ ಮೇಲೆಯೂ ದೇವರ ಕೋಪವು (NEB 'ದೇವರ ಪ್ರತಿಕಾರ') ಪರಲೋಕದಿಂದ ತೋರಿಬರುತ್ತದೆ" ಎಂಬದಾಗಿ ಹೇಳಿದ್ದಾನೆ; ಹಾಗಾದರೆ ಈ "ಕೋಪವು" ಹೇಗೆ ತೆಗೆದು ಹಾಕಲ್ಪಡಬಲ್ಲದು? ದೇವರು ಕ್ರಿಸ್ತನಲ್ಲಿ ಒದಗಿಸಿರುವ *hilastērion* (ಪ್ರಾಯಶ್ಚಿತ್ತ) ಮಾತ್ರವೇ ಭಕ್ತಿಹೀನತೆಯ ಮತ್ತು ದುಷ್ಟತನದ (ಅಪರಾಧವನ್ನು) ತೆಗೆದುಹಾಕುತ್ತದೆ, ಆದರೆ ಒಂದು ನೈತಿಕ ವಿಶ್ವದಲ್ಲಿ ಅಂಥ ಕ್ರಿಯೆಗಳಿಗೆ ತಪ್ಪದೆ ಸಂಭವಿಸಬೇಕಾದ ಪ್ರತಿಕಾರವನ್ನು ತಪ್ಪಿಸುತ್ತದೆ.[81]

"ಸಮಾಧಾನಗೊಳಿಸುವಿಕೆ" ಎಂಬ ಪದವನ್ನು ಉಪಯೋಗಿಸುವದು ದೇವರನ್ನು ಅನ್ಯ ದೇವರುಗಳಿಗೆ ಸಮಾನಗೊಳಿಸುತ್ತದೆ ಎಂಬ ಆಕ್ಷೇಪಣೆಯ ವಿಷಯವೇನು? Stottರ ಮಾತುಗಳಲ್ಲಿ ಹೇಳುವದಾದರೆ: "ಸಮಾಧಾನಗೊಳಿಸುವಿಕೆಯ ಕುರಿತ ಕ್ರೈಸ್ತ ಹಾಗೂ ಅನ್ಯರ ದೇವರುಗಳ ನಡುವೆ ವ್ಯತ್ಯಾಸವನ್ನು ಎಳೆಯುವದು ಕಠಿಣವಾಗಿರುತ್ತದೆ."[82]

> ಅನ್ಯರು ಸಮಾಧಾನಗೊಳಿಸಲು ಮಾಡುವ ಪ್ರಯತ್ನಗಳು ಹೇಗೆಂದರೆ ಅವರ ದೇವರುಗಳು "ಮುಂಗೋಪಿಗಳು, ಅವುಗಳು ಭಾವನಾತ್ಮಕವಾಗಿ ಯಾವಾಗ ಬದಲಾಗುತ್ತವೋ ಹೇಳಲಾಗದ, ಮತ್ತು ಕಾರಣವಿಲ್ಲದೆ ಕೋಪಗೊಳ್ಳುವ" ಕಾರಣದಿಂದ ಶಾಂತಗೊಳಿಸಲು ಏನಾದರೂ ಅರ್ಪಿಸುತ್ತಿದ್ದರು. ಕ್ರೈಸ್ತ ದೃಷ್ಟಿಕೋನ ಹೇಗೆಂದರೆ, "ದೇವರ ಪರಿಶುದ್ಧ ಕೋಪವು ಕೆಟ್ಟತನದ ಮೇಲಿರುತ್ತದೆ. ದೇವರ ಕೋಪದ ವಿಯಷದಲ್ಲಿ ನಿಯಮ ಬಾಹಿರ, ಅನಿಶ್ಚಿತ, ಅಥವಾ ಅನಿಯಂತ್ರಿತ ಎಂಬುದೇನೂ ಇಲ್ಲ; ಅದು ಕೆಟ್ಟತನಕ್ಕೆ ಮಾತ್ರ ಎದ್ದೇಳುವ ಕೋಪವಾಗಿದೆ."
>
> ವಿಗ್ರಹಾರಾಧಕರಲ್ಲಿ, ಅವರ ದೇವರುಗಳನ್ನು ಪ್ರಸನ್ನಗೊಳಿಸುವದಕ್ಕೆ ಪ್ರಯತ್ನಿಸುವದು *ಮಾನವರಿಗೆ* ಬಿಟ್ಟ ವಿಚಾರವಾಗಿತ್ತು. ಕ್ರೈಸ್ತರಾದರೋ ಪಾಪಿ ಮನುಷ್ಯರು ದೇವರ ಕೋಪವನ್ನು ಶಾಂತಗೊಳಿಸಲು ಸಾಧ್ಯವಿಲ್ಲ ಎಂಬದನ್ನು ಅರ್ಥಮಾಡಿಕೊಂಡವರು.

ದೇವರು ಸ್ವತಃ ಒಂದು ಪ್ರಥಮ ಹೆಜ್ಜೆಯನ್ನಿಡಬೇಕಿತ್ತು.

> ವಿಗ್ರಹಾರಾಧಕರ ಯಜ್ಞಗಳಲ್ಲಿ ಸಸ್ಯಹಾರಗಳನ್ನು, ಪ್ರಾಣಿಗಳನ್ನು ಮತ್ತು (ಕೆಲವು ಸಾರಿ( ನರ ಬಲಿಗಳನ್ನು ಅರ್ಪಿಸಲಾಗುತ್ತಿತ್ತು-ಈ ಯಜ್ಞಗಳು ಅವರ ದೇವರುಗಳನ್ನು ಶಾಂತಗೊಳಿಸಬಹುದಿತ್ತು ಅಥವಾ ಶಾಂತಗೊಳಿಸದೆಯೂ ಹೋಗಬಹುದಿತ್ತು. ನಮ್ಮ ಪ್ರಾಯಶ್ಚಿತ್ತದ ದಾರಿಯು ದೇವರ ಸ್ವಂತ *ಮಗನ* ಯಜ್ಞವೇ ಆಗಿದೆ-ಅದು, ನಿಸ್ಸಂಶಯವಾಗಿ, ಆತನ ಕೋಪವನ್ನು ಶಮನಗೊಳಿಸುತ್ತದೆ![83]

ಇನ್ನೊಂದು ಕೊನೆಯ ಆಕ್ಷೇಪಣೆಯನ್ನು ಇಲ್ಲಿ ಪರಿಗಣಿಸಬಹುದು: ಕೆಲವರು "ದೇವರು *ಸ್ವತಃ ತನ್ನನ್ನೇ* ಪ್ರಸನ್ನಗೊಳಿಸಿಕೊಳ್ಳುವದಕ್ಕೆ ಒಂದು ಯಜ್ಞವನ್ನು ಅರ್ಪಿಸುತ್ತಿದ್ದಾನೆಂದು ಯೋಚಿಸುವದು ಅರ್ಥಹೀನವಾದದ್ದು" ಎಂದು ಹೇಳಬಹುದು. ಇದಕ್ಕೆ ಒಂದು ಸರಳ ಉತ್ತರವನ್ನು ಹೀಗೆ ಕೊಡಬಹುದಾಗಿದೆ: ಪಾಪವುಳ್ಳ ಮನುಷ್ಯನ ವಿರುದ್ಧ ದೇವರ ಕೋಪವು (1:18) ಶಮನಗೊಳಿಸಲ್ಪಡುವದು ಅಗತ್ಯ, ಇಲ್ಲವಾದರೆ ರಕ್ಷಣೆಯ ನಿರೀಕ್ಷೆಯೇ ಇರಲಿಲ್ಲ. ಹೇಗೂ, ಪಾಪ ತುಂಬಿದ ಪುರುಷ ಅಥವಾ ಸ್ತ್ರೀಯ ಬಳಿಯಲ್ಲಿ ದೇವರ ಕೋಪವನ್ನು ಶಮನಗೊಳಿಸಲು ಏನೂ ಇರಲಿಲ್ಲ (3:10, 23). ವಿಷಯ ಹಾಗಿರುವಾಗ, ಸ್ವತಃ ದೇವರೇ ಅಲ್ಲದೆ, ಬೇರೆ ಯಾರು ಯಜ್ಞವನ್ನು ಅರ್ಪಿಸುವದಕ್ಕೆ ಸಾಧ್ಯ?

ಪ್ರಾಯಶ್ಚಿತ್ತದ ಕುರಿತ ಬೈಬಲ್.ನ ಉಪದೇಶವನ್ನು ನಾವು ಹೇಗೆ ಸಾರಾಂಶಗೊಳಿಸಬಹುದು? ದೇವರು ಪರಿಶುದ್ಧನು (ಯಾಜಕಕಾಂಡ 11:44); ಒಬ್ಬ ಪರಿಶುದ್ಧ ದೇವರಾಗಿರುವದರಿಂದ ಆತನು ಪಾಪವನ್ನು ನೋಡಿ ಸಹಿಸಲಾರನು. ದೇವರು ನ್ಯಾಯವಂತ ದೇವರು; "ಒಬ್ಬ ನ್ಯಾಯ ಸ್ವರೂಪನಾದ" ದೇವರಾಗಿ (ಯೆಶಾಯ 30:18), ಆತನು ಪಾಪ ಮತ್ತು ಅವಿಧೇಯತೆಯನ್ನು ದಂಡಿಸಲೇ ಬೇಕು. ಪರಿಶುದ್ಧತೆ ಮತ್ತು ನ್ಯಾಯದ ದೇವರಾಗಿ, ಪಾಪದಿಂದ ತುಂಬಿದ ಮಾನವ ಜನಾಂಗವನ್ನು ನಿತ್ಯವಾದ ನರಕಕ್ಕೆ ಕಳುಹಿಸುವ ಎಲ್ಲಾ ಅಧಿಕಾರವು ಆತನಿಗಿರುತ್ತದೆ. ನ್ಯಾಯವು ತೋರ್ಪಡಿಸಲ್ಪಡಲೇಬೇಕು; ಪಾಪ ದಂಡಿಸಲ್ಪಡಲೇಬೇಕು; ಕೆಟ್ಟತನ ವಿರುದ್ಧದ ದೇವರ ಕೋಪವು ಶಾಂತಗೊಳಿಸಲ್ಪಡಲೇಬೇಕು. ಅದೇ ವೇಳೆಯಲ್ಲಿ, ದೇವರು ಪ್ರೀತಿ ಸ್ವರೂಪನಾದವನು (1 ಯೋಹಾನ 4:16); ಮತ್ತು ಪ್ರೀತಿ ಸ್ವರೂಪಿ ದೇವರಾಗಿ, ಒಬ್ಬನಾದರೂ ನಾಶವಾಗಬೇಕೆಂಬುದು ಆತನ ಬಯಕೆಯಾಗಿರುವದಿಲ್ಲ (2 ಪೇತ್ರ 3:9). ಈ ಅಸಾಧ್ಯವೆಂದು ತೋರುವ ಜಿಜ್ಞಾಸೆಗೆ ದೇವರ ಪರಿಹಾರ ಏನಾಗಿತ್ತು? ಆತನು ನಮ್ಮ ಪಾಪದ ದಂಡನೆಯನ್ನು ಹೊತ್ತುಕೊಳ್ಳಲು ತನ್ನ ಮಗನನ್ನು ಕಳುಹಿಸಿ ಕೊಟ್ಟನು.

> ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ಆದರೆ ನಮ್ಮೆಲ್ಲರ ದೋಷಫಲವನ್ನೂ ಯೆಹೋವನು [ದೇವರು[ ಅವನ [ಯೇಸು] ಮೇಲೆ ಹಾಕಿದನು (ಯೆಶಾಯ 53:6).

> . . . ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು (1 ಕೊರಿಂಥ 15:3).

ಈ ಪರಿಹಾರದ ಸುಳಿವು "ಆತನ ರಕ್ತದಲ್ಲಿ" ಎಂಬ ಪದಗುಚ್ಛದಲ್ಲಿ ಕೊಡಲ್ಪಟ್ಟಿದೆ, ಅದು

5ನೇ ಅಧ್ಯಾಯದಲ್ಲಿ ವಿಸ್ತರಿಸಲ್ಪಟ್ಟಿದೆ:

> ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣ ಕೊಟ್ಟನು. ನೀತಿವಂತನಿಗೋಸ್ಕರ ಯಾರಾದರೂ ಪ್ರಾಣ ಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ. ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ (5:6-9).

ಪುನಃ, ಅಧ್ಯಾಯ 8ರಲ್ಲಿ, ಪೌಲನು ಸಾರಿ ಹೇಳಿದ್ದೇನೆಂದರೆ, ದೇವರು "ತನ್ನ ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ" (8:32).

ಖಂಡಿತವಾಗಿಯೂ, ದೇವರು ನಮಗಾಗಿ ಮಾಡಿದ ಕಾರ್ಯವನ್ನು ವ್ಯಕ್ತ ಪಡಿಸುವದಕ್ಕೆ ಯಾವ ದೃಷ್ಟಾಂತವೂ ಸರಿ ಹೋಗುವದಿಲ್ಲ. ನಾವು ಈ ತಿಳಿವಳಿಕೆಯೊಂದಿಗೆ ಸಂತೃಪ್ತರಾಗಬೇಕು, ಏನೆಂದರೆ ಯೇಸುವಿನ ಯಜ್ಞವು ದೇವರ ಕೋಪವನ್ನು ಶಾಂತಗೊಳಿಸಿ, ಆ ಮೂಲಕ ನಮ್ಮ ರಕ್ಷಣೆಯನ್ನು ಸಾಧ್ಯವಾಗಿಸಿತು ಎಂಬದನ್ನು "ಪ್ರಾಯಶ್ಚಿತ್ತ" ಎಂಬ ಪದವು ಘೋಷಿಸುತ್ತದೆ.

ಈ ಅದ್ಭುತವಾದ ವರವನ್ನು ನಾವು ಹೇಗೆ ಸ್ವೀಕರಿಸುತ್ತೇವೆ? ನಾವು ಅದನ್ನು "ನಂಬಿಕೆಯ ಮೂಲಕ" ಮಾಡುತ್ತೇವೆಂದು ಪೌಲನು ಒತ್ತಿ ಹೇಳಿದನು.

**ವಚನಗಳು 25b, 26a.** 25 ಮತ್ತು 26 ವಚನಗಳ ಕಡೇ ಭಾಗದಲ್ಲಿ, ನೀತಿವಂತನು (ಪರಿಶುದ್ಧ ದೇವರು) ಹೇಗೆ ಅನೀತಿವಂತರನ್ನು (ಭಕ್ತಹೀನ ಮನುಷ್ಯರನ್ನು) ನೀತಿವಂತರೆಂದು ನಿರ್ಣಯಿಸುತ್ತಾನೆ ಎಂಬ ವಿರೋಧಾಭಾಸಕ್ಕೆ ತಿರುಗಿಕೊಳ್ಳುತ್ತೇವೆ. ಗ್ರೀಕ್ ಪ್ರತಿಯಲ್ಲಿ, 21ನೇ ವಚನದಲ್ಲಿ ಆರಂಭವಾದ ವಾಕ್ಯಸಾಲು 26ನೇ ವಚನದ ವರೆಗೆ ಮುಂದುವರೆಯುತ್ತದೆ, ಆದರೆ NASB ತರ್ಜುಮೆಯು 25ನೇ ವಚನದ ಮಧ್ಯದಲ್ಲಿ "ನಂಬಿಕೆಯ ಮೂಲಕ" ಎಂಬ ಮಾತುಗಳ ಬಳಿಕ ಪೂರ್ಣ ವಿರಾಮ ಹಾಕುತ್ತದೆ. ಅವರು ಎರಡು ಮಾತುಗಳನ್ನು ಮಧ್ಯದಲ್ಲಿ ಸೇರಿಸುತ್ತಾರೆ ("ಇದನ್ನು ಮಾಡಿದ್ದು") ಮತ್ತು ನಂತರ ವಾಕ್ಯ ಭಾಗಕ್ಕೆ ಹಿಂದಿರುಗುತ್ತಾರೆ: **ತನ್ನ ನೀತಿಯನ್ನು ತೋರಿಸಿ.** ಈ ವಾಕ್ಯ ಭಾಗವು ವಾಸ್ತವದಲ್ಲಿ ನಿರಂತರ ಸಾಗುವದಾಗಿದೆ ಎಂಬದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ: ಕ್ರಿಸ್ತನು "ಕೃಪಾಧಾರವಾಗಬೇಕೆಂದು (ಪ್ರಾಯಶ್ಚಿತ್ತ) ಮುಂದಿಡಲ್ಪಟ್ಟನು (ಪ್ರದರ್ಶಿಸಲ್ಪಟ್ಟನು)." ದೇವರ ಕೋಪವನ್ನು ಶಾಂತಗೊಳಿಸಿದನು ಮತ್ತು, ಅದೇ ವೇಳೆಯಲ್ಲಿ, ದೇವರ ನೀತಿಯನ್ನು ತೋರ್ಪಡಿಸಿದನು.

ಈ ವಾಕ್ಯ ಭಾಗದಲ್ಲಿ ದೇವರ "ನೀತಿ" ಯು ಆತನ ನೀತಿಸ್ವರೂಪ ಸ್ವಭಾವವನ್ನು ಸೂಚಿಸುತ್ತದೆ. "ತೋರಿಸಿ" ಎಂಬುದು ἔνδειξις (*endeixis*) ಎಂಬ ಪದದಿಂದ ಬಂದಿದೆ, ಅದೊಂದು ಸಂಯುಕ್ತ ಪದವಾಗಿದ್ದು "ದೃಷ್ಟಿಗೆ. . . . ತರುವುದು" "ಸಾಕ್ಷ್ಯಾಧಾರ"[84] ಎಂದರ್ಥವಾಗಿದೆ. ಆ ರೀತಿ ಸಾರ್ವಜನಿಕವಾಗಿ ಘೋಷಣೆ ಮಾಡಿದ್ದು ಯಾರಾದರೂ ದೇವರನ್ನು ಪ್ರಶ್ನಿಸುವ ಧೈರ್ಯಮಾಡಿದರೆ ಅಂಥವರ ಪ್ರಯೋಜನಾತ್ಮಕವಾಗಿ ಆಗಿತ್ತು (ನೋಡಿರಿ 3:4).

ಏಕೆ ಅಂಥ ತೋರ್ಪಡಿಸುವಿಕೆ ಅವಶ್ಯಕವಾಗಿತ್ತು? ಪೌಲನು ಹೇಳುತ್ತಾನೆ, **ದೇವರು**

**ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ.**[85] "ಹಿಂದಿನ ಕಾಲದ ಪಾಪಗಳು" ಹಳೇ ಒಡಂಬಡಿಕೆ ಯುಗದಲ್ಲಿ ಮಾಡಿದ ಪಾಪಗಳಾಗಿವೆ.[86] ಈ ವಾಕ್ಯ ಭಾಗವು ದೇವರು ಆ ಪಾಪಗಳನ್ನು *ಕ್ಷಮಿಸಿದ್ದನು* ಎಂಬದಾಗಿ ಹೇಳುವದಿಲ್ಲವೆಂಬದನ್ನು ಗಮನಿಸಿರಿ (KJV ಸೂಚಿಸುವ ಹಾಗೆ). ಬದಲಾಗಿ, ವಾಕ್ಯ ಭಾಗ ಹೇಳುವದೇನೆಂದರೆ, "ಸಹಿಸಿಕೊಂಡಿರಲಾಗಿ" (ಅಪೊಸ್ತಲರ ಕೃತ್ಯಗಳು 17:30 ರೊಂದಿಗೆ ಹೋಲಿಸಿರಿ). CJB ಯು ವಾಕ್ಯ ಭಾಗವನ್ನು ವಿಸ್ತರಿಸಿ ಹೇಳುವದೇನೆಂದರೆ "ಆತನು ಹಿಂದಿನ ಕಾಲದಲ್ಲಿ ಜನರು ಮಾಡಿದ ಪಾಪಗಳನ್ನು ಸಹಿಸಿಕೊಂಡಿದ್ದನು (ದಂಡಿಸಲೂ ಇಲ್ಲ ನಿವಾರಿಸಲೂ ಇಲ್ಲ)."

ಪೌಲನು "*ಎಲ್ಲರೂ* ಪಾಪ ಮಾಡಿದ್ದಾರೆ," ಮತ್ತು *ಎಲ್ಲರೂ* "ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" ಎಂಬದನ್ನು ಸಾಭಿತುಗೊಳಿಸಿದ್ದನು (3:23; ಒತ್ತಿ ಹೇಳಿದ್ದು ನನ್ನದು). ಇದರಲ್ಲಿ ಅವಶ್ಯಕವಾಗಿ, ಅಬ್ರಹಾಮ ಮತ್ತು ದಾವೀದ (ನೋಡಿರಿ ಅಧ್ಯಾಯ 4) ಮಾತ್ರವಲ್ಲದೆ ಹಳೇ ಒಡಂಬಡಿಕೆಯ ಪ್ರಸಿದ್ಧ ವ್ಯಕ್ತಿಗಳು ಸಹ ಸೇರಿದ್ದರು. ಹಳೇ ಒಡಂಬಡಿಕೆಯಲ್ಲಿ ಪುನಃ ಪುನಃ, ದೇವರು ಇಸ್ರಾಯೇಲಿನ ನ್ಯಾಯಾಧಿಪತಿಗಳಿಗೆ ಅವರು ತಪ್ಪಿಲ್ಲದವರನ್ನು ನಿರಪರಾಧಿ ಎಂದೂ ತಪ್ಪುಳ್ಳವರನ್ನು ಅಪರಾಧಿ ಎಂದೂ ತೀರ್ಮಾನಿಸಬೇಕು ಎಂದು ಹೇಳಿದನು (ನೋಡಿರಿ ಧರ್ಮೋಪದೇಶಕಾಂಡ 25:1); ಅವರು ಅದಕ್ಕೆ ತದ್ವಿರುದ್ಧವಾದದ್ದನ್ನು ಮಾಡಿದಾಗ ಆತನು ಅವರನ್ನು ಶಿಕ್ಷಿಸಿದನು (ನೋಡಿರಿ ಜ್ಞಾನೋಕ್ತಿ 17:15; ಯೆಶಾಯ 5:23). ಸ್ವತಃ ತಾನು ಮಾಡುವ ನ್ಯಾಯದ ವಿಷಯವಾಗಿ ಆತನು ಹೇಳಿದ್ದೇನೆಂದರೆ, "ಅಂಥ ದುಷ್ಟತ್ವವನ್ನು ಮಾಡಿದವನಿಗೆ ನಾನು ಶಿಕ್ಷೆಯನ್ನು ವಿಧಿಸದೆ *ಬಿಡುವದಿಲ್ಲ*" (ವಿಮೋಚನಕಾಂಡ 23:7; ಒತ್ತಿ ಹೇಳಿದ್ದು ನನ್ನದು). ವಿಷಯವು ಹಾಗಿರುವಾಗ, ಆತನು ಅಬ್ರಹಾಮ, ದಾವೀದ ಮತ್ತು ಇತರರ ಪಾಪಗಳನ್ನು ಹೇಗೆ ನಿರ್ಲಕ್ಷಿಸುವದಕ್ಕೆ ಸಾಧ್ಯ? ರೋಮಾಪುರ ಪತ್ರಿಕೆಯ ಮುಂದಿನ ಅಧ್ಯಾಯದ ಪದವನ್ನು ಇಲ್ಲಿ ಉಪಯೋಗಿಸುವದಾದರೆ, ಒಬ್ಬ ನೀತಿಯುಳ್ಳ ದೇವರು ಹೇಗೆ "ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸಲು ಸಾಧ್ಯ" (4:5)?

ಉತ್ತರವೇನೆಂದರೆ, ಹಳೇ ಒಡಂಬಡಿಕೆ ಕಾಲಗಳಲ್ಲಿ, ದೇವರು ತನ್ನನ್ನು ವಿಶ್ವಾಸಿದವರು "ಮಾಡಿದ ಪಾಪಗಳನ್ನು" ನಿರ್ಲಕ್ಷ *ಮಾಡಲಿಲ್ಲ*. ಬದಲಾಗಿ, ಮುಂದೊಂದು ದಿನ ತನ್ನ ಮಗನು ಪಾಪಗಳಿಗೆ-ಯೇಸುವಿನ ಜನನದ ಮುಂಚೆ ಇದ್ದ ವಿಶ್ವಾಸಿಗಳ ಹಾಗೂ ಆತನ ಮರಣದ ನಂತರದ ಜನರ ಪಾಪಗಳಿಗೆ ಸಹ- "ಪ್ರಾಯಶ್ಚಿತ್ತವಾಗಿ" ತನ್ನ ರಕ್ತವನ್ನು ಕೊಡುವನೆಂದು ಎದುರು ನೋಡುತ್ತಿದ್ದನು. ಹಳೇ ಒಡಂಬಡಿಕೆಯು ಕ್ಷಮಾಪಣೆ ಬಗ್ಗೆ ಮಾತಾಡುತ್ತದೆ (ಉದಾಹರಣೆಗೆ, ನೋಡಿರಿ ವಿಮೋಚನಕಾಂಡ 34:7; ಯಾಜಕಕಾಂಡ 4:20, 26, 31, 35); ಆದರೆ ಅದೊಂದು ಹಂಗಾಮಿ (ತಾತ್ಕಾಲಿಕ) ಕ್ಷಮಾಪಣೆಯಾಗಿತ್ತು, ಶಿಲುಬೆಯ ಮೇಲೆ ಯೇಸು ಹೊಂದಲಿದ್ದ ಮರಣದ ಮೇಲೆ ಅವಲಂಭಿತವಾಗಿತ್ತು. ಇಬ್ರಿಯ ಪುಸ್ತಕದ ಲೇಖಕನು ಬರೆದದ್ದೇನೆಂದರೆ, "*ಮೊದಲನೆಯ ಒಡಂಬಡಿಕೆಯ* (*ಹಳೇ ಒಡಂಬಡಿಕೆ*) *ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ* ಆತನು ಮರಣವನ್ನು (ಯೇಸುವಿನ ಮರಣ) ಅನುಭವಿಸಿದನು" (ಇಬ್ರಿಯ 9:15; ಒತ್ತಿ ಹೇಳಿದ್ದು ನನ್ನದು). ಈ ಸತ್ಯವನ್ನು ಕೆಲವು ಸಾರಿ ಈ ರೀತಿ ವ್ಯಕ್ತಪಡಿಸಲಾಗಿರುತ್ತದೆ: "ಯೇಸು ಶಿಲುಬೆಯ ಮೇಲೆ ಸತ್ತಾಗ, ಆತನ ರಕ್ತವು *ಮುಂದಕ್ಕೆ* ಹರಿದಿದ್ದು ಮಾತ್ರವಲ್ಲದೆ (ಶಿಲುಬೆಯ ನಂತರದಲ್ಲಿ ಜೀವಿಸುವವರು) ಅದು *ಹಿಮ್ಮುಖವಾಗಿ* ಸಹ (ಅದಕ್ಕಿಂತ ಮುಂಚೆ ಜೀವಿಸಿದ್ದವರಿಗಾಗಿ)

ಹರಿಯಿತು."

ಹಳೇ ಒಡಂಬಡಿಕೆಯ ಕಾಲಗಳಲ್ಲಿ ದೇವರು ಪಾಪದ ವಿಷಯದಲ್ಲಿ ಹೇಗೆ ನಡೆದುಕೊಂಡನೆಂಬ ಬಗ್ಗೆ ಹಲವಾರು ರೀತಿಗಳಲ್ಲಿ ವಿವರಿಸಬಹುದು. ಉದಾಹರಣೆಗೆ, ನಾನು ಒಂದು ಹೋಲಿಕೆಯನ್ನು ನಿಮ್ಮ ಮುಂದಿಡುತ್ತೇನೆ, ನಾನು ಮತ್ತು ನನ್ನ ಕುಟುಂಬವು ಒಂದು ರೆಸ್ಟೋರೆಂಟಿನಲ್ಲಿ ಊಟ ಮಾಡುತ್ತಿದ್ದೇವೆಂದು ಕಲ್ಪಿಸಿಕೊಳ್ಳಿರಿ. ನಾನು ಬಿಲ್) ಬೆಲೆ ಪಟ್ಟಿ( ಕೇಳಿದಾಗ, ಪರಿಚಾರಕನು ಆ ಕಡೆಯ ಕೋಣೆಯಲ್ಲಿ ಕುಳಿತಿದ್ದ ನಮ್ಮ ಮಿತ್ರರನ್ನು ತೋರಿಸಿ, bill) ಬೆಲೆ ಪಟ್ಟಿ( ನ ವಿಷಯ ಈಗಾಗಲೇ ಇತ್ಯರ್ಥವಾಗಿದೆ" ಎಂದು ಹೇಳಿದನು. ವಾಸ್ತವವೆಂದರೆ, *ನಂತರದಲ್ಲಿ* (ನನ್ನ ಮಿತ್ರನು ತನ್ನ ಹಾಗೂ ನನ್ನ billನ್ನು ಪಾವತಿಸಿದ ಮೇಲೆ) ಅಷ್ಟೇ bill ಇತ್ಯರ್ಥವಾಗುತ್ತಿತ್ತು; ಆದರೆ bill ತಪ್ಪದೆ ಸಂದಾಯ *ಮಾಡಲ್ಪಡುವದೆಂಬ* ದೃಢನಂಬಿಕೆ ಪರಿಚಾರಕನಿಗಿತ್ತು, ಆದ್ದರಿಂದ ಆತನು ಅದನ್ನು "ಪೂರ್ಣ ಸಂದಾಯ" ವಾಗಿದೆ ಎಂದು ಪರಿಗಣಿಸಿದ್ದನು.

ಬಹುಶಃ ಇನ್ನಷ್ಟು ನಿಖರವಾದ ವಿವರಣೆಯೆಂದರೆ, ದೇವರು ಕಾಲವನ್ನು-ಘಟನಾವಳಿಗಳ ಕಾಲಕ್ರಮವನ್ನು-ನಾವು ನೋಡುವ ರೀತಿಯಲ್ಲಿ ನೋಡುವದಿಲ್ಲ ಎಂಬದನ್ನು ಒತ್ತಿಹೇಳುವದು ನಿಖರವಾದ ವಿವರಣೆಯಾಗಿರುತ್ತದೆ (ನೋಡಿರಿ 2 ಪೇತ್ರ 3:8). ದೇವರ ದೃಷ್ಟಿಕೋನದ ಪ್ರಕಾರ, ಸೃಷ್ಟಿಯ ಮುಂಚೆಯೇ, ಆತನ ಮಗನ ಶಿಲುಬೆಗೇರಿಸುವಿಕೆಯು ಸಾಧಿಸಲ್ಪಟ್ಟ ಘಟನೆಯಾಗಿತ್ತು (ನೋಡಿರಿ ಆದಿಕಾಂಡ 3:15; ಎಫೆಸ 3:11). ನಾವು ರೋಮಾ 8ನೇ ಅಧ್ಯಾಯಕ್ಕೆ ಹೋಗುವಾಗ ಇದರ ಬಗ್ಗೆ ಹೆಚ್ಚು ಪೂರ್ಣವಾಗಿ ಚರ್ಚಿಸಲಿದ್ದೇವೆ ಮತ್ತು ದೇವರ ಪೂರ್ವಸಂಕಲ್ಪ (ಜ್ಞಾನದ) ಪರಿಕಲ್ಪನೆಯ ಬಗ್ಗೆ ಗುದ್ದಾಡಲಿದ್ದೇವೆ. D. Stuart Briscoe ಕಾಲಾನುಕ್ರಮದ ಕುರಿತ ದೇವರ ದೃಷ್ಟಿಕೋನದ ಬಗ್ಗೆ ಈ ಬಣ್ಣನೆಯನ್ನು ನೀಡುತ್ತಾನೆ:

> . . . ದೇವರು ಸಂಗತಿಗಳನ್ನು ನೋಡುವ ಪ್ರಕಾರ, ಘಟನೆಗಳು ಕಾಲದಲ್ಲಿ ಸಂಭವಿಸುವ ಹಾಗೆ ಸರಣಿಯಲ್ಲಿ ನಡೆಯುವದಿಲ್ಲ ಆದರೆ ಅವುಗಳು ಸದಾಕಾಲವೂ ಈಗ ಎಂಬ ಸ್ಥಿತಿಯಲ್ಲಿರುತ್ತವೆ ಯಾಕೆಂದರೆ ಅವುಗಳು ನಿತ್ಯತ್ವದಲ್ಲಿ ಅಸ್ತಿತ್ವದಲ್ಲಿರುತ್ತವೆ. . . . ಕ್ರಿಸ್ತನ ಶಿಲುಬೆಯು, ಒಂದು ಕಾಲ ಮತ್ತು ಸ್ಥಳದಲ್ಲಿ ಸಂಭವಿಸಿದ್ದಾಗಿದೆಯಾದರೂ, ಹೆಚ್ಚು ಪ್ರಾಮುಖ್ಯವಾಗಿ ಅದೊಂದು ನಿತ್ಯವಾದ ಘಟನೆಯಾಗಿದ್ದು ಎಂದೆಂದಿಗೂ ಮಹತ್ವ ಹಾಗೂ ಸದಾ ಕ್ರಿಯೆ ಮಾಡುವದಾಗಿದೆ.[87]

ಖಂಡಿತವಾಗಿಯೂ, ಯೇಸು ಶಿಲುಬೆಯ *ಮುಂಚೆ* ಜೀವಿಸಿದ ಜನರಿಗಾಗಿ ಮಾತ್ರವೇ ಸಾಯಲಿಲ್ಲ; ಆತನು ತನ್ನ ಮರಣದ *ಬಳಿಕ* ಜೀವಿಸಿದ ಜನರಿಗಾಗಿ ಸಹ ಸತ್ತನು. ಪೌಲನು ಹೀಗೆ ಮುಂದುವರೆಸುತ್ತಾನೆ, "ತನ್ನ [ದೇವರ] ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿದ್ದಾನೆ." ರಕ್ತವು ಪಾಪವನ್ನು "ಈಗಿನ ಕಾಲದಲ್ಲಿ" *ಸಹ* ಶುದ್ಧೀಕರಿಸುತ್ತದೆಂಬದಕ್ಕಾಗಿ ನಾವು ಎಷ್ಟು ಕೃತಜ್ಞತೆಯುಳ್ಳವರಾಗಿರಬೇಕು!

**ವಚನ 26b.** ಅದು ನಮ್ಮನ್ನು ಸಾರಾಂಶದ ಹೇಳಿಕೆಗೆ ತಂದು ನಿಲ್ಲಿಸುತ್ತದೆ: **ಹೀಗೆ ತಾನು [ದೇವರು] ನೀತಿಸ್ವರೂಪನಾಗಿಯೂ. . . . ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.** John Bengel ಹೇಳಿದ್ದೇನೆಂದರೆ ಈ ಮಾತುಗಳಲ್ಲಿ ನಾವು "ಸುವಾರ್ತೆಯ ಅತ್ಯುನ್ನತ ವಿರೋಧಭಾಸವನ್ನು ಕಾಣುತ್ತೇವೆ."[88]

ದೇವರು ಹೇಗೆ “ನೀತಿಸ್ವರೂಪನೂ” (ಪಾಪವನ್ನು ದಂಡಿಸುವವನು) ಮತ್ತು ಅದೇ ವೇಳೆಯಲ್ಲಿ “ನೀತಿವಂತರೆಂದು ನಿರ್ಣಯಿಸುವವನೂ” (ಪಾಪಿಗಳನ್ನು ರಕ್ಷಿಸುವವನು) ಸಹ ಆಗಿರುವದಕ್ಕೆ ಸಾಧ್ಯ? ನಾವು ಈಗಾಗಲೇ ಕಲಿತಿರುವ ಹಾಗೆ, ಶಿಲುಬೆಯು ಅದನ್ನು ಸಾಧ್ಯಗೊಳಿಸುತ್ತದೆ. Edwardsನ ಅಭಿಪ್ರಾಯವೇನೆಂದರೆ, “ಕ್ರಿಸ್ತನ ಶಿಲುಬೆಯು ಸಾಕಷ್ಟು ಪ್ರಮಾಣದಲ್ಲಿ ನ್ಯಾಯವನ್ನೂ ಪ್ರೀತಿಯನ್ನೂ ವ್ಯಕ್ತಪಡಿಸಿತು, ಮತ್ತು ಯಾವದನ್ನೂ ರಾಜಿಮಾಡಿಕೊಳ್ಳಲಿಲ್ಲ.”[89] MacArthur ಸಹ ಹೀಗೆ ಮುಕ್ತಾಯಕ್ಕೆ ಬಂದನು, “[ದೇವರ[ ನ್ಯಾಯದ (ನೀತಿಯ) ಕಾರಣದಿಂದ, ಯಾವ ಪಾಪವೂ ದಂಡಿಸಲ್ಪಡದೆ ಹೋಗುವದಿಲ್ಲ; ಆದಾಗ್ಯೂ ಆತನ ಕೃಪೆಯ ಕಾರಣದಿಂದ, ಯಾವ ಪಾಪವೂ ಕ್ಷಮಾಪಣೆಯ ಹೊರಗೆ ಇರುವದಿಲ್ಲ.”[90]

ಎಂಥ ಅದ್ಭುತವಾದ ಸತ್ಯ: ಯೇಸು ಪಾಪದ ದಂಡನೆಯನ್ನು ತನ್ನ ಮೇಲೆ ಹೊತ್ತುಕೊಳ್ಳಲು ಸತ್ತನು! ಅದು ನಮ್ಮನ್ನು ಈ ಪ್ರಶ್ನೆಗೆ ತಂದು ನಿಲ್ಲಿಸುತ್ತದೆ: ಯೇಸು ಎಲ್ಲಾ ಜನರಿಗಾಗಿ ಸತ್ತನಾದರೆ (ಆತನು ಹಾಗೆ ಸತ್ತದ್ದು ನಿಜವೇ; ನೋಡಿರಿ ರೋಮಾ 6:10; 1 ಪೇತ್ರ 3:18), ಯಾಕೆ ಎಲ್ಲರೂ ರಕ್ಷಿಸಲ್ಪಟ್ಟಿಲ್ಲ? ಯಾಕೆಂದರೆ ರಕ್ಷಣೆಯ ವರವು ಅಂಗೀಕರಿಸಲ್ಪಡಲೂ ಬಹುದು ಅಥವಾ ತಿರಸ್ಕರಿಸಲ್ಪಡಲೂಬಹುದು. ಈ ವಾಕ್ಯಭಾಗವು ಸತ್ಯದೊಂದಿಗೆ ಮುಕ್ತಾಯಗೊಳಿಸುತ್ತದೆ, ದೇವರು **ಯೇಸುವಿನಲ್ಲಿ ನಂಬಿಕೆಯಿಡುವವರನ್ನು** ನೀತಿವಂತರೆಂದು ನಿರ್ಣಯಿಸುವನು.

ಇದನ್ನು ಪುನಃ ಒತ್ತಿ ಹೇಳಬೇಕೇನೆಂದರೆ, ನಂಬಿಕೆ ಕೇವಲ ಮಾನಸಿಕ ಸಮ್ಮತಿಯಲ್ಲ, ಸತ್ತ ನಂಬಿಕೆಯಲ್ಲ (ನೋಡಿರಿ ಯಾಕೋಬ 2:26); ಬದಲಾಗಿ, ಅದು ಸಜೀವವಾದ, ಕ್ರಿಯಾಶೀಲವಾದ, ವಿಧೇಯತೆಯುಳ್ಳ ನಂಬಿಕೆ (ನೋಡಿರಿ 1:5; 16:26). MacArthur ಹೀಗೆ ಹೇಳಿದ್ದು ಸರಿಯಾಗಿಯೇ ಇರುತ್ತದೆ, ಆತನು ನಂಬಿಕೆಯ ಅರ್ಥವನ್ನು ಈ ಕೆಳಗಿನ ರೀತಿಯಲ್ಲಿ ತಿಳಿಸುತ್ತಾನೆ:

> ಹೊಸ ಒಡಂಬಡಿಕೆಯು ಕಲಿಸುವಂಥ, ಯೇಸು ಕ್ರಿಸ್ತನಲ್ಲಿ ಇಡುವ ರಕ್ಷಿಸುವ ನಂಬಿಕೆಯು ಆತನ ಬಗ್ಗೆ ಕೆಲವೊಂದು ಸತ್ಯಗಳನ್ನು ದೃಢಿಕರಿಸುವದಕ್ಕಿಂತಲೂ ಹೆಚ್ಚಿನದಾಗಿದೆ. ದೆವ್ವಗಳು ಸಹ ಆತನ ಬಗ್ಗೆ ಅನೇಕ ಸಂಗತಿಗಳನ್ನು ನಿಜವೆಂದು ಒಪ್ಪಿಕೊಳ್ಳುತ್ತವೆ (ನೋಡಿರಿ ಮಾರ್ಕ 5:7; ಅಪೊಸ್ತಲರ ಕೃತ್ಯಗಳು 16:17). . . .
>
> ರಕ್ಷಣೆಯುಂಟು ಮಾಡುವ ನಂಬಿಕೆಯು ಒಬ್ಬನು ಸಂಪೂರ್ಣವಾಗಿ ತನ್ನನ್ನು ಕರ್ತನಾದ ಯೇಸು ಕ್ರಿಸ್ತನಿಗೆ ಶರಣಾಗತಿ ಮಾಡಿಕೊಳ್ಳುವದಾಗಿದೆ.[91]

ಅದೇ ವೇಳೆಯಲ್ಲಿ, ಈ ನಂಬಿಕೆಯು ಮೊಟ್ಟಮೊದಲಾಗಿ ನಂಬಿಕೆಯಾಗಿದೆ ಎಂಬದನ್ನು ಪುನಃ ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಮನುಷ್ಯನಿಗೆ ಮಾಡಲಸಾಧ್ಯವಾದ ಅನೇಕ ಸಂಗತಿಗಳಿರುತ್ತವೆ, ಆದರೆ ಆತನಿಗೆ ನಂಬುವದು ಸಾದ್ಯವಿದೆ-ಹೌದು, ಪ್ರತಿಯೊಬ್ಬ ಮನುಷ್ಯನೂ ನಂಬಬಲ್ಲನು. ಅಂದರೆ ದೇವರ ವಿಮೋಚನೆಯು ಪ್ರತಿಯೊಬ್ಬರಿಗೂ ಲಭ್ಯವಿದೆ ಎಂದರ್ಥ!

## ಧರ್ಮಶಾಸ್ತ್ರದ ಹೊರತಾದ ದೇವರ ನೀತಿ (3:27-31)

**27ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ**

**ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; ವಿಶ್ವಾಸ ಮಾರ್ಗವನ್ನು ಅನುಸರಿಸುವದರಿಂದಲೇ. [28]ಧರ್ಮಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವ ರೆಂಬದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ. [29]ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ? ಅನ್ಯಜನಗಳಿಗೆ ಸಹ ದೇವರಲ್ಲವೇ. ಹೌದು. ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ. [30]ಆತನು ಸುನ್ನತಿಯವರನ್ನು ನೀತಿವಂತರೆಂದು ನಿರ್ಣಯಿಸುವದಕ್ಕೆ ಅವರ ನಂಬಿಕೆಯೇ ಆಧಾರ; ಸುನ್ನತಿಯಿಲ್ಲದ ವರನ್ನೂ ಹಾಗೆಯೇ ನಿರ್ಣಯಿಸುವದಕ್ಕೆ ನಂಬಿಕೆಯೇ ಕಾರಣ. [31]ಹಾಗಾದರೆ ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕಮಾಡುತ್ತೇವೋ? ಎಂದಿಗೂ ಇಲ್ಲ. ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ.**

ಪೌಲನು ತಾನು ಬರೆಯುವ ವೇಳೆಯಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲು ಅಥವಾ ತನ್ನ ಮಾತಿನ ತಾತ್ಪರ್ಯವೇನು ಅಥವಾ ಏನಲ್ಲ ಎಂಬದನ್ನು ವಿವರಿಸುವದಕ್ಕೆ ಮಧ್ಯದಲ್ಲಿ ಸಮಯ ತೆಗೆದುಕೊಳ್ಳುತ್ತಾನೆ. ಈ ಅಧ್ಯಾಯದ ಉಳಿದ ಭಾಗವು ವಿವರಣಾತ್ಮಕವಾಗಿರುತ್ತದೆ: ರೊಮಾ 3:27-31. ಪೌಲನು ನೀತಿವಂತರೆಂಬ ನಿರ್ಣಯದ ಬಗ್ಗೆ ವಿಚಾರಮಾಡುವಂತೆ ಸ್ಫೂರ್ತಿಗೊಳಿಸುವ ಪರಿಚಯವನ್ನು ಕೊಟ್ಟನು. ನೀತಿನಿರ್ಣಯವು ನಂಬಿಕೆಯ ಮೂಲಕವೇ ಎಂಬದನ್ನು ಆತನು ಒತ್ತಿ ಹೇಳಿದನು (3:22, 25, 26), ಮತ್ತು ನಂಬಿಕೆಯ ಮಹತ್ವದ ಕುರಿತಾಗಿ ಆತನು ಈಗ ವಿಸ್ತಾರವಾದ ಚರ್ಚೆಗೆ ಸಿದ್ಧನಾಗಿದ್ದನು (4ನೇ ಅಧ್ಯಾಯ). ಹೇಗೂ, ಆತನು ಚರ್ಚೆಯನ್ನು ಆರಂಭಿಸುವ ಮುನ್ನ, ಸ್ವಲ್ಪ ತಡೆದು, ತಾನು ಈಗಷ್ಟೇ ಹೇಳಿದ ಮೂರು ವಿಷಯಗಳ ಕುರಿತು ಸ್ಪಷ್ಟನೆಯನ್ನು ಕೊಡುತ್ತಾನೆ.

ಪೌಲನು 3:27-31 ರಲ್ಲಿ ಹೇಳಿದ ಮಾತುಗಳು ಸಾಮಾನ್ಯ ಅನ್ವಯಿಕೆಯನ್ನು ಹೊಂದಿವೆ, ಆದರೆ ಅವುಗಳೂ ವಿಶೇಷವಾಗಿ ಯೆಹೂದ್ಯರನ್ನು ಗುರಿ ಮಾಡಿಕೊಂಡು ಹೇಳಿದವುಗಳಾಗಿದ್ದವು. ನಂಬಿಕೆಯಿಂದಲೇ ನೀತಿವಂತರೆಂಬ ನಿರ್ಣಯದ ಕುರಿತ ತನ್ನ ಉಪದೇಶವನ್ನು ನಂಬುವದಕ್ಕೆ ಹೆಚ್ಚು ವಿರೋಧ ವ್ಯಕ್ತಪಡಿಸುವವರು ಯೆಹೂದ್ಯರೇ ಆಗಿರುತ್ತಾರೆಂಬದು ಆತನಿಗೆ ಅರ್ಥವಾಗಿತ್ತು. ಯಾರಾದರೂ ಆತನ ಮಾತುಗಳನ್ನು ಅಪಾರ್ಥಮಾಡಿಕೊಂಡರೆ ಅಥವಾ ತಪ್ಪಾಗಿ ವ್ಯಾಖ್ಯಾನಿಸಿದರೆ, ಅದು ಬಹುಶಃ ಯೆಹೂದ್ಯರೇ ಆಗಿರುವದಕ್ಕೆ ಸಾಧ್ಯವೆಂದು ಬಲ್ಲವನಾಗಿದ್ದನು.

**ವಚನ 27.** 3ನೇ ಅಧ್ಯಾಯವು ಪ್ರಶ್ನೆ ಮತ್ತು ಉತ್ತರ ಶೈಲಿಯಲ್ಲಿ ಆರಂಭಗೊಂಡಿತು. 27 ನೇ ವಚನದಲ್ಲಿ, ಪೌಲನು ಪುನಃ ಆ ಶೈಲಿಗೆ ತಿರುಗುತ್ತಾನೆ. ಪೌಲನು ಸ್ಪಷ್ಟಗೊಳಿಸಲಿಚ್ಚಿಸಿದ ಮೊದಲ ಸತ್ಯವೇನೆಂದರೆ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವಿಕೆ ಸಿದ್ಧಾಂತದಲ್ಲಿ ವೈಯಕ್ತಿಕ ಸಾಧನೆಗಳ ಬಗ್ಗೆ ಹೊಗಳಿಕೊಳ್ಳಲು ಯಾವದೇ ಅವಕಾಶವಿರುವದಿಲ್ಲ.

ಪೌಲನು ಹೀಗೆ ಕೇಳುತ್ತಾನೆ, **ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ?** "ಹೊಗಳಿಕೊಳ್ಳುವದಕ್ಕೆ" ಎಂಬುದು καύχησις (*kauchēsis*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದು "ಬಡಾಯಿಕೊಚ್ಚಿಕೊಳ್ಳುವದನ್ನು" ಸೂಚಿಸುತ್ತದೆ.

"ಹೊಗಳಿಕೊಳ್ಳು" ಎಂಬದನ್ನು ನಿಘಂಟು ಹೀಗೆ ಬಣ್ಣಿಸುತ್ತದೆ: "ಮಾತಿನಲ್ಲಿ ತನ್ನನ್ನು ಘನಪಡಿಸಿಕೊಳ್ಳುವದು; ಅತಿಯಾದ ಗರ್ವದಿಂದ ಮಾತಾಡುವದು."[92] ಹೊಗಳಿಕೊಳ್ಳುವದರಲ್ಲಿ ಸಾಮಾನ್ಯವಾಗಿ ಒಬ್ಬನು ತನ್ನ ಸಾಧನೆಗಳ, ತಲಾಂತುಗಳ, ಅಥವಾ ಆಸ್ತಿಪಾಸ್ತಿಗಳ ಕುರಿತು ಬಡಾಯಿಕೊಚ್ಚಿಕೊಳ್ಳುವದು ಸೇರಿರುತ್ತದೆ. ಯೋಹಾನನು "ಲೋಕದಲ್ಲಿರುವವುಗಳನ್ನು" ಎಂದು ಬರೆದಾಗ, ಆತನು ಅದರಲ್ಲಿ "ಬದುಕುಬಾಳಿನ ಡಂಬ (ಬಡಾಯಿ ಕೊಚ್ಚಿಕೊಳ್ಳುವ ಗರ್ವ)" ವನ್ನು ಸಹ ಸೇರ್ಪಡೆಗೊಳಿಸಿದನು (1 ಯೋಹಾನ 2:16). 1 ಯೋಹಾನ 2:16 ರಲ್ಲಿ "ಬದುಕುಬಾಳಿನ ಡಂಬ" ಎಂಬದಕ್ಕೆ Peterson "ಪ್ರಾಮುಖ್ಯರೆಂದು ಕಾಣಿಸಿಕೊಳ್ಳಲಿಚ್ಛಿಸುವದು" ಎಂಬ ಅರ್ಥವನ್ನು ಕೊಡುತ್ತಾನೆ (MSG).

ಒಬ್ಬನು ಒಂದು ಪ್ರಾಮುಖ್ಯವಾದ ಸಂಗತಿಯಲ್ಲಿ ಪಾತ್ರವಹಿಸಿದ್ದಾನೆಂದು ನೆನಸುವಾಗ ಸಹಜವಾಗಿ ಹೊಗಳಿಕೊಳ್ಳುವದು ಅಥವಾ ಬಡಾಯಿಕೊಚ್ಚಿಕೊಳ್ಳುವದು ಬರುತ್ತದೆ. ರೋಮಾ 2:17 ಮತ್ತು 2:23 ನಮಗೆ ಹೇಳುವದೇನೆಂದರೆ ಯೆಹೂದ್ಯರು ದೇವರಲ್ಲಿ ಮತ್ತು ಧರ್ಮಶಾಸ್ತ್ರದಲ್ಲಿ ಹೊಗಳಿಕೊಳ್ಳುತ್ತಿದ್ದರು. ಅಂದರೆ, ತಾವು ದೇವರಿಗೆ ನೆಚ್ಚಿನವರು ಮತ್ತು ತಮ್ಮ ವಶದಲ್ಲಿ- ಕೇವಲ ಅವರ ಹತ್ತಿರ ಮಾತ್ರವೇ- ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಟ್ಟಿತ್ತೆಂಬ ಬಗ್ಗೆ ಹೊಗಳಿಕೊಳ್ಳುತ್ತಿದ್ದರು. ಹಾಗಾದರೆ ಹೊಗಳಿಕೊಳ್ಳುವದು ಪ್ರತ್ಯೇಕವಾಗಿ ಯೆಹೂದ್ಯರ ಆಚಾರ ಮಾತ್ರವಾಗಿತ್ತೆಂದು ಇದರ ಅರ್ಥವಲ್ಲ. ಗ್ರೀಕ್.ನ ವಿವಿಧ ಪದಗಳು ಉಪಯೋಗಿಸಲ್ಪಟ್ಟಿವೆ, ಆದರೆ ಕೆಲವು ವಿಚಾರಗಳು 1ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿವೆ, ಪೌಲನು ಅಲ್ಲಿ ಅನ್ಯಜನರನ್ನು "ಸೊಕ್ಕಿನವರು" ಮತ್ತು "ಅಹಂಕಾರಿಗಳು" ಎಂದು ಕರೆಯುತ್ತಾನೆ (1:30). ಖಂಡಿತವಾಗಿ, ಈ ಮಾತುಗಳನ್ನು ನಾವು ಪೌಲನ ಬಹುಕಾಲ ಹಿಂದಿನ ವಾಚಕರಿಗೆ ಮಾತ್ರವೇ ಅನ್ವಯಿಸುವದಕ್ಕಾಗದು. ನಮ್ಮಷ್ಟು "ಅಧಿಕವಾಗಿ ಮಾಡದೆ ಇರುವವರನ್ನು" ಅಥವಾ ನಮ್ಮಷ್ಟು ಉನ್ನತವಾದ ನೈತಿಕ ನಿಯಮಗಳಿಲ್ಲದವರನ್ನು ನೋಡಿ ನಮ್ಮ ಬಗ್ಗೆ ಉನ್ನತರೆಂಬ ಭಾವನೆಯನ್ನು ಹೊಂದುವದು ಎಷ್ಟು ಸುಲಭವಾಗಿರುತ್ತದೆ. ಎಷ್ಟು ಸಾರಿ ನಾವು ನಮ್ಮ ಗರ್ವದಿಂದಾಗಿ ನಮ್ಮ ಒಳ್ಳೆ ಕ್ರಿಯೆಗಳನ್ನು ಕೆಡಿಸಿಕೊಳ್ಳುತ್ತೇವಲ್ಲವೆ-ಮತ್ತು ಕೆಲವು ಸಾರಿ ಹೊಗಳಿಕೊಳ್ಳುವದರಿಂದ ಕೆಡಿಸಿಕೊಳ್ಳುತ್ತೇವೆ.

"ಹೊಗಳಿಕೊಳ್ಳುವಿಕೆ" ವಿಷಯವಾಗಿ, **ಪೌಲನು ಅದು ಇಲ್ಲದೆ ಹೋಯಿತು** ಎಂದು ಹೇಳುತ್ತಾನೆ. "ಅದು ಇಲ್ಲದೆ ಹೋಯಿತು" ಎಂಬುದು ἐκκλείω (*ekkleiō*) ಎಂಬ ಸಂಯುಕ್ತ ಪದದಿಂದ ಅನುವಾದಿಸಲ್ಪಟ್ಟಿದೆ, ಅದರ ಅರ್ಥವು "ಹೊರಗೆ ತಳ್ಳಿ ಮುಚ್ಚಿಬಿಡು." ಒಬ್ಬ ಅತಿಕ್ರಮ ಪ್ರವೇಶ ಮಾಡುವವನನ್ನು ಹೊರಗಿಡುವದಕ್ಕೆ ಬಾಗಲನ್ನು ಜೋರಾಗಿ ಮುಚ್ಚಿಬಿಡುವದನ್ನು ಕಲ್ಪಿಸಿಕೊಳ್ಳಿರಿ. ಇಲ್ಲಿ ಭೂತಕಾಲವನ್ನು ಉಪಯೋಗಿಸಲಾಗಿದೆ. ಈ ಮಾತುಗಳ ಅರ್ಥವು "ಹೊಗಳಿಕೊಳ್ಳುವದನ್ನು ಶಾಶ್ವತವಾಗಿ ಗಡಿಪಾರು ಮಾಡಲಾಗಿದೆ"[93] ಎಂದಾಗಿರುತ್ತದೆ.

ಯಾವ ಆಧಾರದ ಮೇಲೆ ಹೊಗಳಿಕೊಳ್ಳುವಿಕೆ ಇಲ್ಲದೆ ಹೋಯಿತು? **ಕರ್ಮಮಾರ್ಗವನ್ನು ಅನುಸರಿಸುವದರ**. . . . ಆಧಾರದ ಮೇಲೆಯೋ? ಖಂಡಿತ ಇಲ್ಲ. ಜನರು ತಮ್ಮ ಕ್ರಿಯೆಗಳ ಆಧಾರದ ಮೇಲೆ ರಕ್ಷಿಸಲ್ಪಟ್ಟಿದ್ದಾರೆಂದು ಬೋಧಿಸುವ ಸೈದ್ಧಾಂತಿಕ ನಿಲುವು ಮಾತ್ರವೇ ಹೊಗಳಿಕೊಳ್ಳುವದನ್ನು ನಿರಾಶೆಗೊಳಿಸುವ ಬದಲಾಗಿ ಅದನ್ನು ಪ್ರೋತ್ಸಾಹಿಸುತ್ತದೆ. ಸ್ವ-ಸಂತೃಪ್ತಿಯು ಸ್ವ-ಹೆಚ್ಚಿಸಿಕೊಳ್ಳುವಿಕೆಗೆ ನಡಿಸುತ್ತದೆ, ಅದು

ಮುಂದೆ ಸ್ವ-ಪ್ರಶಂಸಿಸಿಕೊಳ್ಳಲು ನಡಿಸುತ್ತದೆ.[94] Jim McGuiggan ಹೀಗೆ ಬರೆದನು, ಯಾವದೇ "ಧರ್ಮಪ್ರಮಾಣದ ಕರ್ಮಗಳು" ಕರುಣೆಯ ಬದಲಿಗೆ ಶ್ರೇಯಸ್ಸನ್ನು ಎತ್ತಿ ತೋರಿಸುತ್ತವೆ, ಅದರಿಂದ ಸಾರ್ಥಕತೆಯ ಬದಲಾಗಿ ವ್ಯರ್ಥತ್ವವೇ ಸಂಭವಿಸುತ್ತದೆ, ಮತ್ತು ಆಶ್ರಯದ ಬದಲಿಗೆ ಕೋಪವನ್ನು ಬರಮಾಡಿಕೊಳ್ಳುತ್ತದೆ.[95]

ಹೊಗಳಿಕೊಳ್ಳುವಿಕೆಯು ಇಲ್ಲದೆ ಹೋಗಿರುತ್ತದೆ ಯಾಕೆಂದರೆ ನಾವು ಕರ್ಮಗಳ ಆಧಾರದಲ್ಲಿ ರಕ್ಷಿಸಲ್ಪಟ್ಟಿಲ್ಲ ಆದರೆ **ನಂಬಿಕೆಯಿಂದಲೇ** ರಕ್ಷಿಸಲ್ಪಟ್ಟಿದ್ದೇವೆ-ನಾವೇನು ಮಾಡಿದ್ದೇವೆಂಬದರಿಂದಲ್ಲ ಆದರೆ ನಮಗಾಗಿ ದೇವರು ಮಾಡಿದ ಕಾರ್ಯದಿಂದ ರಕ್ಷಿಸಲ್ಪಟ್ಟಿದ್ದೇವೆ. Phillips ತರ್ಜುಮೆಯಲ್ಲಿ ಹೀಗಿರುತ್ತದೆ, "ವಿಷಯವೆಲ್ಲಾ ಈಗ ಬೇರೆ ದಿಕ್ಕಿಗೆ ಸಾಗಿರುತ್ತದೆ-ಸಾಧಿಸುವದರ ಬದಲಿಗೆ ನಂಬಿಕೆಯಿಡುವದು."

ಕ್ರಿಯೆಗಳ ಆಧಾರದ ಮೇಲಿನ ರಕ್ಷಣೆಯು *ಕೆಳಗಡೆ* ರಕ್ಷಣೆಯನ್ನು ಹುಡುಕುವ ದಾಗಿದ್ದರೆ (ನಮ್ಮ ಸ್ವಪ್ರಯತ್ನಗಳಿಂದ) ನಂಬಿಕೆಯ ಆಧಾರದ ಮೇಲಿನ ರಕ್ಷಣೆಯು *ಮೇಲ್ಗಡೆ* ರಕ್ಷಣೆಯನ್ನು (ದೇವರಿಂದ) ಹುಡುಕುವದಾಗಿದೆ.[96] ಕ್ರಿಯೆಗಳಿಂದಾಗುವ ರಕ್ಷಣೆಯು ಸ್ವಾರ್ಥದ ಸುತ್ತ ಕೇಂದ್ರಿಕೃತವಾಗಿದ್ದರೆ, ನಂಬಿಕೆಯಿಂದಾಗುವ ರಕ್ಷಣೆಯು ದೇವರ ಸುತ್ತ ಕೇಂದ್ರಿಕೃತವಾಗಿರುತ್ತದೆ. ಒಬ್ಬ ಮನುಷ್ಯನು ನೀರಿನಲ್ಲಿ ಮುಳುಗಿ ಹೋಗುವದರಿಂದ ರಕ್ಷಿಸಲ್ಪಡುತ್ತಾನೆಂದುಕೊಳ್ಳಿರಿ, ಆತನು ತನ್ನ ಸಾಧನೆಗಳ ಬಗ್ಗೆ ಹೊಗಳಿಕೊಳ್ಳುವನೋ-ಆತನು ಹೇಗೆ ತನ್ನನ್ನು ಕಾಪಾಡುವವನ ಮೇಲೆ ನಂಬಿಕೆ ಹೊಂದಿದ್ದಿರಬೇಕು?[97] ಇಲ್ಲ, ಆತನ ಹೊಗಳಿಕೆಯ ಮಾತುಗಳೇನಾದರೂ ಇದ್ದರೆ ಅವು ಆತನನ್ನು ರಕ್ಷಿಸಿದ ವ್ಯಕ್ತಿಗಾಗಿಯೇ ಆಗಿರುತ್ತವೆ.

**ವಚನ 28.** ಪೌಲನು ತನ್ನ ಚರ್ಚೆಯನ್ನು ಮುಂದುವರೆಸುತ್ತಾ, ಆತನು ಈಗಷ್ಟೆ 21 ರಿಂದ 26 ವಚನಗಳ ವರೆಗೆ ಕಲಿಸಿದ ಸಂಗತಿಯನ್ನು ಪುನಃ ಒತ್ತಿಹೇಳುತ್ತಾನೆ: **ಧರ್ಮಪ್ರಮಾಣದಸಂಬಂಧವಾದ ಕರ್ಮಗಳಿಲ್ಲದೆ**[98] **ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬದಾಗಿ** ["ದೇವರೊಂದಿಗೆ ಸಂಧಾನ (ರಾಜಿ) ಮಾಡಲ್ಪಡುವರು"; NCV] **ನಿಶ್ಚಯಮಾಡಿ ಕೊಂಡಿದ್ದೇವಲ್ಲಾ.**[99] "ಗಳಿಲ್ಲದೆ" ಎಂಬುದು χωρίς (*chōris*) ಎಂಬ ಪದದ ಅನುವಾದವಾಗಿದೆ, ಅದರರ್ಥವು "ಅದರಿಂದ ದೂರವಾಗಿ" ಅಥವಾ "ಅದಿಲ್ಲದೆಯೇ."[100] ABಯು ಇದನ್ನು "ಅದರಿಂದ ಸ್ವತಂತ್ರವಾಗಿ ಮತ್ತು ಸಂಪೂರ್ಣ ಪ್ರತ್ಯೇಕವಾಗಿ" ಎಂದು ತರ್ಜುಮೆ ಮಾಡಿರುತ್ತದೆ.

ಗ್ರೀಕ್ ಪ್ರತಿಯಲ್ಲಿ 28ನೇ ವಚನವು ಕೇವಲ "ಧರ್ಮಶಾಸ್ತ್ರದ ಕ್ರಿಯೆಗಳಿಲ್ಲದೆ" ಎಂದಷ್ಟೇ ಇರುತ್ತದೆ-" ಧರ್ಮಶಾಸ್ತ್ರ" ಎಂಬುದರ ಮುಂದೆ ಯಾವದೇ ನಿಖರ ಲೇಖನ ಇರುವದಿಲ್ಲ-ಆದರೆ ಪೌಲನು ಪ್ರಾಥಮಿಕವಾಗಿ ಮೋಶೆಯ ಧರ್ಮಶಾಸ್ತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಮಾತುಗಳನ್ನು ಹೇಳಿದನೆಂಬದು ಸನ್ನಿವೇಶದದಿಂದ ಸ್ಪಷ್ಟವಾಗುತ್ತದೆ. ಪುನಃ, ಹೇಗೂ, ಒಂದು ಸಾಮಾನ್ಯ ನಿಯಮವು ಅನ್ವಯಿಸಲ್ಪಟ್ಟಿದೆ: ನಾವು ಯಾವದೇ ಧರ್ಮಶಾಸ್ತ್ರವನ್ನು ಪಾಲಿಸುವದರಿಂದ ರಕ್ಷಿಸಲ್ಪಡಲು ಸಾಧ್ಯವಿಲ್ಲ- ಯಾಕೆಂದರೆ ನಾವು ಯಾವದೇ ಧರ್ಮಶಾಸ್ತ್ರವನ್ನು ದೋಷವಿಲ್ಲದೆ ಕೈಕೊಂಡು ನಡೆಯಲು ಸಾಧ್ಯವೇ ಇಲ್ಲ.

ವಚನ 27 ಮತ್ತು 28 ರಲ್ಲಿ ಪೌಲನು ಹೇಳ ಬಯಸುವದು ಸ್ಪಷ್ಟವಾಗಿದೆ: ನಂಬಿಕೆಯಿಂದ ರಕ್ಷಣೆಯುಂಟಾಗುವದರಿಂದ ಅಲ್ಲಿ ವೈಯಕ್ತಿಕ ಸಾಧನೆಯ ಬಗ್ಗೆ ಹೊಗಳಿಕೊಳ್ಳುವದಕ್ಕೆ ಯಾವದೇ ಅವಕಾಶ ಇರುವದಿಲ್ಲ. ಆತನು ಈ ಮುಂಚೆ ಎಫೆಸದಲ್ಲಿರುವ ಕ್ರೈಸ್ತರಿಗೆ ಹೀಗೆ

ಬರೆದಿದ್ದನು, "ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ" (ಎಫೆಸ 2:8, 9). ಆತನು ಕೊರಿಂಥದವರಿಗೆ ಬರೆದಾಗ, ಹೇಳಿದ್ದೇನೆಂದರೆ, "ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ" (1 ಕೊರಿಂಥ 1:31). ಗಲಾತ್ಯದವರಿಗೆ ಆತನು ಹೇಳಿದ್ದೇನೆಂದರೆ, "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವದು ಬೇಡವೇ ಬೇಡ" (ಗಲಾತ್ಯ 6:14; ನೋಡಿರಿ ಫಿಲಿಪ್ಪಿ 3:3).

ನಾವು ಈ ಮುಂಚೆ ಹೇಳಿದ ಹಾಗೆ, ವಚನ 27 ಮತ್ತು 28 ರಲ್ಲಿ ಪೌಲನ ಉದ್ದೇಶವು ಸ್ಪಷ್ಟವಾಗಿ ತೋರುತ್ತದೆ-ಮತ್ತು ಅದರ ಬಗ್ಗೆ ಸರ್ವ ಸಮ್ಮತಿಯಿರುತ್ತದೆ. ಹೇಗೂ, ಪೌಲನು ಉಪಯೋಗಿಸುವ ಪದಗಳ ವಿಚಾರವಾಗಿ ಕೆಲವು ಭಿನ್ನಾಭಿಪ್ರಾಯಗಳು ಏಳುತ್ತವೆ. ಉದಾಹರಣೆಗೆ, ವಚನ 27ರಲ್ಲಿ ಆತನು "ಧರ್ಮಪ್ರಮಾಣ" ಎಂದು ಹೇಳಿದ್ದರ ತಾತ್ಪರ್ಯವೇನು? "ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದ ರಿಂದಲೋ?" ಅಲ್ಲ, ವಿಶ್ವಾಸಮಾರ್ಗವನ್ನು ಅನುಸರಿಸುವದರಿಂದಲೇ (ಒತ್ತಿ ಹೇಳಿದ್ದು ನನ್ನದು). ನಮ್ಮ ಅಭ್ಯಾಸದಲ್ಲಿ ನಾವು "ಧರ್ಮಶಾಸ್ತ್ರ" ಎಂಬ ಪದವನ್ನು ಪದೇ ಪದೇ ನೋಡಿದ್ದೇವೆ. ಪ್ರಶ್ನೆಯೇನೆಂದರೆ ಪೌಲನು ಇಲ್ಲಿ ಮೋಶೆಯ ಧರ್ಮಶಾಸ್ತ್ರವೆಂಬ ಅರ್ಥದಲ್ಲಿ ಹೇಳಿದನೋ ಅಥವಾ ಸಾಮಾನ್ಯ ಅರ್ಥದಲ್ಲಿ ಧರ್ಮಪ್ರಮಾಣ ಎಂಬದಾಗಿ ಹೇಳಿದನೋ ಎಂಬುದು. ಹೇಗೂ, ಆತನು ಕೆಲವು ಸಾರಿ ಪದವನ್ನು ದ್ವೀತಿಯ ಅರ್ಥದಲ್ಲಿ ಉಪಯೋಗಿಸಿದನು. (ನೋಡಿರಿ *ಹೆಚ್ಚಿನ ಅಭ್ಯಾಸಕ್ಕಾಗಿ: "ಧರ್ಮಶಾಸ್ತ್ರ"* [Nomos] *ಮೇಲಿನ ಪದಾಭ್ಯಾಸ,* ಪುಟ 263.) ವಚನ 27ರಲ್ಲಿ, ಪೌಲನು ಬಹುಶಃ νόμος (*nomos*) ಎಂಬದನ್ನು "ನಿಯಮ" ಎಂಬರ್ಥ ಬರುವಂತೆ ದ್ವೀತಿಯ ಅರ್ಥದಲ್ಲಿ ಉಪಯೋಗಿಸಿರಬಹುದು: "ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಯಾವ (ನಿಯಮದ) ಆಧಾರದಲ್ಲಿ? ಕರ್ಮಮಾರ್ಗದಿಂದ ನೀತಿವಂತರೆಂದು ನಿರ್ಣಯವೆಂಬ (ನಿಯಮದಿಂದಲೋ)? ಇಲ್ಲ, ಆದರೆ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯವೆಂಬ (ನಿಯಮದಿಂದಲೇ)."

ರೋಮಾ 3:27, 28ರಲ್ಲಿ ಪೌಲನ ಪ್ರಾಥಮಿಕ ಸಂದೇಶವು ನಿಮಗೆ ಮತ್ತು ನನಗೆ ಹೊಗಳಿಕೊಳ್ಳುವದಕ್ಕೆ ಏನೂ ಇಲ್ಲ ಯಾಕೆಂದರೆ ನಾವು ರಕ್ಷಣೆ ಹೊಂದಿದ್ದು ನಮ್ಮ ಕ್ರಿಯೆಗಳಿಂದಲ್ಲ, ಆದರೆ ಯೇಸುವಿನಲ್ಲಿ ನಂಬಿಕೆಯಿಟ್ಟಿದ್ದರಿಂದಲೇ ಎಂದಾಗಿರುತ್ತದೆ. ಹಳೇಯ ಹಾಡಿನ ಮಾತುಗಳಲ್ಲಿ ನೋಡುವದಾದರೆ, "ನನ್ನ ನಿರೀಕ್ಷೆಯು ಯೇಸುವಿನ ರಕ್ತ ಮತ್ತು ನೀತಿಯ ಮೇಲೆಯೇ ಹೊರತು ಅದಕ್ಕಿಂತ ಕಡಿಮೆಯಾದದ್ದರ ಮೇಲಲ್ಲ."[101] ಸತ್ಯದ ಮೇಲಿನ ದೃಷ್ಟಿಯನ್ನು ಕಳಕೊಳ್ಳಬೇಡಿರಿ.

**ವಚನಗಳು 29, 30.** 1:18–3:20 ರಲ್ಲಿ, ಪೌಲನು ಯೆಹೂದ್ಯರನ್ನು ಮತ್ತು ಅನ್ಯಜನರನ್ನು ಒಂದೇ ಮಟ್ಟದಲ್ಲಿಟ್ಟು ತೋರಿಸಿದ್ದನು ಯಾಕೆಂದರೆ ಇಬ್ಬರೂ ಒಂದೇ ವಿಧವಾದ ಪಾಪಗಳನ್ನು ಮಾಡಿದ್ದರು. ಈಗ ಆತನು ಅವರನ್ನು ಸಮಾನವಾಗಿ ನಿಲ್ಲಿಸಿ ಅವರಿಬ್ಬರಿಗೂ ತಂದೆಯು ಒಬ್ಬನೇ ಎಂಬದನ್ನು ತೋರಿಸುತ್ತಾನೆ. ಆತನು ಹೀಗೆ ಕೇಳಿದನು, **ದೇವರು ಯೆಹೂದ್ಯರಿಗೆ ಮಾತ್ರ ದೇವರಾಗಿದ್ದಾನೋ?** ಕೆಲವು ಯೆಹೂದ್ಯರು ಹಾಗೆಯೇ

ಅಂದುಕೊಂಡಿದ್ದರು. ಆತನು ಕೇಳುತ್ತಾನೆ, **ಅನ್ಯಜನಗಳಿಗೆ ಸಹ ದೇವರಲ್ಲವೇ?** ಬಹಳಷ್ಟು ಯೆಹೂದ್ಯರು ಮನಸ್ಸಿಲ್ಲದೆ "ಹೌದು" ಎಂದು ಉತ್ತರಿಸಿದ್ದ ರೆನೋ. ಒತ್ತಾಯಪಡಿಸಿದ್ದರೆ, ದೇವರು ಅನ್ಯಜನರ ಸೃಷ್ಟಿಕರ್ತನು, ಅರಸನು, ಮತ್ತು ನ್ಯಾಯಾಧಿಪತಿ ಎಂದಷ್ಟೆ ಒಪ್ಪಿಕೊಳ್ಳುತ್ತಿದ್ದರೆಂದು ತೋರುತ್ತದೆ (ನೋಡಿರಿ ಕೀರ್ತನೆ 96:10; ಯೆರೆಮೀಯ 10:7). ಆದರೆ ಆತನು ಅನ್ಯಜನರ ರಕ್ಷಕನು ಎಂಬದನ್ನು ಸ್ವೀಕರಿಸಿಕೊಳ್ಳಲು ಅವರಿಗೆ ಕಷ್ಟಕರವಾಗಿತ್ತು.

ಪೌಲನು ತನ್ನ ಸ್ವಂತ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ: **ಹೌದು, ದೇವರು ಒಬ್ಬನೇ ಆಗಿರಲಾಗಿ ಆತನು ಅನ್ಯಜನರಿಗೆ ಸಹ ದೇವರಾಗಿದ್ದಾನೆ.** ಪೌಲನು ನಿರ್ಧಾರವು ಯೆಹೂದ್ಯ ಮತದ ತಿರುಳಿನ-ಏಕದೇವಾರಾಧನೆ[102]–ಸತ್ಯದ ಮೇಲೆ ಮತ್ತು ಪ್ರತಿಯೊಬ್ಬ ಯೆಹೂದ್ಯನಿಗೂ ಪರಿಚಿತವಿದ್ದ ವಾಕ್ಯ ಭಾಗದ ಮೇಲೆ ಆಧಾರವಾಗಿತ್ತು. ಪ್ರತಿ ದಿನವೂ, ಭಕ್ತಿವೈರಾಗ್ಯವುಳ್ಳ ಯೆಹೂದ್ಯರು ಶೇಮಾ (Shema)[103] ಪಠಿಸುತ್ತಿದ್ದರು, ಅದು ಹೀಗೆ ಆರಂಭವಾಗುತ್ತಿತ್ತು, "ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು!" (ಧರ್ಮೋಪದೇಶಕಾಂಡ 6:4). ಒಬ್ಬನೇ ಒಬ್ಬ ದೇವರಿರುವದಾದಲ್ಲಿ, ಆತನು ಯೆಹೂದ್ಯರಿಗೂ ಅನ್ಯಜನರಿಗೂ ದೇವರಾಗಿರಬೇಕು. ಅನ್ಯಜನರಿಗೆ ಪ್ರತ್ಯೇಕ ದೇವರು ಇದ್ದಿದ್ದರೆ, ಆಗ ಇಬ್ಬರು ದೇವರಾಗುತ್ತಿದ್ದರು-ಇದು ಯೆಹೂದ್ಯರಿಗೆ ಅಂಗೀಕಾರವಾಗದ ವಿಚಾರವಾಗಿತ್ತು.

ದೇವರು ಅನ್ಯಜನರಿಗೆ ಸಹ ದೇವರಾಗಿದ್ದರೆ, ಅವರು ಸಹ ಮಾನವರ ವಿಮೋಚನಾರ್ಥವಾಗಿ ದೇವರು ಮಾಡಿರುವ ಸಂಕಲ್ಪದಲ್ಲಿ ಸೇರ್ಪಡೆಗೊಳ್ಳುವದು ಸಹಜವಾಗುತ್ತದಷ್ಟೇ. ಪೌಲನ ಆರಂಭಿಕ ಹೇಳಿಕೆಯಲ್ಲಿ, ಆತನು ಹೇಳಿದ್ದೇನೆಂದರೆ, "ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆ ಮೇಲೆ ಗ್ರೀಕ್.ರಿಗೆ] ಅನ್ಯಜನರಿಗೆ[ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥ ದಾಗಿದೆ" (1:16; ಒತ್ತಿ ಹೇಳಿದ್ದು ನನ್ನದು.) ಈಗ ಆತನು ಸತ್ಯವನ್ನು ಪುನಃ ಒತ್ತಿ ಹೇಳುತ್ತಾನೆ. ಖಂಡಿತವಾಗಿ ದೇವರು **ಸುನ್ನತಿಯವರನ್ನು** [ಯೆಹೂದ್ಯರು] **ನೀತಿವಂತರೆಂದು ನಿರ್ಣಯಿಸುವದಕ್ಕೆ ಅವರ ನಂಬಿಕೆಯೇ ಆಧಾರ; ಸುನ್ನತಿಯಿಲ್ಲದ ವರನ್ನೂ**[104] [ಅನ್ಯಜನರನ್ನು] **ಹಾಗೆಯೇ ನಿರ್ಣಯಿಸುವದಕ್ಕೆ ನಂಬಿಕೆಯೇ ಕಾರಣ.**[105]

Bruce ಪ್ರಕಾರ, "ಯೆಹೂದ್ಯರು ಮತ್ತು ಅನ್ಯಜನರ ನಡುವಿನ ಬಿರುಕು ಪ್ರಾಚೀನ ಜಗತ್ತಿನಲ್ಲಿ ಸರಿಮಾಡುವದಕ್ಕಾಗದ ಅತ್ಯಂಥ ಕಠಿಣ ಸಮಸ್ಯೆಯಾಗಿತ್ತು"[106]—ಆದರೆ ಆ ಅಂತರಕ್ಕೆ (ತಗ್ಗಿಗೆ) ಯೇಸುವಿನ ಶಿಲುಬೆಯ ಮೂಲಕ ಸೇತುವೆಯಾಗಿತ್ತು. ಪೌಲನು ಎಫೆಸದ ಕ್ರೈಸ್ತರಿಗೆ ಹೇಳಿದ್ದೇನೆಂದರೆ,

> ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ [ಕ್ರಿಸ್ತನು] ನಮಗೆ ಸಮಾಧಾನಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡ ಗೋಡೆಯನ್ನು ಕೆಡವಿ ಹಾಕಿದನು. ಆತನು ಸಮಾಧಾನ ಮಾಡುವವನಾಗಿ ಉಭಯರನ್ನೂ ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ; ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ

ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ (ಎಫೆಸ 2:14-16).

Bruce ಇನ್ನೂ ಮುಂದಕ್ಕೆ ಸಾಗಿ ಹೇಳಿದ್ದೇನೆಂದರೆ, [3:29, 30 ರಲ್ಲಿ] ಅಂದು "ಪೌಲನ ದಿನಗಳಲ್ಲಿದ್ದಂತೆಯೇ ನಮ್ಮ ದಿನಗಳಲ್ಲಿ ಸಹ ಪಂಗಡಗಳಿರುವದರಿಂದ ಆತನ ವಾದವು ಈಗಲೂ ಮಹತ್ವದ್ದಾಗಿದೆ; ಪೂರ್ವ ಮತ್ತು ಪಶ್ಚಿಮ ಎಂಬ ಭೇದವಿಲ್ಲ, ಕರಿಯರು ಹಾಗೂ ಬಿಳಿಯರು ಎಂಬ ಭೇದವಿಲ್ಲ; ಯಾಕೆಂದರೆ ಎಲ್ಲರೂ ಸಮಾನವಾಗಿ ದೇವರ ಕರುಣೆಯ ಅಗತ್ಯತೆಯಲ್ಲಿದ್ದಾರೆ ಮತ್ತು ಎಲ್ಲರೂ ಸಹ ಒಂದೇ ನಿಯಮದ ಪ್ರಕಾರ ಆತನ ಕರುಣೆಯನ್ನು ಸ್ವೀಕರಿಸಬಹುದು."[107] ಕ್ರೈಸ್ತತ್ವವು ವಿವಿಧ ಗೋತ್ರ, ವಿವಿಧ ಸಾಮಾಜಿಕ ಸ್ಥಾನದಲ್ಲಿರುವವರನ್ನು, ವಿವಿಧ ಆರ್ಥಿಕ ಸ್ಥಿತಿಯಲ್ಲಿ, ವಿವಿಧ ಶೈಕ್ಷಣಿಕ ಹಿನ್ನಲೆ ಮತ್ತು ವಿವಿಧ ಜಾತಿಗಳಿಗೆ ಸೇರಿದ ಪುರುಷ. ಸ್ತ್ರೀಯರು, ಬಾಲಕರು ಹಾಗೂ ಬಾಲಕಿಯರನ್ನು ಒಂದಾಗಿ ಕೂಡಿಸುವ ಸಾಮರ್ಥ್ಯ ಹೊಂದಿ ವಿಭಿನ್ನವಾಗಿರುತ್ತದೆ-ಎಲ್ಲರೂ ತಮ್ಮನ್ನು ತನ್ನ ಕೃಪೆಯಿಂದ ರಕ್ಷಿಸಿದವನನ್ನು ಸ್ತುತಿಸಿ ಆರಾಧಿಸುವದಕ್ಕೆ ಒಂದಾಗಿ ಕೂಡಿ ಬಂದಿರುತ್ತಾರೆ.

N. Tom Wright ಹೇಳಿದ್ದೇನೆಂದರೆ ರೋಮಾ 3:29, 30ರ ಸಂದೇಶವು "ಸರಳವಾದದ್ದು : ಯೇಸುವಿನಲ್ಲಿ ನಂಬಿಕೆಯಿಡುವವರೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದ್ದಾರೆ ಮತ್ತು ಒಂದೇ ಮೇಜಿನ ಮುಂದೆ ಕುಳಿತು ಭೋಜನ ಮಾಡ ತಕ್ಕದ್ದು."[108] Halford E. Luccockನ ಹೇಳಿಕೆ ಸಹ "ಒಂದೇ ಕುಟುಂಬ" ದ ಪರಿಕಲ್ಪನೆಯನ್ನು ಎತ್ತಿ ತೋರಿಸುತ್ತದೆ:

> ನಮ್ಮ ಯಾವದೇ ಕ್ರಿಯೆಗಳಲ್ಲಿ ಜನರನ್ನು ಒಂದೇ ಕುಟುಂಬವಾಗಿ ನಡಿಸಿಕೊಳ್ಳಲು ವಿಫಲರಾದರೆ, ನಾವು ನಿಜವಾಗಿ ಯೂ ಒಂದೇ ದೇವರಲ್ಲಿ ನಂಬುವವರಾಗಿರುವದಿಲ್ಲ. . . ದೇವರು ಎಲ್ಲಾ ಜನರನ್ನೂ, ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ, ಅವರ ನಂಬಿಕೆಯ ಆಧಾರದಲ್ಲಿ ಒಂದೇ ರೀತಿಯಲ್ಲಿ ಕಾಣುತ್ತಾನೆ ಎಂದು ಪೌಲನು ಹೇಳುತ್ತಾನೆ. ದೇವರು ಬಣ್ಣಕ್ಕೆ ಕುರುಡಾಗಿದ್ದಾನೆ. ಆತನಿಗೆ ಇಂಥವರು ಅಚ್ಚುಮೆಚ್ಚು ಎಂಬುದಿಲ್ಲ. ಕೆಲವರನ್ನು ಅಲ್ಪರೆಂದು ಪ್ರತ್ಯೆಕಿಸುವ ಬೇಲಿಗಳನ್ನು ಆತನು ಅಸಹ್ಯಿಸುತ್ತಾನೆ. ನಾವು ಕೆಲವರನ್ನು ಅಸ್ಪೃಶ್ಯರೆಂದು ಪರಿಗಣಿಸಿದರೆ, ನಾವು ಏಕ ದೇವರಲ್ಲಿನ ವಿಶ್ವಾಸಿಗಳಲ್ಲ. ನಾವು ನಮ್ಮ ಕ್ರಿಯೆಗಳಿಂದ ಮಾನವ ಜನಾಂಗದ ಏಕತೆಯನ್ನು ಅಲ್ಲಗಳೆಯುವದಾದರೆ, ನಾವು ನಿಜವಾಗಿಯೂ ಬಹು ದೇವರುಗಳ ಆರಾಧಕರಾಗಿರುತ್ತೇವೆ.[109]

ಬಹುಶಃ ರೋಮಾ 3:29, 30 ರಲ್ಲಿ ಪೌಲನು ಏನು ಹೇಳಲಿಲ್ಲ ಎಂಬದರ ಬಗ್ಗೆ ಇನ್ನೊಂದು ಕ್ಲುಪ್ತವಾದ ಟಿಪ್ಪಣಿಯು ಅಗತ್ಯವೇನಿಸುತ್ತದೆ: ಯೆಹೂದ್ಯರು ಯೆಹೂದ್ಯರಾಗಿರುವದನ್ನು ನಿಲ್ಲಿಸಿದರು ಅಥವಾ ಅನ್ಯಜನರು ಇನ್ನು ಮೇಲೆ ಅನ್ಯಜನರಾಗಿ ರುವದನ್ನು ನಿಲ್ಲಿಸಿದರು ಎಂದು ಆತನು ಹೇಳಲಿಲ್ಲ. ಬದಲಾಗಿ, ಆತನು ಒತ್ತಿಹೇಳಿದ್ದೇನೆಂದರೆ, ರಕ್ಷಣೆಯ ವಿಷಯದಲ್ಲಿ, ಅಂಥ ವ್ಯತ್ಯಾಸ ಮಾಡುವಿಕೆಯು ಅಸಮಂಜಸ. ಎಲ್ಲರೂ ಒಂದೇ ಸಂಗತಿಯ ಆಧಾರದಲ್ಲಿ ರಕ್ಷಿಸಲ್ಪಟ್ಟಿದ್ದಾರೆ ಎಂಬದೇ.

ನಾನು ಇದನ್ನು ಉಲ್ಲೇಖಿಸಿದ್ದಕ್ಕೆ ಕಾರಣವೇನೆಂದರೆ ಕೆಲವರು ಈ ರೋಮಾ 3:29, 30 ಮತ್ತು ಗಲಾತ್ಯ 3:26-28 ರಂತಹ ವಾಕ್ಯ ಭಾಗಗಳು ಶಿಲುಬೆಯು ಅಂತಹ ಯಾವದೇ ವ್ಯತ್ಯಾಸಗಳನ್ನು ಅಳಿಸಿ ಹಾಕಿಬಿಟ್ಟಿತು ಎಂದು ವಾದಿಸುತ್ತಾರೆ. ವಿಶೇಷವಾಗಿ, ಅವರು

ಗಂಡನು ಹೆಂಡತಿಗೆ ಶಿರಸ್ಸಾಗಿದ್ದಾನೆಂಬ ಹೊಸ ಒಡಂಬಡಿಕೆಯ ಉಪದೇಶವನ್ನು ಅಲ್ಲಗಳೆಯುತ್ತಾರೆ (ನೋಡಿರಿ ಎಫೆಸ 5:23) ಮತ್ತು ಸಭೆಯಲ್ಲಿ (ನೋಡಿರಿ 1 ತಿಮೊಥೆ 3:2), ಸಾರ್ವಜನಿಕವಾದ ಆರಾಧನೆಯೂ ಸೇರಿದಂತೆ ಪುರುಷರ ನಾಯಕತ್ವದ ಕುರಿತ ಹೊಸ ಒಡಂಬಡಿಕೆಯು ಕೊಡುವ ಮಹತ್ವದ ಬಗ್ಗೆ ನಿರಾಕರಿಸುತ್ತಾರೆ (ನೋಡಿರಿ 1 ತಿಮೊಥೆ 2:8; 1 ಕೊರಿಂಥ 14:34). ಪುರುಷರೂ ಸ್ತ್ರೀಯರೂ ಒಂದೇ ರೀತಿಯಲ್ಲಿ ರಕ್ಷಿಸಲ್ಪಟ್ಟಿದ್ದಾರೆ, ಮತ್ತು ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಹೀಗಂದ ತಕ್ಷಣ ಅವರು ಪುರುಷ ಮತ್ತು ಸ್ತ್ರೀಯರಾಗಿರುವದನ್ನು ನಿಲ್ಲಿಸುತ್ತಾರೆ ಮತ್ತು ದೇವರು ಪುರುಷ ಹಾಗೂ ಸ್ತ್ರೀಯರಿಂದ ಏನು ಅಪೇಕ್ಷಿಸುತ್ತಾನೆಂಬ ಕುರಿತ ಬೈಬಲ್ ಉಪದೇಶಕ್ಕೆ ಒಳಪಟ್ಟವರಲ್ಲ ಎಂದರ್ಥವಾಗುವದಿಲ್ಲ.

**ವಚನ 31.** ಮನುಷ್ಯರು "ಧರ್ಮಪ್ರಮಾಣದ . . . ಕರ್ಮಗಳಿಲ್ಲದೆ ನೀತಿವಂತೆಂದು ನಿರ್ಣಯಿಸಲ್ಪಡುತ್ತಾರೆ" ಎಂದು ಪೌಲನು ಹೇಳಿದ್ದನು (3:28). ದೇವರು ಯೆಹೂದ್ಯನನ್ನು ಯಾವ ಆಧಾರದ ಮೇಲೆ ರಕ್ಷಿಸಿದನೋ (ಧರ್ಮಶಾಸ್ತ್ರದಿಂದ) ಅದೇ ರೀತಿ ಅನ್ಯಜನಾಂಗದವನನ್ನು ಅದೇ ಆಧಾರದ ಮೇಲೆ (ಧರ್ಮಶಾಸ್ತ್ರವಿಲ್ಲದೆ) ರಕ್ಷಿಸುವನು ಎಂಬದಾಗಿ ಪೌಲನು ಒತ್ತಿ ಹೇಳಿದನು (3:29, 30). ಅಂಥ ಹೇಳಿಕೆಗಳನ್ನು ನೀಡಿದ ಬಳಿಕ, ಆತನ ಟೀಕೆಕಾರರು ಅವನ ಮೇಲೆ "antinomianism" (ಧರ್ಮಶಾಸ್ತ್ರ ವಿರೋಧಿ( ಎಂಬ ದೋಷಾರೋಪಣೆ ಮಾಡಬಹುದೆಂಬದನ್ನು ಪೌಲನು ನಿರೀಕ್ಷಿಸಿದ್ದನು. ಈ ಉದ್ದವಾದ ಶಬ್ಧವು ಎರಡು ಗ್ರೀಕ್ ಪದಗಳ ಮೇಲೆ ಆಧಾರವಾಗಿದೆ: ἀντι (*anti*, "ವಿರುದ್ಧ") ಮತ್ತು νόμος (*nomos*, "ಧರ್ಮಶಾಸ್ತ್ರ"). ಧರ್ಮಶಾಸ್ತ್ರ-ವಿರೋಧಿಗಳು "ಕಾನೂನಿನ ವಿಧಿಗಳನ್ನು" ಅಥವಾ ನೈತಿಕ ಪ್ರತಿಬಂಧಗಳನ್ನು ಲೆಕ್ಕಿಸುತ್ತಿರಲಿಲ್ಲ.[110] ಆದ್ದರಿಂದ ಪೌಲನು ಧರ್ಮಶಾಸ್ತ್ರದಲ್ಲಿ ಮೌಲ್ಯವಿದೆಯೋ ಇಲ್ಲವೋ ಎಂಬದರ ಪ್ರಶ್ನೆಗೆ ಉತ್ತರಿಸುವ ಮೂಲಕ ಈ ವಿಭಾಗವನ್ನು ಮುಕ್ತಾಯಗೊಳಿಸುತ್ತಾನೆ. ಆತನು ಹೀಗೆ ಪ್ರಶ್ನಿಸುವ ಮೂಲಕ ಆರಂಭಿಸಿದನು, **ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕಮಾಡುತ್ತೇವೋ?**[111]

"ನಿರರ್ಥಕಗೊಳಿಸು" ಎಂಬುದು ಒಂದು ಸಂಯುಕ್ತ ಪದದಿಂದ (καταργέω, *katargeō*) ಬಂದಿದೆ, ಅದರ ಅರ್ಥವು "ನಿಕ್ರ್ರೀಯಗೊಳಿಸುವದು." ಅದು κατά (*kata*, "ಇಳಿಸು") ಮತ್ತು ἀργός (*argos*, "ನಿಷ್ಕ್ರೀಯ") ಎಂಬ ಎರಡು ಪದಗಳನ್ನೊಳಗೊಂಡಿದೆ.[112] KJV ಅದನ್ನು "ಅನೂರ್ಜಿತಗೊಳಿಸು" ಎನ್ನುತ್ತದೆ; Bauer ಶಬ್ದಕೋಶದಲ್ಲಿ "ರದ್ದುಗೊಳಿಸು" ಮತ್ತು "ಅಳಿಸಿಹಾಕು"[113] ಎಂಬ ವ್ಯಾಖ್ಯಾನವಿರುತ್ತದೆ. ಈ ವಚನದಲ್ಲಿ νόμος (*nomos*) ಮುಂದೆ ಯಾವದೇ ನಿರ್ದಿಷ್ಟ ಅನುಚ್ಛೇದವಿಲ್ಲ, ಆದರೆ ಪೌಲನು ವಿಶೇಷವಾಗಿ ಯೆಹೂದ್ಯರಿಂದ ಆಕ್ಷೇಪಣೇಗಳನ್ನು ನಿರೀಕ್ಷಿಸಿದ್ದನು. ನಾವು ಮೊದಲು ಆ ದೃಷ್ಟಿಕೋನದಿಂದ ಆತನ ಪ್ರಶ್ನೆಯು ಹೇಗೆ ನೋಡಲ್ಪಟ್ಟಿತೆಂಬ ಬಗ್ಗೆ ಆಲೋಚಿಸೋಣ: "ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯವೆಂಬ ಸಿದ್ಧಾಂತವು ಮೋಶೆಯ ಧರ್ಮಶಾಸ್ತ್ರವನ್ನು ನಿರರ್ಥಕಗೊಳಿಸುತ್ತದೋ?"

ಪುನಃ, ಪೌಲನು ಇಲ್ಲಿ ಆಘಾತಗೊಂಡ ಸ್ವರದಲ್ಲಿ ಉತ್ತರಿಸುತ್ತಾನೆ: **ಎಂದಿಗೂ ಇಲ್ಲ! ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ** ಎಂದು ಹೇಳಿದನು. "ಸ್ಥಿರಪಡಿಸು" ಎಂಬದು ἵστημι (*histēmi*) ಎಂಬದರಿಂದ ಬಂದದ್ದಾಗಿದೆ, ಅದರ ಅರ್ಥವು "ನಿಲ್ಲುವಂತೆ ಮಾಡು."[114] *Nomos (ಧರ್ಮಪ್ರಮಾಣ)* ಮುಂದೆ ನಿರ್ದಿಷ್ಟ ಅನುಚ್ಛೇದವಿಲ್ಲವಾದರೂ, ಇಲ್ಲಿ ಮುಖ್ಯ ಗಮನವು ಮೋಶೆಯ ಧರ್ಮಶಾಸ್ತ್ರದ ಮೇಲಾಗಿತ್ತು. ಈ ಸಂದರ್ಭದಲ್ಲಿ ಪೌಲನು ಆ

ವಿಚಾರವನ್ನು ವಿವರಿಸುವದಿಲ್ಲ, ಆದರೆ ನಂತರದ ಅಧ್ಯಾಯಗಳಲ್ಲಿ ಆತನು ಧರ್ಮಶಾಸ್ತ್ರವು ಏನು ಮಾಡಬಲ್ಲದು ಮತ್ತು ಮಾಡಲಾಗದು ಎಂಬ ಬಗ್ಗೆ ಹೆಚ್ಚಾಗಿ ತಿಳಿಸುತ್ತಾನೆ. ಕ್ರಿಸ್ತನು ಬಂದು ನಮ್ಮ ಪಾಪಗಳಿಗಾಗಿ ಸತ್ತನು ಎಂಬದು ಮೋಶೆಯ ಧರ್ಮಶಾಸ್ತ್ರವನ್ನು "ಸ್ಥಿರಪಡಿಸಿತು" ಯಾಕೆಂದರೆ ಅದು ಧರ್ಮಶಾಸ್ತ್ರವನ್ನು *ನೆರವೇರಿ ಸಿತು.* ಗಲಾತ್ಯ ಪುಸ್ತಕದಲ್ಲಿ, ಧರ್ಮಶಾಸ್ತ್ರವು "ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ" ಎಂದು ಪೌಲನು ಹೇಳುತ್ತಾನೆ (ಗಲಾತ್ಯ 3:24)-ಅದು ಆ ಉದ್ದೇಶವನ್ನು ನೆರವೇರಿಸಿರುತ್ತದೆ.

ಮುಂದೆ, ಅಕ್ಷರಶಃ ವಾಕ್ಯಭಾಗವನ್ನು ನಾವು ನೋಡೋಣ: "ಹಾಗಾದರೆ ನಂಬಿಕೆಯಿಂದ ಧರ್ಮಪ್ರಮಾಣವನ್ನು ನಿರರ್ಥಕಗೊಳಿಸುತ್ತೇವೋ? ಇಲ್ಲ! ಬದಲಾಗಿ, ನಾವು ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತೇವೆ." ಇಲ್ಲೊಂದು ಮಹತ್ವದ ಸಂದೇಶ ಅಡಗಿರುವಂತೆ ಕಾಣುತ್ತದೆ: ನಾವು ಕ್ರಿಯೆಗಳಿಂದಲ್ಲದೆ ನಂಬಿಕೆಯಿಂದಲೇ ರಕ್ಷಿಸಲ್ಪಟ್ಟಿದ್ದೇವೆ ಎಂದಾದ ತಕ್ಷಣ ಇನ್ನು ಮೇಲೆ ನಾವು ದೇವರ ಧರ್ಮಪ್ರಮಾಣಕ್ಕೆ ವಿಧೇಯರಾಗಬೇಕಾಗಿಲ್ಲ ಎಂದು ಅರ್ಥವೋ?[115] ನಾವು ಇನ್ನು ಮೇಲೆ ನಮ್ಮಿಷ್ಟ ಬಂದ ಹಾಗೆ ಜೀವಿಸಬಹುದು, ಭಕ್ತಿಯ ಜೀವನ ನಡಿಸುವದು ಇನ್ನು ಮೇಲೆ ಪ್ರಾಮುಖ್ಯವಾಗಿ ರುವದಿಲ್ಲ ಎಂದು ಅರ್ಥವೋ? ಪೌಲನ ಉತ್ತರವು ರಾಜಿಯಿಲ್ಲದ "ಖಂಡಿತವಾಗಿಯೂ ಇಲ್ಲ!" ಎಂದಾಗಿರುತ್ತದೆ (NKJV). "ಬದಲಿಗೆ, ನಾವು ಧರ್ಮಪ್ರಮಾ ಣವನ್ನು ಸ್ಥಿರಪಡಿಸುತ್ತೇವೆ" ಎಂದು ಆತನು ಹೇಳಿದನು.

ನಾವು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದರ ಆಧಾರದಲ್ಲಿ ಅಲ್ಲದೆ, ನಂಬಿಕೆಯ ಆಧಾರದಲ್ಲಿ ರಕ್ಷಿಸಲ್ಪಟ್ಟಿದ್ದೇವೆಂದು ಪೌಲನು ಅಷ್ಟೊಂದು ಬಲವಾಗಿ ಹೇಳಿದನಾದ್ದರಿಂದ, ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಡುವಂಥದು ಯಾವ ವಿಧದಲ್ಲಿ "ಧರ್ಮಪ್ರಮಾಣವನ್ನು ಸ್ಥಿರಪಡಿಸುತ್ತದೆ"? ಮೊಟ್ಟಮೊದಲಾಗಿ, ರಕ್ಷಿಸುವ ನಂಬಿಕೆಯು *ವಿಧೇಯತೆಯುಳ್ಳ* ನಂಬಿಕೆಯಾಗಿರುತ್ತದೆ. ವಿಶ್ವಾಸಿಯು ದೇವರ ಧರ್ಮಶಾಸ್ತ್ರಕ್ಕೆ ವಿಧೇಯನಾಗುವ ಕುರಿತು ಚಿಂತೆಯುಳ್ಳವನಾಗಿರುತ್ತಾನೆ; ಅವಿಶ್ವಾಸಿಯು ಹಾಗಿರುವದಿಲ್ಲ. ಎರಡನೆಯದಾಗಿ, ವಿಶ್ವಾಸಿಯು ತನಗಾಗಿ ದೇವರು ಏನು ಮಾಡಿದ್ದಾನೆಂಬದನ್ನು ಅರ್ಥಮಾಡಿ ಕೊಳ್ಳುತ್ತಾನೆ, ತನಗಾಗಿ ದೇವರು ಮಾಡಿದ್ದನ್ನು *ಪ್ರಶಂಸಿಸುತ್ತಾನೆ*, ಮತ್ತು ಆ ಕಾರಣದಿಂದ ದೇವರ ಧರ್ಮಶಾಸ್ತ್ರಕ್ಕೆ ವಿಧೇಯನಾಗಲು *ಬಯಸುತ್ತಾನೆ*. "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19); "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ" (1 ಯೋಹಾನ 5:3). ನಾವು ಬೇರೆ ಮಾತುಗಳಲ್ಲಿ ಹೇಳಬಹುದು, ಈ ರೀತಿಯಾಗಿ "ನಾವು ಧರ್ಮಶಾಸ್ತ್ರವನ್ನು ಸ್ಥಿರಪಡಿಸುವೆವು": "ನಾವು ಧರ್ಮಶಾಸ್ತ್ರದ ಉರ್ಜಿತತ್ವವನ್ನು ಸ್ಥಿರಪಡಿಸುತ್ತೇವೆ, ಏನೆಂದರೆ ದೇವರು ಈಗಲೂ ಆಜ್ಞೆಗಳನ್ನು ಇಟ್ಟಿದ್ದಾನೆ ಮತ್ತು ನಾವು ಈಗಲೂ ಅವುಗಳಿಗೆ ವಿಧೇಯರಾಗಬೇಕೆಂದು ನಿರೀಕ್ಷಿಸಲಾಗುತ್ತದೆ."

McGuiggan ಒಂದು ವಿಷಯವನ್ನು ತಿಳಿಸುತ್ತಾನೆ, ಏನೆಂದರೆ ಧರ್ಮಶಾಸ್ತ್ರವನ್ನು ಅನುಸರಿಸಿ ನಡೆಯುವದರಿಂದ ರಕ್ಷಣೆ ಎಂದು ನಂಬುವವರಿಗಿಂತಲೂ ನಂಬಿಕೆಯಿಂದಲೇ ರಕ್ಷಣೆ ಎಂಬದರಲ್ಲಿ ನಂಬಿಕೆಯುಳ್ಳವರೇ ಧರ್ಮಶಾಸ್ತ್ರದ ಬಗ್ಗೆ ಗೌರವ ಹೊಂದಿರುತ್ತಾರೆ. ಆತನು "ನೇಮನಿಷ್ಠೆವಾದಿ" (ಧರ್ಮಶಾಸ್ತ್ರವನ್ನು ಅನುಸರಿಸುವದರಿಂದ ರಕ್ಷಣೆ ಎಂದು ನಂಬುವವನು) ಮತ್ತು "ವಿಶ್ವಾಸಿ" ಯ ನಡುವೆ ವ್ಯತ್ಯಾಸವನ್ನು ತೋರಿಸುತ್ತಾನೆ:

ಒಂದು ಕಡೆಯಲ್ಲಿ, ನೇಮನಿಷ್ಠೆ ವಾದಿಯು ಧರ್ಮಶಾಸ್ತ್ರಕ್ಕೆ ಒಂದು ವಿಧೇಯವಾದ ಜೀವನ ಅರ್ಪಿಸಿ ಅದು ಧರ್ಮಶಾಸ್ತ್ರದ ಬೇಡಿಕೆಗಳನ್ನು ತೃಪ್ತಿಗೊಳಿಸುವದೆಂದು ಭಾವಿಸುತ್ತಾನೆ. ಆದರೆ, ಮಾನವನ ವಿಧೇಯತೆಯು ಯಾವಾಗಲೂ ದೋಷಪೂರಿತವಾಗಿರುತ್ತಾದ್ದರಿಂದ, ಅದು ಧರ್ಮಶಾಸ್ತ್ರದ ಅತ್ಯುನ್ನತ ಪರಿಶುದ್ಧತೆಯನ್ನು ಹಗುರವಾಗಿ ಕಾಣುವಂತೆ ಮಾಡುತ್ತದೆ. ಅದು ಧರ್ಮಶಾಸ್ತ್ರವನ್ನು ಅದು ಬೇಡುವದಕ್ಕಿಂತ ಕಡಿಮೆಯಾದದ್ದರಲ್ಲಿ ತೃಪ್ತಿಪಟ್ಟುಕೊಳ್ಳುವಂತೆ ವಿನಂತಿಸಿಕೊಳ್ಳುವದಾಗಿದೆ. ಇನ್ನೊಂದೆಡೆಯಲ್ಲಿ, ಒಬ್ಬ ವಿಶ್ವಾಸಿಯು ತನಗೆ ಮಾಡಲು ಸಾಧ್ಯವಾದದ್ದೆಲ್ಲವೂ ಧರ್ಮಶಾಸ್ತ್ರವು ಕೇಳುವದಕ್ಕಿಂತ ಕಡಿಮೆಯಾದದ್ದೇ ಎಂದು ಅರಿಕೆ ಮಾಡುತ್ತಾನೆ. ಅಂದರೆ, ಆತನು ಧರ್ಮಶಾಸ್ತ್ರಕ್ಕೆ ಹೇಳುವದೇನೆಂದರೆ, "ನನ್ನನ್ನು ಕ್ಷಮಿಸು, ನಾನು ನನ್ನ ಶಕ್ತಿಮೀರಿ ಮಾಡಲು ಸಾಧ್ಯವಾದದ್ದು ನಿನ್ನ ನೀತಿಯ ಮತ್ತು ಪರಿಶುದ್ಧ ಬೇಡಿಕೆಗಳನ್ನು ತೃಪ್ತಿಪಡಿಸಲು ಸ್ವಲ್ಪವೂ ಆಗುವದಿಲ್ಲ. ನಾನು ಒಬ್ಬ ಪರ್ಯಾಯ ವ್ಯಕ್ತಿಯನ್ನು ಕರೆಯಲೇಬೇಕು: ಯೇಸು ಕ್ರಿಸ್ತನು." ಧರ್ಮಶಾಸ್ತ್ರವನ್ನು ಸರ್ವೋತ್ಕೃಷ್ಟ ಪವಿತ್ರತೆಯಲ್ಲಿ ನಿಲ್ಲಿಸುವವನು ವಿಶ್ವಾಸಿಯೇ ಹೊರತು ನೇಮನಿಷ್ಠೆ ವಾದಿಯಲ್ಲ.[116]

3:31ರ ಮೇಲಿನ ವ್ಯಾಖ್ಯಾನಗಳು ಹಾಗೂ ಕೆಲವು ತರ್ಜುಮೆಗಳಿಂದ ಸ್ಪಷ್ಟವಾಗುವದೇನೆಂದರೆ, ಮೋಶೆಯ ಧರ್ಮಶಾಸ್ತ್ರವು ಇಂದಿಗೂ ಚಾಲ್ತಿಯಲ್ಲಿದೆ-ಕನಿಷ್ಠ ಯೆಹೂದ್ಯರಿಗಾಗಿ ಮತ್ತು ಬಹುಶಃ ಎಲ್ಲರಿಗಾಗಿಯೂ ಎಂದು ಈ ವಚನಗಳು ಕಲಿಸುತ್ತವೆಂಬದಾಗಿ ಕೆಲವರು ನಂಬುತ್ತಾರೆ. ಅನೇಕ ಲೇಖಕರು ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳ ನಡುವಿನ ಸಂಬಂಧದ ಬಗ್ಗೆ ಎಂದಿಗೂ ಹೋರಾಟ ಅನುಭವಿಸಿಲ್ಲವೆಂಬುದು ಸಹ ಸ್ಪಷ್ಟವಾಗಿರುತ್ತದೆ. ನನ್ನ ಸಂಶೋಧನೆಯಲ್ಲಿ, ನನಗೆ ಆಗಾಗ ದೇವರು ಹಳೇ ಒಡಂಬಡಿಕೆಯಲ್ಲಿನ "ಆಚಾರಗಳ ಪ್ರಮಾಣಗಳನ್ನು" ತೊಲಗಿಸಿದ್ದಾನೆ ಆದರೆ "ನೈತಿಕ ವಿಧಿ" ಗಳನ್ನಲ್ಲ ಎಂಬ ಅನಿಸಿಕೆ ಎದುರಾಗಿದೆ. ಅದು ನಿಜವೇ ಆಗಿದ್ದಲ್ಲಿ, ಯಾವದು "ಆಚಾರಬದ್ಧ" ಮತ್ತು ಯಾವದು "ನೈತಿಕ" ಎಂಬದನ್ನು ಹೇಳುವದಕ್ಕೆ ಯಾರು ಅರ್ಹರು?

ರೋಮಾಪುರ ಪತ್ರಿಕೆ ಬರೆಯುವದರಲ್ಲಿ, ಪೌಲನು ಧರ್ಮಶಾಸ್ತ್ರದ ರದ್ದುಗೊಳಿಸುವಿಕೆ ಬಗ್ಗೆ ಕೇವಲ ಪರೋಕ್ಷವಾಗಿ ಮಾತ್ರ ಮಾತಾಡುತ್ತಾನೆ.[117] ಆತನ ಉದ್ದೇಶವು ನಾವು ಧರ್ಮಶಾಸ್ತ್ರ ಕೈಕೊಂಡು ನಡೆಯುವದರಿಂದ ರಕ್ಷಿಸಲ್ಪಟ್ಟಿಲ್ಲ-ಹಳೇ ಒಡಂಬಡಿಕೆಯ ಅಥವಾ ಹೊಸ ಒಡಂಬಡಿಕೆಯ ಆಜ್ಞೆಗಳನ್ನಾಗಲಿ ಅಥವಾ ಇನ್ನಾವದೇ ಧರ್ಮಶಾಸ್ತ್ರವಾಗಲಿ- ಎಂಬದನ್ನು ಮನದಟ್ಟು ಮಾಡುವದೇ ಆಗಿತ್ತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ಏನು ಹೇಳಬೇಕಿತ್ತೋ ಅದರಲ್ಲಿ *ಯಾವ* ಧರ್ಮಶಾಸ್ತ್ರ ಎಂಬುದು ಅಷ್ಟೊಂದು ಮುಖ್ಯ ಆಗಿರಲಿಲ್ಲ. ಹೇಗೂ, ಬೇರೆ ಸಂದರ್ಭಗಳಲ್ಲಿ, ಆತನು ಆ ವಿಷಯದ ಬಗ್ಗೆ ಬರೆದದ್ದುಂಟು. ಎಫೆಸ 2:14, 15ರಲ್ಲಿ, ಪೌಲನು ಹೇಳಿದ್ದೇನೆಂದರೆ ಕ್ರಿಸ್ತನು "ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು (ಅಂದರೆ ಮೋಶೆಯ ಧರ್ಮಶಾಸ್ತ್ರವನ್ನು) ತೆಗೆದುಹಾಕಿ ಇದ್ದ ದ್ವೇಷವನ್ನು (ಯೆಹೂದ್ಯರು ಮತ್ತು ಅನ್ಯಜನರ ನಡುವಿನ) ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿ ಹಾಕಿದನು." ಗಲಾತ್ಯ 3:24 ಹೇಳುವದೇನೆಂದರೆ ಧರ್ಮಶಾಸ್ತ್ರವು ನಮ್ಮನ್ನು "ನಂಬಿಕೆಯಿಂದ ನೀತಿವಂತರೆಂಬ ನಿರ್ಣಯಹೊಂದುವದ ಕ್ಕಾಗಿ ಕ್ರಿಸ್ತನಲ್ಲಿಗೆ ಸೇರಿವ ತನಕ ಅದು ನಮ್ಮನ್ನ ಕಾಯುತ್ತದೆ." ಸುಳ್ಳು ಬೋಧಕರು ಹಳೇ ಒಡಂಬಡಿಕೆಯ ನಿಯಮಗಳನ್ನು-

ಸುನ್ನತಿಯಂತಹ ಆಚಾರ-ಕ್ರೈಸ್ತರ ಮೇಲೆ ಹೇರುವದಕ್ಕೆ ಪ್ರಯತ್ನಿಸಿದಾಗ ಪೌಲನು ತೀಕ್ಷ್ಣವಾದ ನಿರ್ಣಾಯಕ ಪ್ರತಿಕ್ರಿಯೆ ನೀಡಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 15:1, 2; ಗಲಾತ್ಯ 5:2).

ಈ ವಿಚಾರವು ಅನಂತರದಲ್ಲಿ ನಮ್ಮ ಚರ್ಚೆಗಳಲ್ಲಿ ಬರಲಿದೆ. ಈಗ ಸದ್ಯಕ್ಕೆ ಇಷ್ಟನ್ನು ಮಾತ್ರ ಹೇಳಬಹುದು: 3:31ರಲ್ಲಿ ಪೌಲನು ಮೋಶೆಯ ಧರ್ಮಶಾಸ್ತ್ರವು ಈ ದಿನವೂ ಚಾಲ್ತಿ (ಉರ್ಜಿತ) ಯಲ್ಲಿರುತ್ತದೆಂದು ಹೇಳಲಿಲ್ಲ.

ರೋಮಾಪುರ ಪತ್ರಿಕೆಯನ್ನು ಬರೆಯುದರಲ್ಲಿ, ಪೌಲನು ತನ್ನ ವಾಚಕರಿಗೆ ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ಸಿದ್ಧಾಂತವು ಅರ್ಥವಾಗಬೇಕೆಂದು ಬಯಸಿದ್ದನು:

> ಅದು ಪಾಪಿಗಳನ್ನು ತಗ್ಗಿಸುತ್ತದೆ-ಮತ್ತು ಹೊಗಳಿಕೊಳ್ಳುವವರನ್ನು ತೊಲಗಿಸುತ್ತದೆ.
> ಅದು ವಿಶ್ವಾಸಿಗಳನ್ನು ಒಂದುಗೂಡಿಸುತ್ತದೆ-ಮತ್ತು ಮೇಲುಕೀಳನ್ನು ವಿರೋಧಿ ಸುತ್ತದೆ.
> ಧರ್ಮಶಾಸ್ತ್ರವನ್ನು ಸ್ಥಿರಪಡಿಸುತ್ತದೆ-ಮತ್ತು ವಿಧೇಯತೆಯನ್ನು ಪ್ರೋತ್ಸಾಹಿ ಸುತ್ತದೆ.[118]

ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ಕುರಿತ ಪೌಲನ ಉಪದೇಶವು ಒಂದು ವೈಯಕ್ತಿಕ ಅನ್ವಯಿಕೆಗೆ ಯೋಗ್ಯವಾಗಿದೆ. ಈ ಹೊತ್ತಿಗಾಗಲೇ, ಪ್ರತಿಯೊಬ್ಬ ವಾಚಕನಿಗೂ ಸ್ಪಷ್ಟವಾಗಿರಬೇಕೇನೆಂದರೆ ಆತನು ಅಥವಾ ಅವಳು ಕಳೆದು ಹೋದರೆ ಅದು ದೇವರ ತಪ್ಪಾಗಿರುವದಿಲ್ಲ. ಪ್ರತಿಯೊಬ್ಬನಿಗೂ ರಕ್ಷಣೆಯು ಲಭ್ಯವಿರುವಂತೆ ಮಾಡುವದಕ್ಕೆ ದೇವರು ಸಾಧ್ಯವಾದದ್ದೆಲ್ಲವನ್ನೂ ಮಾಡಿದ್ದಾನೆ. ಆತನು ತನ್ನ ಮಗನನ್ನು ಕಳುಹಿಸಿಕೊಟ್ಟಿದ್ದು ಮಾತ್ರವಲ್ಲದೆ, ನಮಗೆ ಕ್ರಿಸ್ತನ ಯಜ್ಞದ ಕುರಿತು ಮತ್ತು ಎಲ್ಲಾ ಮನುಷ್ಯರು ಅದರ ಪ್ರಯೋಜನವನ್ನು ಹೇಗೆ ಪಡೆದುಕೊಳ್ಳಬಹುದು ಎಂಬ ಬಗ್ಗೆ ಕಲಿಸಲು ಲೋಕಕ್ಕೆ ವಾಕ್ಯವನ್ನು ಸಹ ಕೊಟ್ಟಿದ್ದಾನೆ. ಮಿಕ್ಕದ್ದು ನಮ್ಮ ವಿವೇಚನೆಗೆ ಬಿಟ್ಟಿದ್ದು. ನೀವು ಯೇಸುವಿನಲ್ಲಿ ಇನ್ನೂ ವಿಶ್ವಾಸವಿಟ್ಟಿಲ್ಲವಾದರೆ ಮತ್ತು ಮಾರ್ಕ 16:16 ಹಾಗೂ ಅಪೊಸ್ತಲರ ಕೃತ್ಯಗಳು 2:38ರಲ್ಲಿ ವಿವರಿಸಲ್ಪಟ್ಟಿರುವ ಹಾಗೆ ಆತನ ಚಿತ್ತಕ್ಕೆ ವಿಧೇಯರಾಗಿಲ್ಲವಾದರೆ, ನೀವು ಆ ಪ್ರತಿಸ್ಪಂದನೆಯನ್ನು ತಕ್ಷಣವೇ ಮಾಡುವದು ಬಹಳ ಮುಖ್ಯವಾಗಿರುತ್ತದೆ.

## ಹೆಚ್ಚಿನ ಅಧ್ಯಯನಕ್ಕಾಗಿ: "ಧರ್ಮಶಾಸ್ತ್ರ" (*NOMOS*) ಪದದ ಮೇಲಿನ ಅಧ್ಯಯನ

"ಧರ್ಮಶಾಸ್ತ್ರ" (νόμος, *nomos*) ಎಂಬುದು ರೋಮಾಪುರ ಪತ್ರಿಕೆಯಲ್ಲಿ ಪ್ರಾಮುಖ್ಯವಾದ ಪದವಾಗಿದೆ; ಅದು ಎಪ್ಪತ್ತಕ್ಕೂ ಹೆಚ್ಚು ಸಾರಿ ಕಾಣಿಸಿಕೊಳ್ಳುತ್ತದೆ. ಮೂಲತಃ *nomos* ಅರ್ಥವು "ಯಾವದು ಸರಿ (ಆಗಿತ್ತೊ)," "ಯಾವದೇ ವಿಧಿ, ನಿಯಮ, ಪದ್ಧತಿ."[119] ಕ್ರಮೇಣದಲ್ಲಿ, "ಒಂದು ದೇಶದಿಂದ ಶಾಸನಗೊಳಿಸಲ್ಪಟ್ಟು 'ಧರ್ಮಶಾಸ್ತ್ರ'ಕ್ಕೆ ಸ್ಥಾಪಿತ ಹೆಸರಾಗಿ" ಮಾರ್ಪಟ್ಟಿತು.[120] ಹೇಗೂ, ಆಗಲೂ ಅದಕ್ಕೆ ವ್ಯಾಪಕವಾದ ವಿವಿಧ ಅರ್ಥಗಳಿದ್ದವು, ಇಂದಿನ ಆಂಗ್ಲ ಭಾಷೆಯ "ಕಾನೂನು" ಎಂಬ ಪದಕ್ಕಿರುವಂತೆಯೇ. ನನ್ನ ಆಂಗ್ಲ ನಿಘಂಟು "ಕಾನೂನು" ಎಂಬದಕ್ಕೆ ಹದಿನಾಲ್ಕು ಬೇರೆ ಬೇರೆ ವ್ಯಾಖ್ಯಾನಗಳನ್ನು ಕೊಡುತ್ತದೆ![121] Moo ಇದನ್ನು ಗಮನಕ್ಕೆ ತರುತ್ತಾನೆ, "ನಾವು "ಕಾನೂನು" ಎಂಬದನ್ನು

ದಿಗ್ಭ್ರಮೆಗೊಳಿಸುವಷ್ಟು ವೈವಿಧ್ಯ ರೀತಿಗಳಲ್ಲಿ ಉಪಯೋಗಿಸುತ್ತೇವೆ, ಸರ್ಕಾರವು ನಮ್ಮ ಮೇಲೆ ವಿಧಿಸುವ ಅಧಿಕೃತ ನಿರ್ಬಂಧಗಳಿಂದ ಹಿಡಿದು (ಉದಾ.: 'ಒಕ್ಕೂಟದ ಕಾನೂನು') ಭೌತಿಕ ಜಗತ್ತಿನಲ್ಲಿ ಅನುಸರಿಸಲ್ಪಡುವ ಸಾಮಾನ್ಯ ಪ್ರವೃತ್ತಿಗಳ ('ಭೌತಿಕ ನಿಮಯಗಳು') ವರೆಗೆ ಎಲ್ಲವನ್ನೂ ಬಣ್ಣಿಸುವದಕ್ಕೆ ಕಾನೂನು ಎಂಬದನ್ನು ಉಪಯೋಗಿಸುತ್ತೇವೆ."[122]

ಅದೇ ರೀತಿಯಲ್ಲಿ, ಪೌಲನು "ಧರ್ಮಶಾಸ್ತ್ರ" ಎಂಬ ಪದವನ್ನು ವಿವಿಧ ರೀತಿಗಳಲ್ಲಿ ಉಪಯೋಗಿಸಿದನು. ಆತನು ಆಂಗ್ಲ ನಿಘಂಟಿನಲ್ಲಿ ಸಿಕ್ಕುವ ಎಲ್ಲಾ ಹದಿನಾಲ್ಕಕ್ಕಿಂತ ಹೆಚ್ಚು ಪದಗಳ ಅರ್ಥವನ್ನು ಸಹ ಉಪಯೋಗಿಸಲಿಲ್ಲ, ಆದರೆ ಆತನು ಉಪಯೋಗಿಸಿದ ರೀತಿಯಲ್ಲಿ ಪರಿಗಣಿಸತಕ್ಕ ವೈವಿಧ್ಯತೆಯಿರುತ್ತದೆ. ಉದಾಹರಣೆಗೆ, ರೋಮಾ 7:23ರಲ್ಲಿ ಆತನು ಹೀಗೆ ಬರೆದನು, "ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ. ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶ ಮಾಡುವಂಥದಾಗಿದೆ" (ಒತ್ತಿ ಹೇಳಿದ್ದು ನನ್ನದು).

ನನ್ನ ಮನಸ್ಸಿನಲ್ಲಿ, J. D. Thomas "ರೋಮಾಪುರ ಪತ್ರಿಕೆಯಲ್ಲಿ 'ಧರ್ಮಶಾಸ್ತ್ರ'ದ ಅರ್ಥದ ಛಾಯೆಗಳ" ಬಗ್ಗೆ ಮಾತಾಡುವದನ್ನು ಕೇಳಿಸಿಕೊಳ್ಳಬಲ್ಲೆ, ಮತ್ತು ಆತನು ಚಾಲ್ಕ್ ಬೋರ್ಡಿನ ಮೇಲೆ ಪಟ್ಟಿಯನ್ನು ಬರೆಯುವದನ್ನು ನೋಡಬಲ್ಲೆನು. ಆತನು ಏಳು ವಿವಿಧ ಅರ್ಥಗಳ ಪಟ್ಟಿ ಮಾಡಿದ್ದಾನೆಂದು ಅನ್ನಿಸುತ್ತದೆ, ಆದರೆ ರೋಮಾಪುರ ಪತ್ರಿಕೆಯ ಮೇಲಿನ ಆತನ ಪುಸ್ತಕವು ಹೇಳುವದೇನೆಂದರೆ, "ಬಹುಶಃ ಆ ಪದದ ಎಂಟು ಅಥವಾ ಹತ್ತು ಅಥವಾ ಹನ್ನೆರಡು ವಿವಿಧ ಅರ್ಥಗಳಿರಬಹುದು."[123] ನನ್ನ ಪಟ್ಟಿಯಲ್ಲಿ ಏಳು ವಿವಿಧ ಅರ್ಥಗಳಿರುತ್ತವೆ, ಆದರೆ ಇವುಗಳು ಒಂದು ರೀತಿಯಲ್ಲಿ ಸಹೋದರ Thomas ತರಗತಿಯಲ್ಲಿ ನೀಡಿದ ಪಟ್ಟಿಗಿಂತ ಸ್ವಲ್ಪ ವ್ಯತ್ಯಾಸವಾಗಿರಬಹು ದಾಗಿದೆ. ಕೆಳಗಿನ ವ್ಯಾಖ್ಯಾನಗಳು ಸಾಧ್ಯತೆಗಳನ್ನು ನಿತ್ರಾಣಗೊಳಿಸುವದಿಲ್ಲ, ಆದರೆ ನಮ್ಮ ಅಭ್ಯಾಸದಲ್ಲಿ ನಮಗೆ ಎದುರಾಗುವ ಜಟಿಲ ಅರ್ಥದ ಛಾಯೆಗಳನ್ನು ಚರ್ಚಿಸಬಹುದಾಗಿದೆ. ಪೌಲನ ಪತ್ರಿಕೆಯಲ್ಲಿ ಉಪಯೋಗಿಸಲಾಗಿರುವ "ಧರ್ಮಶಾಸ್ತ್ರ" (*nomos*) ಎಂಬದರ ಕೆಲವು ವಿಧಗಳು:

1. *Nomos* ಎಂಬದನ್ನು ಬಹಳ ನಿರ್ಬಂಧಕರವಾದ ಅರ್ಥದಲ್ಲಿ-Torah, ಹಳೇ ಒಡಂಬಡಿಕೆಯ ಮೊದಲ ಐದು ಪುಸ್ತಕಗಳನ್ನು ಸೂಚಿಸಲು-ಉಪಯೋಗಿಸಬಹು ದಾಗಿದೆ.[124] ರೋಮಾ 3:21 ರಲ್ಲಿ, *nomos* ಆ ಅರ್ಥವನ್ನು ಹೊಂದಿತ್ತು, ಪೌಲನು ಅಲ್ಲಿ ಹಳೇ ಒಡಂಬಡಿಕೆಯನ್ನು "ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ನುಡಿಗಳು" ಎಂದು ವಿಂಗಡಿಸಿದನು. ರೋಮಾ 7ನೇ ಅಧ್ಯಾಯದಲ್ಲಿ ಪೌಲನು, ". . . ಆಶಿಸಬಾರದೆಂದು ಧರ್ಮಶಾಸ್ತ್ರವು ಹೇಳದಿದ್ದರೆ ದುರಾಶೆಯಂದರೆ ಏನೋ ನನಗೆ ತಿಳಿಯುತ್ತಿದ್ದಿಲ್ಲ" (7:7). ಈ ಉಲ್ಲೇಖವು Torah ದಿಂದ ತೆಗೆದುಕೊಂಡದ್ದಾಗಿದೆ (ವಿಮೋಚನಕಾಂಡ 20:17). ಕೆಲವರು ರೋಮಾಪುರ ಪತ್ರಿಕೆಯಲ್ಲಿ *nomos* ಯಾವಾಗಲೂ "Torah" ಎಂಬರ್ಥ ವಾಗಿದೆ ಎಂದು ಯೋಚಿಸುತ್ತಾರೆ. ಅಂಥ ಅಭಿಪ್ರಾಯವು ಸ್ವಲ್ಪ ಅತಿರೇಕವಾದದ್ದಾದರೂ, ಈ ಪತ್ರಿಕೆಯಲ್ಲಿ ಇದು *nomos* ಎಂಬುದರ ಪ್ರಧಾನ ಅರ್ಥವಾಗಿದೆ ಎಂದು ನಾವು ಒಪ್ಪಬಹುದು.

2. ಅದು ಹಳೇ ಒಡಂಬಡಿಕೆ ಎಂಬ ಸಾಮಾನ್ಯ ಅರ್ಥ ಹೊಂದಿರಬಹುದು. ರೋಮಾ 3:10–18 ರಲ್ಲಿ, ಪೌಲನು ಕೀರ್ತನೆ ಹಾಗೂ ಯೆಶಾಯ ಪುಸ್ತಕಗಳಿಂದ ಉಲ್ಲೇಖಿಸುತ್ತಾ ಹೇಳುವದೇನೆಂದರೆ, "*ಧರ್ಮಶಾಸ್ತ್ರ*ದ ನುಡಿಗಳೆಲ್ಲವು ಆ ಶಾಸ್ತ್ರಕ್ಕೆ ಒಳಗಾದವರಿಗೇ ಹೇಳಿವೆ" (3:19; ಒತ್ತಿ ಹೇಳಿದ್ದು ನನ್ನದು). ಈ ವಾಕ್ಯಭಾಗದಲ್ಲಿ Torahದ ಭಾಗವಾಗಿರದ

ಹಳೇ ಒಡಂಬಡಿಕೆಯ ಇತರ ಪುಸ್ತಕಗಳು “ಧರ್ಮಶಾಸ್ತ್ರ” ದ ಭಾಗವಾಗಿವೆ ಎಂಬದನ್ನು ತೋರಿಸಿ ಕೊಡುತ್ತಾನೆ.

3. ಅದಕ್ಕೆ ಇನ್ನಷ್ಟು ವಿಸ್ತಾರವಾದ ಅರ್ಥವಿರಬಲ್ಲದು, ಸಾಮಾನ್ಯ ಅರ್ಥದಲ್ಲಿ ದೇವರಿಂದ ಬಂದ ಪ್ರಕಟಣೆಗಳು ಎಂದಾಗಿರಬಲ್ಲದು, ಲಿಖಿತ ಅಥವಾ ಲಿಖಿತವಲ್ಲದ ಸಹ ಆಗಿರಬಹುದು. ದೇವರು ತನ್ನನ್ನು ಅನ್ಯಜನಾಂಗದ ಜಗತ್ತಿಗೆ ಮೌಖಿಕ ಸಂಪ್ರದಾಯಗಳು, ಪ್ರಕೃತಿಯ ಮೂಲಕ ಪ್ರಕಟಿಸಿಕೊಂಡಿದ್ದನು (1:19, 20), ಮತ್ತು ಮನಸಾಕ್ಷಿಯ ಮೂಲಕ ಪ್ರಕಟಿಸಿಕೊಂಡಿದ್ದನು (2:15). ಪೌಲನು ಅನ್ಯಜನರ ವಿಷಯವಾಗಿ ಅವರು “ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ” ಎಂದು ಹೇಳಿದನು (2:14). ಆತನು ಧರ್ಮಶಾಸ್ತ್ರವಿಲ್ಲದೆ ಪಾಪವೆಂಬುದಿಲ್ಲ ಎಂದು ಹೇಳಿದನು (ನೋಡಿರಿ 4:15; 5:13), ಅದೇ ವೇಳೆಯಲ್ಲಿ ಎಲ್ಲರೂ ಪಾಪಿಗಳೆಂದು ಸಹ ವಾದಿಸಿದನು (3:23). ಆತನು ಹೇಗೆ ಆ ರೀತಿ ಹೇಳಲು ಶಕ್ತನಾದನು? ಯಾಕೆಂದರೆ ಎಲ್ಲರ ಬಳಿಯಲ್ಲಿಯೂ ಧರ್ಮಶಾಸ್ತ್ರವಿತ್ತು: ಯೆಹೂದ್ಯರು ದೇವರಿಂದ ಲಿಖಿತ ಧರ್ಮಶಾಸ್ತ್ರ ಪಡೆದಿದ್ದರೆ, ಅನ್ಯಜನರ ಬಳಿಯಲ್ಲಿ ಲಿಖಿತವಲ್ಲದ ಧರ್ಮಶಾಸ್ತ್ರವಿತ್ತು. “ಧರ್ಮಶಾಸ್ತ್ರದಿಂದ” [ಗ್ರೀಕ್ ಪ್ರತಿಯಲ್ಲಿರುವ ಅಕ್ಷರಶಃ ಪದ]-ಅಂದರೆ, ದೇವರಿಂದ ಬಂದ ಪ್ರಕಟಣೆಯಿಂದ-” ಪಾಪದ ಅರುಹು ಉಂಟಾಗುತ್ತದೆ” (3:20).

4. *Nomos* ನ ಅರ್ಥವನ್ನು ಇನ್ನಷ್ಟು ವಿಸ್ತರಿಸುವದಾದರೆ, ಅದು ಸಾಮಾನ್ಯ ಅರ್ಥದಲ್ಲಿ “ಕಾನೂನು” ಎಂದಾಗ ಬಹುದು-ದೇವರಿಂದ ಅಥವಾ ಮನುಷ್ಯರಿಂದ ನೇಮಿಸಲ್ಪಟ್ಟ, ಪ್ರೇರಿತ ಅಥವಾ ಪ್ರೇರಿತವಲ್ಲದ “ಕಾನೂನು ಬೇಡಿಕೆಗಳು” ಆಗಿರಬಲ್ಲದು. ಈ ಸಂದರ್ಭದಲ್ಲಿ, ಅದು ಒಂದು *ನಿರ್ದಿಷ್ಟವಾದ* “ಕಾನೂನಿನ ಬೇಡಿಕೆ” ಎಂಬರ್ಥವಾಗಬಹುದು. ಅದು ರೋಮಾ 7:2 ರಲ್ಲಿ ಬಹುಶಃ ಈ ಅರ್ಥದಲ್ಲಿ ತಿಳಿದುಕೊಳ್ಳತಕ್ಕದ್ದು: “ಗಂಡನು ಸತ್ತರೆ ಗಂಡನ ಹಂಗು (ಗಂಡನ ನ್ಯಾಯ ಪ್ರಮಾಣದಿಂದ ಆಕೆಯು ಬಿಡುಗಡೆಯಾಗಿದ್ದಾಳೆ) ಆಕೆಗೆ (ವಿವಾಹಿತ ಮಹಿಳೆ) ತಪ್ಪುವದು” (ಒತ್ತಿ ಹೇಳಿದ್ದು ನನ್ನದು).

5. ಸಾಮಾನ್ಯ ರೀತಿಯಲ್ಲಿ *nomos* ಉಪಯೋಗಿಸಲ್ಪಡುವಾಗ, ಅದು ಸಾಮಾನ್ಯವಾಗಿ ಒಂದು “ಕಾನೂನು ವ್ಯವಸ್ಥೆ” ಯನ್ನು ಸೂಚಿಸುತ್ತದೆ. ನಾವು ಧರ್ಮಶಾಸ್ತ್ರದಿಂದ ರಕ್ಷಿಸಲ್ಪಟ್ಟಿಲ್ಲವೆಂದು ಪೌಲನು ಹೇಳುವಾಗ ಆತನು ಅನೇಕ ವೇಳೆ ಮನಸ್ಸಿನಲ್ಲಿ ಈ ಅರ್ಥವನ್ನಿಟ್ಟುಕೊಂಡು ಹೇಳಿದನೆಂಬದಾಗಿ ನಾವು ಸೂಚಿಸಿದ್ದೇವೆ. ಅಂದರೆ, ನಾವು ಯಾವದೇ “ಕಾನೂನು (ನೇಮನಿಷ್ಠೆ) ವ್ಯವಸ್ಥೆ” ಯ ಆಧಾರದಲ್ಲಿ ರಕ್ಷಿಸಲ್ಪಟ್ಟಿಲ್ಲ. ಉದಾಹರಣೆಗೆ, ರೋಮಾ 3:20 ಅಕ್ಷರಶಃ ಹೀಗಿರುತ್ತದೆ, “ಯಾವಾನಾದರೂ ನೇಮನಿಷ್ಠೆಗಳನ್ನನುಸರಿಸಿ (ಒಂದು ಕಾನೂನು ವ್ಯವಸ್ಥೆ) ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.”

6. ರೋಮಾಪುರ ಪತ್ರಿಕೆಯಲ್ಲಿ ಅದು ಕಾಣಿಸಿಕೊಳ್ಳುವ ಬಹುಪಾಲು ಸಂದರ್ಭಗಳಲ್ಲಿ, *nomos* ಎಂಬ ಪದವು ಹಿಂದಿನ ಐದು ವ್ಯಾಖ್ಯಾನಗಳಲ್ಲೊಂದಕ್ಕೆ ಸರಿಹೊಂದುತ್ತದೆ. ಹೇಗೂ, ಕೆಲವೊಮ್ಮೆ, ಪೌಲನು ಈ ಪದವನ್ನು ದ್ವಿತಿಯ ಅರ್ಥದಲ್ಲಿ ಉಪಯೋಗಿಸಿದನು. ಆಂಗ್ಲದ “ಕಾನೂನು” ಎಂಬ ಪದದ ಹಾಗೆಯೇ ಗ್ರೀಕ್.ನ *nomos* ಕೂಡ “ಒಂದು ಸಾಮಾನ್ಯ ನಿಯಮ”[125] ಎಂಬ ಅರ್ಥವನ್ನು ಕೊಡಬಲ್ಲದು. ಒಂದು “ಕಾನೂನು” ಎಂಬುದು ಒಂದು “ನಿಯಮ,” “ತತ್ವ,” “ರೂಢಿ”[126] ಆಗಿರಬಲ್ಲದಾಗಿದೆ. ಬಹುಶಃ ರೋಮಾ 3:27 ರಲ್ಲಿ ಇದೇ ಅರ್ಥವಾಗಿರುತ್ತದೆ.

ಕೆಲವರು ವಾದಿಸುವದೇನೆಂದರೆ 3:27ರಲ್ಲಿ "ಧರ್ಮಶಾಸ್ತ್ರ" ಎನ್ನುವದು "ಕಾನೂನು ವ್ಯವಸ್ಥೆ" ಅಥವಾ ಕನಿಷ್ಠ "ವ್ಯವಸ್ಥೆ" ಎಂಬ ಅರ್ಥವಾಗಿರುತ್ತದೆ ಎಂಬದಾಗಿ. ಇವರಲ್ಲಿ ಕೆಲವರು "ನೇಮನಿಷ್ಠೆಯ ಧರ್ಮಶಾಸ್ತ್ರ" ವನ್ನು "ನಾವು ಕ್ರಿಯೆಗಳಿಂದ ನೀತಿವಂತರೆಂದು ನಿರ್ಣಯಿಸಲ್ಪಡುವಂಥ ವ್ಯವಸ್ಥೆಯಾಗಿದೆ" ಎಂದು ವ್ಯಾಖ್ಯಾನಿಸುತ್ತಾರೆ. "ನಂಬಿಕೆಯ ಧರ್ಮಶಾಸ್ತ್ರ" ವು "ನಾವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಡುವ ವ್ಯವಸ್ಥೆ" ಎಂದು ವ್ಯಾಖ್ಯಾನಿಸಲ್ಪಡುತ್ತದೆ. ಇವರಲ್ಲಿ ಸ್ವಲ್ಪ ಜನರು "ನೇಮನಿಷ್ಠೆಗಳ ಧರ್ಮಶಾಸ್ತ್ರ" ವನ್ನು ಹಳೇ ಒಡಂಬಡಿಕೆಗೂ "ನಂಬಿಕೆಯ ಧರ್ಮಶಾಸ್ತ್ರ" ವನ್ನು ಹೊಸ ಒಡಂಬಡಿಕೆಗೂ ಸಮಾನಗೊಳಿಸುತ್ತಾರೆ; ಆದರೆ ನಿಯಮದ ಪ್ರಕಾರ, ಅನುವಾದಕರು "ನಿಯಮ" ಅಥವಾ ಅದಕ್ಕೆ ಹೋಲುವ ಯಾವದಾದರೂ ಪದವನ್ನು ಉಪಯೋಗಿಸಲು ಹೆಚ್ಚು ಇಷ್ಟಪಡುತ್ತಾರೆ (ನೋಡಿರಿ NIV; RSV; NEB; AB). ಈ ಮುಂಚೆ ಹೇಳಲ್ಪಟ್ಟ ಹಾಗೆ, ನಾನು "ಎಂಬದರ ಆಧಾರದಲ್ಲಿ" ಎಂಬದನ್ನು ಇಷ್ಟಪಡುತ್ತೇನೆ.

7. "ನಿಯಮ" ಎಂಬ ಪದವು ಬಹುಶಃ ಪೌಲನು ಉಪಯೋಗಿಸುವ *nomos* ಎಂಬದರ ದ್ವಿತಿಯಾರ್ಥವನ್ನು ಆವರಿಸಿಕೊಳ್ಳುವಷ್ಟು ವಿಶಾಲವಾಗಿದೆ, ಆದರೆ ರೋಮಾ 7ರ ನಿರೀಕ್ಷೆಯಲ್ಲಿ ಸಣ್ಣ ವ್ಯತ್ಯಾಸವನ್ನು ಸೇರ್ಪಡೆಗೊಳಿಸಲು ಇಚ್ಚೆಸುತ್ತೇನೆ: "ಒಂದು ಸ್ಥಾಪಿಸಲ್ಪಟ್ಟ ಒಲವು." W. E. Vine ಗಮನಕ್ಕೆ ತಂದದ್ದೇನೆಂದರೆ *nomos* "ಒಂದು ಕ್ರಿಯೆಗೆ ನಡಿಸುವ ಶಕ್ತಿ ಅಥವಾ ಪ್ರಭಾವ" ಎಂದು ಸಹ ಅರ್ಥವಾಗಿರಬಲ್ಲದು. ಆತನು ರೋಮಾ 7:21, 23ನ್ನು ಉದಾಹರಣೆಯಾಗಿ ಕೊಡುತ್ತಾನೆ.[127] *Theological Dictionary of the New Testament*ವು *ಇಲ್ಲಿ* ರೋಮಾ 7ರ ಸನ್ನಿವೇಶಕ್ಕೆ ಅನುಗುಣವಾಗಿ *nomos* ಎಂಬದಕ್ಕೆ "ನಿಯಮ" ("ಒಂದು ನಿಯಮ") ಎಂಬ ವ್ಯಾಖ್ಯಾನ ನೀಡುತ್ತದೆ.[128] Bruce ಹೇಳಿದ್ದೇನೆಂದರೆ, "7:21 ರಲ್ಲಿ, ಪೌಲನು 'ಒಂದು ಧರ್ಮಪ್ರಮಾಣ'-ಅಂದರೆ, ಒಂದು ನಿಮಯ ಅಥವಾ ಆಚರಿಸಲ್ಪಡುವ ರೂಢಿಯನ್ನು ಕಂಡುಕೊಂಡನು."[129]

ಈ ಹಂತದಲ್ಲಿ, ಕೆಲವರು ಗೊಂದಲಕ್ಕೀಡಾಗುವರು: "'ಧರ್ಮಶಾಸ್ತ್ರ'ವು ಅಷ್ಟೊಂದು ಅರ್ಥಗಳನ್ನು ಹೊಂದಿರಬಲ್ಲದ್ದಾದರೆ, ನಿರ್ದಿಷ್ಟವಾದ ವಚನದಲ್ಲಿ ಅದು ಯಾವ ಅರ್ಥ ಸೂಚಿಸುತ್ತದೆಂಬದನ್ನು ನಾನು ಹೇಗೆ ತಿಳಿಯಬಲ್ಲೆನು?" ಇಲ್ಲಿ ಎರಡು ಮಾರ್ಗಸೂಚಿಗಳು ಸಹಾಯಕವಾಗಬಲ್ಲವು. ಮೊದಲನೆಯದಾಗಿ, ಒಂದು ವಚನದ ಅರ್ಥವು ಮೂಲಭೂತವಾಗಿ ಸನ್ನಿವೇಶದ ಅನುಗುಣವಾಗಿ ನಿರ್ಧರಿಸಲ್ಪಡುತ್ತದೆ. ಎರಡನೆಯದಾಗಿ, ದ್ವಿತಿಯ ಅರ್ಥಕ್ಕಿಂತಲೂ ಪ್ರಾಥಮಿಕ ಅರ್ಥಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡತಕ್ಕದ್ದು (ಉದಾ.: "ನಿಯಮ"). ನಾವು ಮುಂಚೆ ಹೇಳಿದ ಹಾಗೆ, *nomos* ಸಾಮಾನ್ಯ ಅರ್ಥದಲ್ಲಿ ಅನೇಕ ವೇಳೆ ನೇರವಾಗಿ ಅಥವಾ ಪರೋಕ್ಷವಾಗಿ Torah ಅಥವಾ ಹಳೇ ಒಡಂಬಡಿಕೆಯನ್ನು ಸೂಚಿಸುತ್ತದೆ-ಇತರ ಸಾಧ್ಯತೆಗಳನ್ನು ಸುಮ್ಮನೆ ಮನಸ್ಸಿನಲ್ಲಿಟ್ಟುಕೊಳ್ಳಿರಷ್ಟೆ.

## ಅನ್ವಯಿಸುವಿಕೆ

### ಆಕ್ಷೇಪಣೆಗಳು, ಆಕ್ಷೇಪಣೆಗಳು! (3:1-8)

ನಾವು ಈ ಅನ್ವಯಿಸುವಿಕೆಯನ್ನು "ದಯವಿಟ್ಟು, ನನ್ನನ್ನು ಅಪಾರ್ಥಮಾಡಿ ಕೊಳ್ಳಬೇಡ!" ಎಂದು ಕರೆಯಬಹುದು. ಪೌಲನಿಗೆ ತಾನು ಬೋಧಿಸಿದ ಶ್ರೇಷ್ಠ ರಕ್ಷಣೆಯ

ಕುರಿತು ಯೆಹೂದ್ಯರು ಪ್ರಶ್ನೆಗಳನ್ನು ಎಬ್ಬಿಸುವರೆಂಬದು ಬಹುಶಃ ಗೊತ್ತಿತ್ತು. ಆತನು ರೋಮಾಪುರ ಪತ್ರಿಕೆಯನ್ನು ಬರೆಯುತ್ತಿರುವ ಹಾಗೆ ಆ ಅನೇಕ ಪ್ರಶ್ನೆಗಳನ್ನು ಆತನು ಎದುರು ನೋಡುವದಕ್ಕೆ ಶಕ್ತನಾಗಿದ್ದನು. ನಾನು ಪೂರ್ಣಾವದಿ ಬೋಧನೆಯನ್ನು ಆರಂಭಿಸಿದ ವೇಳೆಯಲ್ಲಿ, ಕೆಲವು ಪ್ರಶ್ನೆಗಳನ್ನು ಮತ್ತು ವಾದಗಳನ್ನು ಮತ್ತೇ ಮತ್ತೇ ಕೇಳಿಸಿಕೊಳ್ಳುವದಕ್ಕೆ ಆಶ್ಚರ್ಯಪಟ್ಟೆನು. ನಾನು ನನ್ನೊಳಗೆ ಹೀಗಂದುಕೊಂಡೆನು, "ನಾನು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಒಂದು ಕಾರ್ಡಿನಲ್ಲಿ ಮುದ್ರಿಸಬೇಕು. ಆಗ, ಯಾರಾದರೂ ನನಗೆ ಆ ಪ್ರಶ್ನೆಗಳನ್ನು ಕೇಳಿದರೆ ಸುಮ್ಮನೆ ಆ ಕಾರ್ಡನ್ನು ಅವರಿಗೆ ಕೊಟ್ಟು ಬಿಡಬಹುದು. ಅದರಿಂದ ನಮ್ಮಿಬ್ಬರಿಗೂ ಸಮಯ ಉಳಿಯುತ್ತದೆ!" ಇದು ನನ್ನೊಳಗೆ ನಾನೇ ನೆನಸಿಕೊಂಡ ಹಾಸ್ಯವಾಗಿತ್ತು-ಆದರೆ ನೀವು ಬಹಳ ದೀರ್ಘಕಾಲದಿಂದ ಬೋಧನೆ ಅಥವಾ ಉಪದೇಶದ ಸೇವೆಯಲ್ಲಿದ್ದರೆ ನಾನೇನು ಹೇಳಲು ಬಂದೆನೆಂಬದು ನಿಮಗೆ ಅರ್ಥವಾಗುತ್ತದೆ.

ಅಷ್ಟು ಮಾತ್ರವಲ್ಲದೆ, ಅಪಾರ್ಥಮಾಡಿಕೊಳ್ಳಲ್ಪಡುವದು ಮತ್ತು ತಪ್ಪು ವದಂತಿಗೆ ಬಲಿಯಾಗುವದು ಹೇಗಿರುತ್ತದೆಂದು ಪೌಲನಿಗೆ ಅನುಭವವಿತ್ತು (ನೋಡಿರಿ 3:8). ನಾನು ಹೆಚ್ಚುಕಡಿಮೆ ಐವತ್ತು ವರ್ಷಗಳಿಂದ ಸುವಾರ್ತೆಯನ್ನು ತಿಳಿಯಪಡಿಸುವದಕ್ಕೆ-ಮೌಖಿಕ ಹಾಗೂ ಲಿಖಿತ ರೂಪದಲ್ಲಿ-ಪ್ರಯತ್ನಿಸುತ್ತಿದ್ದೇನೆ ಮತ್ತು ಕೆಲವು ಸಾರಿ ಇನ್ನೇನು ಹತಾಶೆಗೊಳ್ಳಬೇಕೆನ್ನುವ ಸ್ಥಿತಿಯನ್ನು ಅನುಭವಿಸಿರುತ್ತೇನೆ. ನಾನೇನು ಹೇಳಬಯಸುತ್ತೇನೋ ಅದನ್ನು ನಿಖರವಾಗಿ ತಿಳಿಸುವದು ಕಷ್ಟಕರವಾಗಿರುತ್ತದೆ, ಮತ್ತು ಪ್ರತಿಯೊಂದು ಪದಕ್ಕೂ ವಿವಿಧ ಅರ್ಥಗಳಿರಬಹುದಾಗಿದೆ. ಅಲ್ಲದೆ, ಜನರು ಅನೇಕ ಸಾರಿ ಎಚ್ಚರಿಕೆಯಿಂದ ಆಲಿಸುವದಿಲ್ಲ (ಅಥವಾ ಓದುವದಿಲ್ಲ), ಮತ್ತು ಸ್ವಲ್ಪ ಜನರಿಗೆ ಮಾತ್ರವೇ "ಛಾಯಾಚಿತ್ರದಂತೆ ಸ್ಫುಟವಾಗಿ ನೆನಪಿಟ್ಟುಕೊಳ್ಳುವ" ಸಾಮರ್ಥ್ಯವಿರುತ್ತದೆ. ನಾನು ಹೇಳಿದ ಮಾತುಗಳನ್ನು "ನೆನಪಿಟ್ಟುಕೊಂಡು" ಜನರು ಉಲ್ಲೇಖಿಸುವದನ್ನು ಆಲಿಸಿದ್ದೇನೆ, ಮತ್ತು ನಿಜವಾಗಿಯೂ ನಾನೇನು ಹೇಳಿದ್ದೆನೆಂಬುದಕ್ಕೂ ಅವರ ಮಾತುಗಳಿಗೂ ಅಲ್ಪಸ್ವಲ್ಪ ಹೋಲಿಕೆಯಿರುತ್ತಿತ್ತು. ಪೌಲನು ಸಹ ಅದೇ ರೀತಿಯ ಸಮಸ್ಯೆಯನ್ನು ಎದುರಿಸಿದ್ದನು.

## "ಮೇಲು (ಒಳ್ಳೇದು) ಬರುವಂತೆ ಕೇಡು ಮಾಡೋಣ" (3:8)

Oklahoma ರಾಜ್ಯಪಾಲನು ಒಮ್ಮೆ ರಾಜ್ಯದಲ್ಲಿ ಅತಿಯಾಗಿದ್ದ ಜೂಜಾಟವನ್ನು ಕಾನೂನುಬದ್ಧಗೊಳಿಸುವಂತೆ ಪ್ರಜೆಗಳಲ್ಲಿ ಮನವಿ ಮಾಡಿದ್ದನು, "ಇದರಿಂದ ಬರುವ ಆದಾಯವನ್ನು ಶಾಲೆಗಳಿಗೆ ಉಪಯೋಗಿಸಬಹುದು" ಎಂಬದು ಆತನ ವಾದವಾಗಿತ್ತು. ನಾನು ಆತನ ಮಾತುಗಳನ್ನು ಆಲಿಸುತ್ತಿದ್ದ ವೇಳೆ, ರೋಮಾ 3:8ರಲ್ಲಿನ ಮಾತುಗಳು ನನ್ನ ಮನಸ್ಸಿನಲ್ಲಿ ಪ್ರತಿಧ್ವನಿಸಿದವು: "ಮೇಲು ಬರುವಂತೆ ಕೇಡು ಮಾಡೋಣ."

"ಮೇಲು ಬರುವಂತೆ ಕೇಡು ಮಾಡೋಣ" ಎಂಬುದು ಅತಿ ಪ್ರಾಚೀನ ತತ್ವಜ್ಞಾನದ ಪ್ರತಿರೂಪವಾಗಿರುತ್ತದೆ: "ಏನು ಸಾಧಿಸುತ್ತೇವೆಂಬದು ಮುಖ್ಯ ಹೊರತು ಅದಕ್ಕಾಗಿ ಅನುಸರಿಸುವ ದಾರಿ ಮುಖ್ಯವಲ್ಲ." ಅನೇಕರು ನಂಬುವದೇನೆಂದರೆ ಅಂತ್ಯದಲ್ಲಿ ಫಲವು ಒಳ್ಳೇದಾಗಿದ್ದರೆ, ಆ ಗುರಿಯನ್ನು ಮುಟ್ಟಲು ಅನುಸರಿಸುವ ದಾರಿಯು ಪ್ರಾಮುಖ್ಯ ಅಲ್ಲವೇ ಅಲ್ಲ. ಒಬ್ಬ ಯುವಕನು ಪರೀಕ್ಷೆಗಳಲ್ಲಿ ನಕಲು ಮಾಡುವದನ್ನು ಸಮರ್ಥಿಸಿಕೊಳ್ಳಬಹುದು ಯಾಕೆಂದರೆ, "ದಾರಿಯು" (ಅಪ್ರಮಾಣಿಕತೆ) ಒಳ್ಳೇದಲ್ಲವಾದರೂ, "ಫಲವು" (ಪದವಿ

ಪುರಸ್ಕಾರ) ಅಪೇಕ್ಷಣೀಯವಾದದ್ದು. ಒಬ್ಬ ಉದ್ಯೋಗಿಯು ತನ್ನ ತಪ್ಪುಗಳಿಗಾಗಿ ಮತ್ತೊಬ್ಬರ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ಹೊರಿಸುವದಕ್ಕೆ ಪ್ರಯತ್ನಿಸಬಹುದು, ಯಾಕೆಂದರೆ "ದಾರಿಯು" (ಸುಳ್ಳು ಹೇಳುವದು) ತಪ್ಪಾಗಿದ್ದರೂ, "ಫಲಿತವು" (ತನ್ನ ಉದ್ಯೋಗವನ್ನು ಉಳಿಸಿಕೊಳ್ಳುವದು) ಆತನಿಗೆ ಪ್ರಾಮುಖ್ಯವಾಗಿರುತ್ತದೆ. ಈ ಭಕ್ತಿಹೀನ ತತ್ವಜ್ಞಾನದಿಂದ ಅದೆಷ್ಟು ದುಷ್ಕೃತ್ಯಗಳು ಮಾಡಲ್ಪಟ್ಟಿರುತ್ತವೆಂಬದು ಕರ್ತನಿಗೆ ಮಾತ್ರವೇ ಗೊತ್ತು.

**ಅಂತಿಮ ತೀರ್ಪು? (3:9)**

ನ್ಯಾಯವಿಚಾರಣೆಯು ಮುಕ್ತಾಯವಾಯಿತು. ನ್ಯಾಯಾಧಿಶರ ಬಳಿಯಲ್ಲಿ ಪ್ರತಿವಾದಿಯ ನಿಲುವು ಏನೆಂಬ ದಾಖಲೆಯಿದೆ. ಘನಗಾಂಭೀರ್ಯ ಸ್ವರದಲ್ಲಿ, ಆತನು ತೀರ್ಪನ್ನು ಪ್ರಕಟಿಸುತ್ತಾನೆ: "ಆರೋಪಿಸಲ್ಪಟ್ಟ ಪ್ರಕಾರ ಅಪರಾಧಿ!" ಅದೇ ಪಾಪದ ಮೇಲಿನ "ಅಂತಿಮ ತೀರ್ಪು" : "ಯೆಹೂದ್ಯರು ಮತ್ತು ಅನ್ಯಜನರು ಸಮಾನವಾಗಿ (ನಾವೂ ಸೇರಿದಂತೆ) ಎಲ್ಲರೂ ಪಾಪಕ್ಕೆ ಒಳ ಬಿದ್ದವರು" (3:9; NIV)! ನಾವೆಲ್ಲರೂ ಪಾಪಿಗಳು, ನಮ್ಮ ಪಾಪತನದಲ್ಲಿ ಕಳೆದು ಹೋಗಿದ್ದೇವೆ.

ಒಂದು ಶನಿವಾರದ ಮಧ್ಯಾಹ್ನದಂದು ಒಬ್ಬ ಮನುಷ್ಯನು ಪಾರ್ಕಿನಲ್ಲಿ ನಡೆದು ಹೋಗುತ್ತಿದ್ದನು, ಅವನು ಕೈಯಲ್ಲಿ ಚರ್ಮದ ಹೊದಿಕೆಯಿದ್ದ ಚಿಕ್ಕ ಹೊಸ ಒಡಂಬಡಿಕೆಯನ್ನು ಇಟ್ಟುಕೊಂಡಿದ್ದನು. ಒಂದು ಯುವಕರು ಗುಂಪು ಆತನ ಕೈಯಲ್ಲಿ ಕ್ಯಾಮರಾ ಇರುತ್ತದೆಂದು ಭಾವಿಸಿ ತಮ್ಮದೊಂದು ಫೋಟೋ ಹಿಡಿಯಬೇಕೆಂದು ಕೇಳಿದರು. ಆಗ ಆತನು "ನನ್ನ ಬಳಿಯಲ್ಲಿ ಮುಂಚೆಯೇ ನಿಮ್ಮ ಫೋಟೊ ಇದೆ" ಎಂದು ಹೇಳಿದನು. ಅವರು ಅದನ್ನು ಕೇಳಿ ನಾವು ಈ ಮುಂಚೆ ಎಂದೂ ಭೇಟಿಯೇ ಆಗಿಲ್ಲವಲ್ಲಾ, ಅದು ಹೇಗೆ ಸಾಧ್ಯ ಎಂದರು. ಆತನು ತನ್ನ ಹೊಸ ಒಡಂಬಡಿಕೆಯನ್ನು ಹೊರ ತೆಗೆದನು ಮತ್ತು ರೋಮಾ 3:9-18 ವಚನಗಳನ್ನು ಓದಿದನು.[130] ನಾವು ಇಷ್ಟಪಡುತ್ತೇವೋ ಇಲ್ಲವೋ, ಅದು ಕ್ರಿಸ್ತನಿಲ್ಲದ ನಮ್ಮ ಆತ್ಮಗಳ ಚಿತ್ರಣ ಸಹ ಆಗಿರುತ್ತದೆ.

ಈ ಅನ್ವಯಿಸುವಿಕೆ ಶಿರೋನಾಮೆಯಲ್ಲಿ, "ಅಂತಿಮ ತೀರ್ಪು" ಎಂಬದರ ಬಳಿಕ ಒಂದು ಪ್ರಶ್ನಾರ್ಥಕ ಚಿಹ್ನೆ ಇರುತ್ತದೆ. ನಾನು ಅದನ್ನು ಅಲ್ಲಿ ಸೇರಿಸಿದ ಉದ್ದೇಶವು ಪಾಪದ ವಿಷಯವಾದ "ಅಂತಿಮ ತೀರ್ಪು" ನಿಮ್ಮ ಜೀವನದ ವಿಷಯದಲ್ಲಿ ಒಂದು "*ಅಂತಿಮ ತೀರ್ಪು*" ಆಗಿರಬೇಕಾದ ಅಗತ್ಯವಿಲ್ಲ ಎಂಬದನ್ನು ಒತ್ತಿ ಹೇಳುವದಕ್ಕಾಗಿಯೇ. ರೋಮಾ 3:21ನೇ ವಚನವು "ಈಗಲಾದರೋ" ಎಂಬ ವಿರೋದಾತ್ಮಕ ಪ್ರತ್ಯಯದಿಂದ ಆರಂಭಗೊಳ್ಳುತ್ತದೆ. ಏನೋ ಬದಲಾವಣೆಯು ಸಂಭವಿಸಲಿಕ್ಕಿದೆ. ರೋಮಾಪುರ ಪುಸ್ತಕವು ನಾವು ರಕ್ಷಣೆಹೊಂದುವಂತಾಗಲು ದೇವರು ಮತ್ತು ಯೇಸು ನಮಗೋಸ್ಕರ ಏನು ಮಾಡಿದ್ದಾರೆಂಬದನ್ನು ಈಗ ತಿಳಿಸಲಿಕ್ಕಿದೆ. ಪೌಲನು ಈಗ "ಪಾಪದ ಸಮಸ್ಯೆಯಿಂದ ರಕ್ಷಕನ ಒದಗಿಸುವಿಕೆಯೆಡೆಗೆ"[131] ತನ್ನ ದೃಷ್ಟಿಯನ್ನು ಹರಿಸುವದಕ್ಕೆ ಸಿದ್ಧನಾಗಿದ್ದನು-ಆದ್ದರಿಂದ ಕತ್ತಲೆಯಿಂದ ಕಳವಳಗೊಳ್ಳದಿರಿ. ನಮ್ಮ ಅಭ್ಯಾಸದಲ್ಲಿ ಇನ್ನೇನು ಬೆಳಕು ಉದಯವಾಗಲಿದೆ!

## ಮೂರು ಚಿಕ್ಕ ಪದಗಳು (3:21-26)

1930 ರಲ್ಲಿ, Bert Kalmar ಮತ್ತು Harry Ruby ಜೊತೆಯಾಗಿ "ಮೂರು ಚಿಕ್ಕ ಪದಗಳು" ("Three Little Words")[132] ಎಂಬ ಬಿರುದಿನ ಹಾಡನ್ನು ಬರೆದರು. ಹಾಡು ಹೀಗೆ ಸಾಗುತ್ತದೆ,

ಮೂರು ಚಿಕ್ಕ ಪದಗಳು,
ಓ, ನಾನೇನು ಕೊಡುವೆನು,
ಆ ಅದ್ಭುತವಾದ ಮಾತುಗಳಿಗೆ.
ಆ ಮೂರು ಪದಗಳನ್ನು ಆಲಿಸಲು,
ಅದಕ್ಕಾಗಿಯೇ ಮಾತ್ರ ನಾನು ಜೀವಿಸುವೆನು,
ನನ್ನ ಉಳಿದ ಜೀವಿತವೆಲ್ಲಾ.

ಆ "ಮೂರು ಚಿಕ್ಕ ಪದಗಳು" ಯಾವವೆಂದರೆ "ನಾನು ನಿನ್ನನ್ನು ಪ್ರೀತಿಸುತ್ತೇನೆ." ರೊಮಾ 3:21-26 ರಲ್ಲಿ ಈ "ಮೂರು ಚಿಕ್ಕ ಪದಗಳ" ರೂಪವನ್ನು ಕಾಣುತ್ತೇವೆ, ಅದು ಹೇಳುವದೇನೆಂದರೆ *ದೇವರು* ನಿನ್ನನ್ನು ಪ್ರೀತಿಸುತ್ತಾನೆ.

"ಮೂರು ಚಿಕ್ಕ ಪದಗಳು" ಎಂಬುದು ಕಾನೂನಿನ ನ್ಯಾಯಾಲಯ, ಗುಲಾಮರ-ಸಂತೆ, ಮತ್ತು ಯಜ್ಞವೇದಿಯಿಂದ ತೆಗೆದುಕೊಂಡ ಸಾದೃಶ್ಯಗಳಾಗಿವೆ. ಅವುಗಳಲ್ಲಿ ಎರಡು ಪದಗಳು ಬಹಳ ಕಾಲದಿಂದ ಕ್ರೈಸ್ತ ಪದಗಳ ಒಂದು ಭಾಗವಾಗಿದ್ದು ಅವುಗಳನ್ನು ನಾವು ಸಾಧೃಶ್ಯವೆಂದು ಭಾವಿಸುವದಿಲ್ಲ: "ನೀತಿವಂತರೆಂಬ ನಿರ್ಣಯ" ಮತ್ತು "ವಿಮೋಚನೆ." ಮೂರನೆಯ ಪದವು ಅಷ್ಟೊಂದು ಪರಿಚಿತವಾಗಿರುವದಿಲ್ಲ: "ಪ್ರಾಯಶ್ಚಿತ್ತ." ಇಲ್ಲ, ಪ್ರಾಮಾಣಿಕವಾಗಿ ಹೇಳೋಣ; ಆ ಮೂರನೆಯ ಪದವು ನಮಗೆ ಸ್ವಲ್ಪವೂ ಪರಿಚಿತವೇ ಇರುವದಿಲ್ಲ. ಹಾಗಿದ್ದರೂ, ಅದು ಅತ್ಯಂಥ ಮಹತ್ವದ್ದಾಗಿದೆ.

## "ನಾನು ಈ ಪದಗಳನ್ನು ಅರ್ಥಮಾಡಿಕೊಳ್ಳುವದು ಅಗತ್ಯವೋ?" (3:21-26)

ರೋಮಾ 3:21-26 ರಲ್ಲಿ ಮಾನವರನ್ನು ರಕ್ಷಿಸುವದಕ್ಕಾಗಿ ದೇವರು ಮಾಡಿದ ಸಂಕಲ್ಪದೊಳಗೆ ಬಹುಮುಖ್ಯವಾಗಿರುವ ಮೂರು ಪದಗಳು ಇರುತ್ತವೆ: "ನೀತಿವಂತರೆಂಬ ನಿರ್ಣಯ," "ವಿಮೋಚನೆ," ಮತ್ತು "ಪ್ರಾಯಶ್ಚಿತ್ತ." ಇವುಗಳು ಕಠಿಣವಾದ ದೈವಶಾಸ್ತ್ರೀಕ ಪರಿಕಲ್ಪನೆಗಳಾಗಿವೆ, ವಿಶೇಷವಾಗಿ ಪ್ರಾಯಶ್ಚಿತ್ತಕ್ಕೆ ಸಂಬಂಧಿಸಿದ ಪದಗಳು. ರಕ್ಷಣೆ ಹೊಂದಬೇಕಾದರೆ ನಾವು ಅಂಥ ವಿಷಯಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವದು ನಮಗೆ ಅಗತ್ಯವೋ? ನನ್ನ ಮುಂದಿನ ಕೋಣೆಯಲ್ಲಿ ಪ್ರವೇಶಿಸಲು ಬೀಗವು ನಿಖರವಾಗಿ ಹೇಗೆ ಕೆಲಸಮಾಡುತ್ತದೆಂಬದನ್ನು ತಿಳಿದುಕೊಳ್ಳುವದು ನನಗೆ ಅವಶ್ಯವಿಲ್ಲವಷ್ಟೆ. ಬೀಗವು ಹೇಗೆ ಕೆಲಸಮಾಡುತ್ತದೆಂದು ನನಗೆ ಅರ್ಥವಾಗಿಲ್ಲ ಆದರೆ ನನಗೆ ಹೇಗೆ ಸರಿಯಾದ ಬೀಗದ ಕೈಯನ್ನು ಅದರಲ್ಲಿ ಹಾಕಿ ಬಾಗಲನ್ನು ತೆರೆಯಬೇಕೆಂಬದು ಗೊತ್ತಿದೆ. ನಮ್ಮ ರಕ್ಷಣೆಗೆ "ಬೀಗದ ಕೈ" ಯಾವದೆಂದರೆ ಯೇಸು ನಿಮ್ಮ ಪಾಪಗಳಿಗಾಗಿ ಸತ್ತನು ಎಂಬದನ್ನು ಅರ್ಥಮಾಡಿಕೊಳ್ಳುವದು ಮತ್ತು ಆತನಲ್ಲಿ ಹಾಗೂ ಆತನ ಯಜ್ಞದಲ್ಲಿ ವಿಶ್ವಾಸವಿಡುವದು. ನೀವು ಇದುವರೆಗೂ ಆತನಿಗೆ ನಿಮ್ಮ ಜೀವಿತವನ್ನು ಸಮರ್ಪಿಸಿಲ್ಲವಾದರೆ, ನೀವು ವಿಶ್ವಾಸವಿಟ್ಟು ಕರ್ತನಿಗೆ ಒಪ್ಪಿಸಿಕೊಳ್ಳುವಿರೆಂದು ನಾನು ಪ್ರಾರ್ಥಿಸುತ್ತೇನೆ (ಅಪೊಸ್ತಲರ

ಕೃತ್ಯಗಳು 2:36-38, 41, 47). ಸ್ವಸ್ಥಬುದ್ಧಿಯುಳ್ಳ ಯಾವ ಮನುಷ್ಯನಾದರೂ ಈ ರಕ್ಷಣೆಯ ಮಹಾ ವರವನ್ನು ತಿರಸ್ಕರಿಸುವದನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವೋ?

**ಯೇಸು ಏಕೆ ಒಂದು ಶಿಲುಬೆಯ ಮೇಲೆ ಸಾಯಬೇಕಾಯಿತು? (3:21-26)**

ಯೇಸುವಿನ ಮರಣದ ಉದ್ದೇಶವು ಒಂದು ಮಹತ್ವದ ಹಾಗೂ ವ್ಯಾಪಕವಾದ ವಿಷಯವಾಗಿರುತ್ತದೆ. ಈ ವಿಷಯದ ಮೇಲೆ ನೂರು ಗ್ರಂಥಗಳನ್ನು ಬರೆದರೂ ಸಾಕಾಗುವದಿಲ್ಲ; ಕೇಳಲ್ಪಡಬಹುದಾದ ಪ್ರತಿಯೊಂದು ಪ್ರಶ್ನೆಗೆ ಸಾವಿರ ಪುಸ್ತಕಗಳನ್ನು ಬರೆದರೂ ಉತ್ತರಿಸುವದಕ್ಕಾಗದೆ ಇರಬಹುದು. ಹೇಗಿದ್ದರೂ, ನಾವು ಇಲ್ಲಿ ಒಂದು ಕ್ಲುಪ್ತ ವಿವರಣೆಯನ್ನು ಕೊಡುತ್ತೇವೆ.[133]

"ಎಲ್ಲರೂ ಪಾಪ ಮಾಡಿದ್ದಾರೆ" (3:23), ಮತ್ತು "ಪಾಪವು ಕೊಡುವ ಸಂಬಳ ಮರಣ" (6:23). ಪಾಪಿಗಳು ಈ ಜೀವಿತದಲ್ಲಿ ಆತ್ಮೀಕ ಮರಣವನ್ನು ಅನುಭವಿಸುತ್ತಾರೆ-ಅಂದರೆ, ದೇವರಿಂದ ಬೇರ್ಪಡುವಿಕೆ (ಎಫೆಸ 2:1, 12). ಅಷ್ಟುಮಾತ್ರವಲ್ಲದೆ, ಅವರು "ಎರಡನೆಯ ಮರಣ" ವನ್ನು ಎದುರಿಸುತ್ತಾರೆ, ಬರಲಿರುವ ಜೀವಿತದಲ್ಲಿ ನಿತ್ಯವಾಗಿ ದೇವರಿಂದ ಬೇರ್ಪಡುತ್ತಾರೆ (ಪ್ರಕಟನೆ 20:14; 21:8).

ಪಾಪವು ಪರಿಶುದ್ಧ ದೇವರಿಗೆ ಒಂದು ಅವಮಾನವಾಗಿರುತ್ತದೆ (3:23; ನೋಡಿರಿ ಯೆಶಾಯ 5:16; ಇಬ್ರಿಯ 10:29). ನಾವು ಮಾಡಿದ ಒಂದೇ ಒಂದು ಪಾಪ ಅಪರಾಧವನ್ನು ಸಹ ಒಳ್ಳೇ ಕ್ರಿಯೆಗಳು ಅಳಿಸಿಹಾಕಲಾಗುವದಿಲ್ಲ; ನಾವು ನಮ್ಮ ಕ್ರಿಯೆಗಳಿಂದ ರಕ್ಷಿಸಲ್ಪಡಲು ಸಾಧ್ಯವಿಲ್ಲ (ನೋಡಿರಿ ಎಫೆಸ 2:8, 9). ನಾವು ಸಾಧ್ಯವಾದಷ್ಟು ಪ್ರಯತ್ನಿಸಿದಾಗ್ಯೂ, ಅದು ಅಷ್ಟೊಂದು ಒಳ್ಳೇದಾಗಿರಲಾರದು (3:12; ಯೆಶಾಯ 64:6). ನೀತಿಯ ದೇವರಾಗಿ (ಯೆಶಾಯ 30:18), ಕರ್ತನು ಪಾಪವನ್ನು ದಂಡಿಸದೆ ಬಿಡುವದಕ್ಕೆ ಆಗದು (1:18). ಎಲ್ಲರೂ ಪಾಪದ ಅಪರಾಧವನ್ನು ನಿವಾರಿಸಿಕೊಳ್ಳಲು ಸಾಮರ್ಥ್ಯವಿಲ್ಲದ ಪಾಪಿಗಳಾಗಿದ್ದರು (ಮತ್ತು ಆಗಿದ್ದಾರೆ) ಆದ್ದರಿಂದ, ಮಾನವರ ದುರವಸ್ಥೆಯು ನಿರೀಕ್ಷೆಯಿಲ್ಲದ್ದಾಗಿತ್ತು.

ಕರ್ತನಿಗೆ ಸ್ತೋತ್ರ, ಆತನು ನೀತಿಯ ದೇವರು ಮಾತ್ರವಲ್ಲದೆ, *ಪ್ರೀತಿ* ಸ್ವರೂಪನಾದ ದೇವರು ಸಹ ಆಗಿದ್ದಾನೆ (1 ಯೋಹಾನ 4:8)! ಪ್ರೀತಿ ಸ್ವರೂಪಿ ದೇವರಾಗಿ, ಒಬ್ಬನೂ ನಾಶವಾಗಬಾರದೆಂಬದು ಆತನ ಇಚ್ಛೆಯಾಗಿತ್ತು (ಮತ್ತು ಆಗಿರುತ್ತದೆ) (2 ಪೇತ್ರ 3:9). ದೇವರ ಈ ಗುಣ ಸ್ವಭಾವಗಳು ಒಂದು ಗೊಂದಲವನ್ನು ಸೃಷ್ಟಿಸಿತ್ತು. ಆತನು *ನೀತಿವಂತ* ಆಗಿದ್ದು ಪಾಪವನ್ನು ದಂಡಿಸುತ್ತಾನೆ ಮತ್ತು ಅದೇ ವೇಳೆಯಲ್ಲಿ ಹೇಗೆ ಪಾಪಿಗಳನ್ನು ನೀತಿವಂತರೆಂದು ನಿರ್ಣಯಿಸುವವನೂ ಆಗಿರುವದಕ್ಕೆ ಸಾಧ್ಯ (ನೋಡಿರಿ 3:26)? ಈ ಗೊಂದಲಕ್ಕೆ ದೇವರ ಉತ್ತರವೇನಾಗಿತ್ತೆಂದರೆ, "ನಾನೇ ಪ್ರಾಯಶ್ಚಿತ್ತ ಮಾಡುತ್ತೇನೆ; ಮಾನವರ ಪಾಪದ ದಂಡನೆಯನ್ನು ಅನುಭವಿಸುವಂತೆ ನನ್ನ ಮಗನನ್ನು ಕಳುಹಿಸಿ ಕೊಡುತ್ತೇನೆ" (ನೋಡಿರಿ ಯೋಹಾನ 3:16). ನಾವು 1 ಯೋಹಾನ 4:10 ರಲ್ಲಿ ಓದುವದೇನೆಂದರೆ, "ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿ ಕೊಟ್ಟನು." "ಪಾಪನಿವಾರಣಾರ್ಥ ಅಥವಾ ಪ್ರಾಯಶ್ಚಿತ್ತ" ಎಂಬ ಪದದ ಅರ್ಥವು "ದೇವರ ನೀತಿಯನ್ನು ಶಾಂತಗೊಳಿಸುವಂತದು, ಶಮನಗೊಳಿ ಸುವಂತದು ಅಥವಾ ಸಂತೃಪ್ತಿಪಡಿಸುವಂಥದು" ಎಂದಾಗಿರುತ್ತದೆ.

ಪ್ರಾಯಶ್ಚಿತ್ತಕ್ಕಾಗಿ ಬಾಧೆಪಡುವದು ಯಾವ ರೂಪವನ್ನು ತೆಗೆದುಕೊಳ್ಳುತ್ತದೆ?

ಆದಿಕಾಂಡಯಲ್ಲಿಯೇ ದೇವರು ಮಾನವರ ವಿಷಯವಾಗಿ ನಡೆದುಕೊಳ್ಳುವ ರೀತಿಯನ್ನು ನೋಡುವದಾದರೆ, *ಯಜ್ಞದ* ನಿಯಮ-ಒಂದು ಪ್ರಾಣದ ಪರವಾಗಿ ಮತ್ತೊಂದು ಪ್ರಾಣವು ಕೊಡಲ್ಪಡುವದು-ಸ್ಥಾಪಿಸಲ್ಪಟ್ಟಿತು (ಆದಿಕಾಂಡ 4:4; 8:20; 31:54). ಒಂದು ಸಿದ್ಧಸೂತ್ರವು ಸ್ಥಾಪಿಸಲ್ಪಟ್ಟಿತು: "ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22). ವರ್ಷಗಳು ಗತಿಸಿದಂತೆ, ನೂರಾರು, ಸಾವಿರಾರು ಪ್ರಾಣಿಗಳನ್ನು ದೇವರ ನಿಯಮಗಳ ಪ್ರಕಾರ ಯಜ್ಞಮಾಡಲಾಯಿತು. ಸಮಸ್ಯೆ ಏನಾಗಿತ್ತೆಂದರೆ ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿತ್ತು (ಇಬ್ರಿಯ 10:4). ಒಂದು ಯಜ್ಞಕ್ಕೆ ಮಾತ್ರವೇ ಅದು ಸಾಧ್ಯವಿತ್ತು: ಅದು ದೇವರ ದೋಷರಹಿತ ಕುಮಾರನು (ನೋಡಿರಿ 1 ಪೇತ್ರ 1:18, 19). ಆತನ ರಕ್ತವೊಂದೇ ನಮ್ಮನ್ನು "ದೇವರ ಕೋಪದಿಂದ" ತಪ್ಪಿಸಿ ಕಾಪಾಡಬಲ್ಲದ್ದಾಗಿತ್ತು (5:9). "ಪಾಪಗಳ ಕ್ಷಮಾಪಣೆಯನ್ನು" ಸಾಧ್ಯಗೊಳಿಸುವದಕ್ಕೆ ಕ್ರಿಸ್ತನ ರಕ್ತವು "ಸುರಿಸಲ್ಪಡುವದು" ಅಗತ್ಯವಾಗಿತ್ತು (ಮತ್ತಾಯ 26:28).

ಯೇಸು ರಕ್ತವನ್ನು ಸುರಿಸುವ ಯಜ್ಞವು ಯಾವ ರೂಪದಲ್ಲಿ ನಡೆಯತಕ್ಕದ್ದು? ಸ್ಪಷ್ಟವಾಗಿರುವ ಪ್ರಕಾರ, ದೇವರ ನಿತ್ಯಸಂಕಲ್ಪದಲ್ಲಿ (ಎಫೆಸ 3:11) ಶಿಲುಬೆಯ ಮೂಲಕವಾದ ಮರಣವು ಪೂರ್ವಸಂಕಲ್ಪಗೊಳಿಸಲ್ಪಟ್ಟಿತ್ತು. ಕೀರ್ತನೆಗಾರನು ಬಾಧೆಗೊಳಗಾಗುವ ಸೇವಕನ ಕೈಗಳು ಮತ್ತು ಕಾಲುಗಳು "ತಿವಿಯಲ್ಪಡುವವು" ಎಂದು ಹೇಳಿದನು (ಕೀರ್ತನೆ 22:16). ಸ್ವತಃ ಕ್ರಿಸ್ತನು ತಾನು ಶಿಲುಬೆಗೆ ಹಾಕಲ್ಪಡುವೆನು ಎಂಬದನ್ನು ಮುಂದಾಗಿಯೇ ತಿಳಿಸಿದ್ದನು (ಮತ್ತಾಯ 20:17-19; ಲೂಕ 24:6-8)-ಅದರಲ್ಲಿ ಆತನ ಕೈ ಮತ್ತು ಕಾಲುಗಳಿಗೆ ಮೊಳೆಗಳನ್ನು ಹೊಡೆಯುವದು ಸೇರಿತ್ತು. ಯೇಸು ರೋಮಾಯರ ಶಿಲುಬೆಯ ಮೇಲೆ ಸತ್ತಾಗ, ಚುಚ್ಚಲ್ಪಟ್ಟ ಆತನ ಕೈಗಳು ಮತ್ತು ಕಾಲುಗಳಿಂದ ರಕ್ತವು ಸುರಿಸಲ್ಪಟ್ಟಿತು, ಅಲ್ಲದೆ ಮುಳ್ಳಿನಿಂದ ಚುಚ್ಚಿದ್ದ ಹಣೆ ಹಾಗೂ ಗಾಯಗೊಂಡ ಬೆನ್ನಿನೊಳಗಿಂದ ಸಹ ರಕ್ತವು ಸುರಿಯುತ್ತಿತ್ತು. ಆತನ ಮರಣದ ಬಳಿಕ, ಆತನ ಪಕ್ಕೆಯಿಂದ ರಕ್ತವು ಬಂದಿತು (ಯೋಹಾನ 19:34, 37; ನೋಡಿರಿ ಜೆಕರ್ಯ 12:10). ರೋಮಾ 5:9, 10ರ ಪ್ರಕಾರ, ನಾವು ರಕ್ತದ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ, ದೇವರ ಸಂಗಡ ಸಮಾಧಾನಪಡಿಸಲ್ಪಟ್ಟಿದ್ದೇವೆ ಮತ್ತು ದೇವರ ಕೋಪದಿಂದ ರಕ್ಷಿಸಲ್ಪಟ್ಟಿದ್ದೇವೆ.

ಯೇಸುವಿನ ಮರಣವು ನಿಖರವಾಗಿ ಹೇಗೆ ನಮ್ಮ ರಕ್ಷಣೆಯನ್ನು ಸಾಧ್ಯವಾಗಿಸುತ್ತದೆಂಬದನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವೋ? ಇಲ್ಲ, ಆದರೆ ನಾವು ಇದನ್ನಂತೂ ಅರ್ಥಮಾಡಿಕೊಳ್ಳಬಲ್ಲೆವು: ಆತನ ಮರಣವು ದೇವರ ನೀತಿಯನ್ನು ಸಂತೃಪ್ತಿಗೊಳಿಸಿದ್ದಂತೂ ನಿಜ (3:25; ಇಬ್ರಿಯ 2:17; 1 ಯೋಹಾನ 2:2). ಆದುದರಿಂದ, ಆತನ ಪ್ರೀತಿಗೆ ಸ್ಪಂದಿಸುವದಕ್ಕೆ ಯಾರೇ ಸಿದ್ಧರಿದ್ದರೂ (ಯೋಹಾನ 14:15; 1 ಯೋಹಾನ 4:19) ಮತ್ತು ರಕ್ಷಣೆಯ ಕುರಿತಾದ ಆತನ ನಿಯಮಗಳನ್ನು ಅಂಗೀಕರಿಸಿಕೊಳ್ಳಲು ಸಿದ್ದರಿದ್ದರೂ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:37, 38) ಅವರು ರಕ್ಷಣೆ ಹೊಂದಬಹುದಾಗಿದೆ! ದೇವರು ನಮಗಾಗಿ ಮಾಡಿರುವ ಕಾರ್ಯವನ್ನು ನಾವು ಪೂರ್ಣವಾಗಿ ಅರ್ಥಮಾಡಿಕೊಳ್ಳುವದಕ್ಕೆ ಸಾಧ್ಯವಿಲ್ಲ, ಆದರೆ ನಾವು ಅದಕ್ಕಾಗಿ ಆತನನ್ನು ಸ್ತುತಿಸುತ್ತೇವೆ. "ಈ ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ!" (2 ಕೊರಿಂಥ 9:15).

## “ಈಗಲಾದರೋ . . .” (3:21)

ರೋಮಾ 3:21 ಆರಂಭಗೊಳ್ಳುವ ಮಾತುಗಳನ್ನು ಒಮ್ಮೆ ಗಮನಿಸಿರಿ: “ಈಗಲಾದರೋ. . . . “ Lloyd-Jones ಹೇಳಿದ್ದೇನೆಂದರೆ, “ಇಡೀ ಬೈಬಲಿನಲ್ಲಿಯೇ ಆ ‘ಈಗಲಾದರೋ’ ಎಂಬ ಮಾತಿಗಿಂತಲೂ ಹೆಚ್ಚು ಅದ್ಭುತವಾದ ಮಾತು ಮತ್ತೊಂದಿರುವದಿಲ್ಲ.”[134] ಹೊಸ ಒಡಂಬಡಿಕೆಯ ಲೇಖಕರು ಈ ಒಂದು ಪದವನ್ನು ಕ್ರಿಸ್ತನಿಂದ ಹೊರಗಿರುವವರ ಸ್ಥಿತಿ ಮತ್ತು ಕ್ರಿಸ್ತನಲ್ಲಿರುವವರ ಸ್ಥಿತಿಯ ವ್ಯತ್ಯಾಸವನ್ನು ತೋರಿಸುವದಕ್ಕೆ ಉಪಯೋಗಿಸಿದರು.[135] ಉದಾಹರಣೆಗೆ, ಎಫೆಸ 2ನೇ ಅಧ್ಯಾಯದಲ್ಲಿ ನಾವು ಓದುವದೇನೆಂದರೆ,

> . . . ನೀವು *ಪೂರ್ವಕಾಲದಲ್ಲಿ* ಕ್ರಿಸ್ತನನ್ನು ಸೇರದವರಾಗಿದ್ದು ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ (ಅಬ್ರಹಾಮನಿಗೆ ಉಂಟಾದ) ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ದೇವರನ್ನರಿಯದವರೂ ಆಗಿದ್ದಿರೆಂದು ಜ್ಞಾಪಕಮಾಡಿಕೊಳ್ಳಿರಿ. *ಈಗಲಾದರೋ* ಮೊದಲು ದೂರವಾಗಿದ್ದ ನೀವು ಕ್ರಿಸ್ತಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ (3:12, 13; ಒತ್ತಿ ಹೇಳಿದ್ದು ನನ್ನದು).

ನಿಮ್ಮಲ್ಲಿ ಅನೇಕರು “ಈಗಲಾದರೋ” ಎಂಬ ಅನುಭವಗಳನ್ನು ಹೊಂದಿರುತ್ತಿರಿ.[136] ದೇವರ ಕೃಪೆಯಿಂದ, ಯೇಸುವಿನ ರಕ್ತದ ಮೂಲಕವಾಗಿ ನೀವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೀರಿ. ಆತ್ಮೀಕವಾಗಿ, ನೀವು ದುರಂತದಿಂದ ವಿಜಯೋತ್ಸಾಹಕ್ಕೆ ಬಂದಿರುವಿರಿ. ನಿಮ್ಮಲ್ಲಿ ಕೆಲವರು ಇನ್ನೂ “ಪೂರ್ವಕಾಲದಲ್ಲಿ” ಎಂಬ ಸ್ಥಿತಿಯಲ್ಲಿರುವಿರಿ. ಬಹುಶಃ ನೀವು ಯೇಸುವಿನಲ್ಲಿ ನಂಬಿಕೆ ಮತ್ತು ವಿಶ್ವಾಸ ಹೊಂದಿಲ್ಲ ಅಥವಾ ನೀವು ಪ್ರೀತಿಯಿಂದ ಆತನ ಚಿತ್ತಕ್ಕೆ ನಿಮ್ಮನ್ನು ಅರ್ಪಿಸಿಕೊಳ್ಳುವ ಮೂಲಕ ನಂಬಿಕೆಯನ್ನು ವ್ಯಕ್ತಪಡಿಸಿಲ್ಲವೆಂದು ತೋರುತ್ತದೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; ರೋಮಾ 6:3, 4). ನಿಮ್ಮ ಆತ್ಮೀಕ ಅಗತ್ಯತೆ ಏನೇ ಇರಲಿ, ನೀವು ತಕ್ಷಣವೇ ದೇವರ ಪ್ರೀತಿ ಮತ್ತು ಕೃಪೆಗೆ ಸ್ಪಂದಿಸಬೇಕೆಂದು ಪ್ರಾರ್ಥಿಸುತ್ತೇನೆ. *ಇಂದು*, “ಪೂರ್ವಕಾಲದಲ್ಲಿ” ಎಂಬದರಿಂದ “ಈಗಲಾದರೋ” ಎಂಬಲ್ಲಿಗೆ ಚಲಿಸಬಹುದು!

## ಎಲ್ಲರೂ ಪಾಪ ಮಾಡಿದ್ದಾರೆ (3:23)

ನಮ್ಮ ಪಾಪಸ್ಥಿತಿ ಬಗ್ಗೆ ಎರಡು ದೃಷ್ಟಾಂತಗಳನ್ನು ಉಪಯೋಗಿಸಬಹುದು, ಒಂದು ವೇಗದ ಮೀತಿ ನಿಯಮಗಳಿಗೆ ವಿಧೇಯರಾಗುವದು ಮತ್ತು ಕನ್ನಡಿಯಲ್ಲಿ ನೋಡಿಕೊಳ್ಳುವದು. ನಾನು ಕಾರನ್ನು ಚಲಾಯಿಸುವದಕ್ಕೆ ನನ್ನ ಪರವಾನಿಗೆಯನ್ನು ಹೊಂದಿಕೊಂಡ ದಿನದಿಂದಲೂ, ವೇಗಮೀತಿಯ ನಿಯಮಗಳಿಗೆ ವಿಧೇಯನಾಗಿರುವದಕ್ಕೆ ಪ್ರಯತ್ನಿಸಿದ್ದೇನೆ; ಹೀಗಿದ್ದರೂ, ಐವತ್ತು ವರ್ಷಗಳ ಚಾಲನೆಯಲ್ಲಿ ನಾನು ಮೂರು ಸಾರಿ ದಂಡವನ್ನು ಕಟ್ಟಿದ್ದೇನೆ. ಅದೇ ರೀತಿ, ನಾನು ನನ್ನ ಮುಖವನ್ನು ಸ್ವಚ್ಛವಾಗಿಟ್ಟು ಕೊಳ್ಳಲು ಪ್ರಯತ್ನಿಸುತ್ತೇನೆ; ಆದರೆ ಆಗಾಗ, ನಾನು ಕನ್ನಡಿಯಲ್ಲಿ ನೋಡುವಾಗ ನನ್ನ ಮುಖದಲ್ಲಿ ಸ್ವಲ್ಪ ಹೊಲಸು ಇರುವದನ್ನು ಕಂಡುಕೊಳ್ಳುತ್ತೇನೆ. ನಾವು ದೇವರ ವಿಧಿಗಳಿಗೆ ವಿಧೇಯರಾಗುವದಕ್ಕೆ ಸಮರ್ಪಿಸಿಕೊಂಡಿದ್ದರೂ, ನಾವು ಯಾವಾಗಲೂ ಕೊರತೆಯಲ್ಲಿ

ರುತ್ತೇವೆ. ಕೆಲವರು ಸ್ವಲ್ಪ ಕೊರತೆಯಾಗಿ ಕಾಣಬಹುದು, ಮತ್ತು ಇನ್ನು ಕೆಲವರು ಹೆಚ್ಚಾಗಿ ಕೊರತೆಯಾಗಿ ಕಾಣಬಹುದು-ಆದರೆ ನಾವೆಲ್ಲರೂ ಕಡಿಮೆಯಾಗಿ ಕಾಣಿಸಿಕೊಳ್ಳುತ್ತೇವೆ. ನಾವೆಲ್ಲರೂ ನಿಯಮ-ಮೀರುವವರೇ. ಒಂದು ಹಳೇ ಹಾಡು ಹೇಳುವ ಹಾಗೇ, "ಧರ್ಮಶಾಸ್ತ್ರದ ಬೇಡಿಕೆಗಳನ್ನು ನನ್ನ ಕೈಗಳ ಪ್ರಯಾಸವು ನೇರವೇರಿಸಲಾರದು."[137]

## "ಇದು ನನ್ನನ್ನು ಸೂಚಿಸುತ್ತದೋ?" (3:23)

3:23 ರಲ್ಲಿರುವ ಅತ್ಯಂಥ ಮಹತ್ವದ ಮಾತೆಂದರೆ "ಎಲ್ಲರೂ" : "*ಎಲ್ಲರೂ* ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ . . ." (ಒತ್ತಿ ಹೇಳಿದ್ದು ನನ್ನದು). ಬಹುಶಃ, ಒಬ್ಬನು, "ಖಂಡಿತ, ಪೌಲನು ನನ್ನನ್ನು ಉದ್ದೇಶಿಸಿ ಹೇಳುವದಿಲ್ಲ!" ಎಂದು ಹೇಳಿಕೊಳ್ಳಬಹುದು. "ಎಲ್ಲರೂ" ಎಂಬದರಲ್ಲಿ ಪ್ರತಿಯೊಬ್ಬ ಪುರುಷ, ಸ್ತ್ರೀ, ಹುಡುಗ ಮತ್ತು ಹುಡುಗಿಯರು ಸೇರಿದ್ದು ಅವರೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಂತಿರುತ್ತಾರೆ. ಇಲ್ಲಿ ಬರೆದಿರುವದೇನೆಂದು ನೀವು ಓದುವದಾದರೆ, ಅದರಲ್ಲಿ *ನೀವು* ಸಹ ಸೇರಿದ್ದೀರಿ.

"ಪಾಪ" ಎಂಬದಕ್ಕೆ ಉಪಯೋಗಿಸಲ್ಪಟ್ಟ ಪದಗಳ ನೆನಪಿದೆಯಾ? ಒಂದು ಹೊಂದದೆ ಹೋಗುವ (ಕೊರತೆಯಾಗಿ ಕಾಣುವ) ಬಗ್ಗೆ ಮಾತಾಡುತ್ತದೆ; ಇನ್ನೊಂದು ಬಹಳ ದೂರ ಹೋಗುವ ಬಗ್ಗೆ ಒತ್ತಿ ಹೇಳುತ್ತದೆ. ನಾವು ಮಾಡತಕ್ಕದ್ದನ್ನು ಮಾಡುವದಕ್ಕೆ ಎಂದಿಗೂ ವಿಫಲರಾಗಿರುವದಿಲ್ಲ ಅಥವಾ ಮಾಡಬಾರದ ಸಂಗತಿಗಳನ್ನು ಎಂದಿಗೂ ಮಾಡಿಯೇ ಇಲ್ಲ ಎಂದು ನಮ್ಮಲ್ಲಿ ಯಾವನಾದರೂ ಹೇಳಬಲ್ಲನೋ? ನಿಶ್ಚಯವಾಗಿ, ನಾವು ಪಾಪಿಗಳೆಂದು ನಮ್ಮಲ್ಲಿ ಪ್ರತಿಯೊಬ್ಬನೂ ಒಪ್ಪಿಕೊಳ್ಳಲೇಬೇಕು. ಕೆಲವರು ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟ ಪಾಪಿಗಳಾಗಿದ್ದರೆ, ಇನ್ನು ಕೆಲವರು ರಕ್ಷಿಸಲ್ಪಡದ ಪಾಪಿಗಳಾಗಿದ್ದಾರೆ-ಆದರೆ ಎಲ್ಲರೂ ಪಾಪಿಗಳೇ!

ಕೆಲವರು ಸಾರಿ ಜನರು ವಿರೋಧ ವ್ಯಕ್ತಪಡಿಸುತ್ತಾ, "ಆದರೆ ನನಗೆ ಗೊತ್ತಿರುವಂಥ ಕೆಲವು ಭಯಂಕರ ಜನರಿಗಿಂತಲೂ ನಾನು ಎಷ್ಟೋ ಉತ್ತಮನು. ನಿಶ್ಚಯವಾಗಿ, ಅದು ನಾನು ಪಾಪಿಯಲ್ಲ ಎಂದು ನಿರೂಪಿಸುತ್ತದೆ" ಎನ್ನುತ್ತಾರೆ. ನಮ್ಮ "ಗುರಿಯನ್ನು" -ದೇವರ ಮಹಿಮೆ- ದೂರದಲ್ಲಿರುವ ಒಂದು ಖಂಡಕ್ಕೆ ಹೋಲಿಸಿರಿ. ನೀವು ಮತ್ತು ನಾನು ಒಂದು ಸಮುದ್ರದ ದಡದಲ್ಲಿ ನಿಂತು ಆ ಖಂಡದ ದಿಕ್ಕಿಗೆ ನೀರಿನಲ್ಲಿ ಜಿಗಿದುಬಿಟ್ಟರೆ, ಬಹುಶಃ ನೀವು ನನಗಿಂತ ಸ್ವಲ್ಪ ದೂರಕ್ಕೆ ಜಿಗಿದಿರಬಹುದು, ಆದರೆ ನಮ್ಮಲ್ಲಿ ಯಾರೊಬ್ಬರೂ ಒಂದೇ ಜಿಗಿತದಿಂದ ಆ ಖಂಡದ ದೂರವನ್ನು ಕ್ರಮಿಸಲು ಸಾಧ್ಯವಿಲ್ಲ. ಬದಲಾಗಿ, ನಾವಿಬ್ಬರೂ ನಮ್ಮ ಗುರಿಯನ್ನು ತಲುಪದೆ ಸಮುದ್ರದಲ್ಲಿ ದಯಣೀಯವಾಗಿ ನೀರು ಚಿಮ್ಮುತ್ತಾ ಇರುತ್ತೇವಷ್ಟೇ. ಹಾಗಿದ್ದರೂ, ನಾವು ನಮ್ಮನ್ನು ಎಷ್ಟೇ ಒಳ್ಳೇವರೆಂದು ಪರಿಗಣಿಸಿ ಕೊಂಡರೂ, ದೇವರ ಮಹಿಮೆಯಿಂದ ನಾವು ಅಳತೆ ಮಾಡಲಾಗದಷ್ಟು ದೂರದಲ್ಲಿಯೇ ಇರುವವರಾಗಿದ್ದೇವೆ.

ಮಾನವರಲ್ಲಿ ಒಂದು ಸಾಮಾನ್ಯತೆ ಇರುತ್ತದೆ. ಅದು ದೇಶದ, ಕುಲ ಅಥವಾ ಒಂದೇ ರೀತಿಯ ಸಂಸ್ಕೃತಿಗಳ ವಿಚಾರವಲ್ಲ. ನಮ್ಮೆಲ್ಲರಲ್ಲಿ ಸಾಮಾನ್ಯವಾಗಿರುವ ಸಂಗತಿ ಯೇನೆಂದರೆ ದೇವರ ಮುಂದೆ ನಮ್ಮ ಅಯೋಗ್ಯತೆಯೇ![138] ನಾವೆಲ್ಲರೂ ಪಾಪಿಗಳಾಗಿದ್ದೇವೆ!

ಒಂದು ಸಭೆಯು ತನ್ನ ಕೂಟದ ಸ್ಥಳದ ಮುಂದೆ ಒಂದು ಪ್ರಕಟಣೆ ಹಲಗೆಯನ್ನು ಹೊಂದಿತ್ತು. ಪ್ರತಿ ವಾರ, ಹಾದು ಹೋಗುವವರಿಗೆ ಯೋಚನೆ ಮಾಡುವದಕ್ಕೆ ಬೋಧಕನು

ಕೆಲವು ವಿಚಾರಗಳನ್ನು ಬರೆಯುತ್ತಿದ್ದನು. ಒಂದು ವಾರ, ಆತನು ಈ ವಿಚಾರವನ್ನು ಅದರಲ್ಲಿ ಬರೆದಿದ್ದನು: "ಈ ಸಭೆಯು ಪಾಪಿಗಳಿಗೆ ಮಾತ್ರವೇ." ಕೆಲವು ದಿನಗಳ ಬಳಿಕ ಆತನಿಗೊಂದು ಪತ್ರ ಬಂದಿತ್ತು, ಅದರಲ್ಲಿ ಹೀಗೆ ಬರೆದಿತ್ತು, "ಸಭೆಯು ಕೇವಲ ಪಾಪಿಗಳಿಗೆ ಮಾತ್ರವೇ ಎಂದು ತಿಳಿದು ನನಗೆ ಆಘಾತವಾಯಿತು. ನಾನು ಇಪ್ಪತ್ತೈದು ವರ್ಷಗಳಿಂದ ಈ ಸಭೆಯ ಸದಸ್ಯನಾಗಿದ್ದೇನೆ ಮತ್ತು ನಾನು ತಕ್ಕವನಲ್ಲ ಹಾಗೂ ಬೇಡವಾದವನು ಎಂಬದನ್ನು ಎಂದಿಗೂ ಯೋಚಿಸಿಯೇ ಇರಲಿಲ್ಲ." ಮುಂದಿನ ವಾರ, ಬೋಧಕನು ಈ ಸಂದೇಶವನ್ನು ಆ ಬೋರ್ಡಿನ ಮೇಲೆ ಬರೆದನು: "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (3:23).[139]

ಒಬ್ಬ ಪ್ರಸಿದ್ಧ ಸುವಾರ್ತಿಕನಿಗೆ ತಾನು ಭೇಟಿಕೊಡಲು ಯೋಚಿಸಿದ್ದ ಮುಂದಿನ ಪಟ್ಟಣದ ಮೇಯರ್.ಗೆ ಪತ್ರ ಬರೆಯುವ ಪದ್ಧತಿಯಿತ್ತು. ಆತನು ಅಧಿಕಾರಿಗಳಿಗೆ ಪತ್ರ ಬರೆದು ಆತ್ಮೀಕ ಸಮಸ್ಯೆಯಲ್ಲಿರುವ, ಸಹಾಯ ಮತ್ತು ಪ್ರಾರ್ಥನೆಯ ಅಗತ್ಯತೆಯಲ್ಲಿರುವ ಜನರ ಪಟ್ಟಿಯನ್ನು ಕೇಳುತ್ತಿದ್ದನು. ಹೀಗೆ ಒಂದು ಸಂದರ್ಭದಲ್ಲಿ, ಆತನಿಗೆ ಒಂದು ಪಟ್ಟಣದ ಇಡೀ ಟೆಲಿಫೋನ್ ಡೈರೆಕ್ಟರಿ ಪ್ರತಿಯೇ ಅಂಚೆಯಲ್ಲಿ ಬಂದಿತ್ತು ,ಇದು ಆತನಿಗೆ ಆಶ್ಚರ್ಯವುಂಟು ಮಾಡಿತ್ತು![140] ಕೆಲವರಿಗೆ ಅರ್ಥವಾಗದ್ದನ್ನು ಆ ಅಧಿಕಾರಿಗಳು ಅರ್ಥಮಾಡಿಕೊಂಡಿದ್ದರು: "*ಎಲ್ಲರೂ* ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ಒತ್ತಿ ಹೇಳಿದ್ದು ನನ್ನದು)!

## "ನೀತಿವಂತರೆಂಬ ನಿರ್ಣಯ" ಪದಕ್ಕೆ ಸಂಬಂಧಿಸಿದಂತೆ (3:24)

"ನೀತಿವಂತರೆಂಬ ನಿರ್ಣಯ" ಎಂಬ ಪದವನ್ನು ಓದುವಾಗಲೆಲ್ಲಾ, ನಾನು ಬೋಧಿಸುವ ಸೇವೆಯನ್ನು ಆರಂಭಿಸಿದಾಗ ಮುದ್ರಿಸುತ್ತಿದ್ದ ಸುದ್ದಿ ಪತ್ರಿಕೆಯ ನೆನಪು ನನಗೆ ತಪ್ಪದೆಬರುತ್ತದೆ. ಮುದ್ರಣ ಜಗತ್ತಿನಲ್ಲಿ, "ಜಸ್ಟಿಫೈ" (justify) ಅಂದರೆ ಪುಟದ ಬಲಗಡೆಯ ಸಾಲುಗಳನ್ನು ಸಮಾನಗೊಳಿಸುವದು ಎಂದರ್ಥವಾಗಿರುತ್ತದೆ. ನೀವು ಈಗ ಓದುತ್ತಿರುವದನ್ನು ಮುದ್ರಿಸಲು ಬಲಗಡೆಯಲ್ಲಿನ ಸಾಲುಗಳನ್ನು ಸಮಾನಗೊಳಿಸಲು ಕಂಪ್ಯೂಟರ್ ಕಾರ್ಯಕ್ರಮೊಂದನ್ನು ಉಪಯೋಗಿಸಲಾಗಿರುತ್ತದೆ. ಆದರೆ ಐವತ್ತು ವರ್ಷಗಳ ಹಿಂದೆ, ಆ ಕೆಲಸವನ್ನು ನಾನೇ ಕೈಯಾರೆ ಮಾಡಬೇಕಿತ್ತು. ನಾನು ಮೊದಲು ವಿಷಯಗಳನ್ನು ಟೈಪ್ ಮಾಡುತ್ತಿದ್ದೆನು, ಪ್ರತಿ ಸಾಲಿನ ಅಂತ್ಯದಲ್ಲಿ ಸರಿಯಾಗಿ ಹಿಂದುಮುಂದಿನ ಸಾಲುಗಳಿಗೆ ಸಮಾನವಾಗಿರುವಂತೆ ಸಾಕಷ್ಟು ಗೆರೆಗಳನ್ನು (////) ಸೇರ್ಪಡೆಗೊಳಿಸುತ್ತಿದ್ದೆನು. ಬಳಿಕ, ನಾನು ಪದಗಳ ನಡುವೆ ಎಲ್ಲಿ ಹೆಚ್ಚಿನ ಸ್ಥಳವನ್ನು ಕೊಡಬಹುದೆಂದು ಗುರುತಿಸಿಕೊಳ್ಳುತ್ತಿದ್ದೆನು-ಯಾಕೆಂದರೆ ಗೆರೆಗಳ ರೂಪದಲ್ಲಿ ಸಾಕಷ್ಟು ಹೆಚ್ಚುವರಿ ಸ್ಥಳಾವಕಾಶ ಇರುತ್ತಿತ್ತು. ಅಂತಿಮವಾಗಿ, ನಾನು ಸಾಮಗ್ರಿಯನ್ನು ಮರುಟೈಪ್ ಮಾಡುತ್ತಿದ್ದೆನು ಮತ್ತು ಹೀಗೆ ಅಗತ್ಯವಾದ ಜಾಗಗಳನ್ನು ಬಿಟ್ಟು ಸಾಲುಗಳು ಏಕರೂಪವಾಗಿ ಕಾಣುವಂತೆ ಮಾಡುತ್ತಿದ್ದೆನು. ಸಾಲುಗಳು ನಿಜವಾಗಿಯೂ ಸಮರೂಪದಲ್ಲಿರಲಿಲ್ಲ, ಆದರೆ "justification" ನಿಂದ ಅವುಗಳು ಸಮರೂಪದಲ್ಲಿ "ಇರುವವೋ ಎಂಬಂತೆ" ಇತ್ತು.

## "ಕೃಪೆ" ಎಂಬ ಪದ! (3:24)

ನಾನು Texasನ Abileneಯಲ್ಲಿರುವ Abilene Christian Collegeಗೆ ಸೇರ್ಪಡೆಗೊಂಡ ಸ್ವಲ್ಪ ಕಾಲದಲ್ಲೇ, Oklahoma Terrelನಲ್ಲಿ ಭಾನುವಾರಗಳಂದು

ಬೋಧಿಸುವದಕ್ಕೆ ಆರಂಭಿಸಿದ್ದೆನು. ಪ್ರತಿ ಭಾನುವಾರ ನಿಗದಿತ ಸಮಯಕ್ಕೆ ಅಲ್ಲಿರುವಂತೆ ನನ್ನ ಸಹಪಾಠಿಯೊಂದಿಗೆ ವಾಹನದಲ್ಲಿ ಹೋಗುತ್ತಿದ್ದೆನು. ನಾವು ಪುನಃ ಸೋಮವಾರ ಮುಂಜಾನೆಯ ನಸುಕಿನ ಜಾವದಲ್ಲಿ Abileneಗೆ ಹಿಂದಿರುಗಿ ಬರುತ್ತಿದ್ದೆವು-ಮತ್ತು ಬೆಳಿಗ್ಗೆ 8 ಗಂಟೆಗೆ ನಾನು ಟೈಪಿಂಗ್ ತರಗತಿಗೆ ಹೋಗಬೇಕಿತ್ತು. ಅದು ಆರಂಭಿಕ ವಿಧ್ಯಾರ್ಥಿಗಳಿಗಾಗಿ ಇರಬೇಕಾಗಿದ್ದ ಟೈಪಿಂಗ್ ತರಗತಿಯಾಗಿತ್ತು, ಆದರೆ ತರಗತಿಯಲ್ಲಿ ಇಬ್ಬರೇ ಆರಂಭಿಕ ಟೈಪಿಂಗ್ ವಿಧ್ಯಾರ್ಥಿಗಳಿದ್ದರು-ಮತ್ತು ಅವರಲ್ಲಿ ನಾನೂ ಒಬ್ಬನಾಗಿದ್ದೆನು. ವಾರಂತ್ಯದಲ್ಲಿ ಸ್ವಲ್ಪವೂ ನಿದ್ರೆ ಮಾಡದ ನನಗೆ ತಪ್ಪುಗಳಿಲ್ಲದೆ ಟೈಪ್ ಮಾಡುವದು ಬಹಳ ಕಠಿಣವಾಗಿರುತ್ತಿತ್ತು. Semester ಅಂತ್ಯದಲ್ಲಿ, ನಾನು ಕಷ್ಟಪಟ್ಟು ಮಾಡಿದ ಟೈಪಿಂಗನಲ್ಲಿ ತಪ್ಪುಗಳನ್ನೆಲ್ಲಾ ಕಡಿತಗೊಳಿಸಿ ನೋಡಿದರೆ ನಾನು ಇನ್ನೂ "ನಿಮಿಷಕ್ಕೆ ಸೊನ್ನೆ ಪದಗಳನ್ನು" ಟೈಪ್ ಮಾಡುತ್ತಿದ್ದೆನು! ಶಿಕ್ಷಕನು ನನಗೆ "D," ಗ್ರೇಡ್ ಕೊಡುತ್ತಿದ್ದನು, ಅದಕ್ಕಿಂತ ಹೆಚ್ಚಿನ ಗ್ರೇಡ್ ನನಗೆ ಶಾಲೆಯಲ್ಲಿ ಸಿಕ್ಕಲಿಲ್ಲ; ಆದರೆ ಕೋರ್ಸನ್ನು ಬರೀ ತೇರ್ಗಡೆ ಮಾಡಿದ್ದಕ್ಕೆ ರೋಮಾಂಚನಗೊಂಡಿದ್ದೆನು! ಆ "D" ಒಂದು ವರವಾಗಿತ್ತು-ಕೃಪೆಯಿಂದ ಕೊಡಲ್ಪಟ್ಟದ್ದು-ಯಾಕೆಂದರೆ ಖಂಡಿತ ನಾನು ಅದನ್ನು ಸಂಪಾದಿಸಲಿಲ್ಲ ಅಥವಾ ನಾನು ಅದಕ್ಕೆ ಯೋಗ್ಯನಾಗಿರಲಿಲ್ಲ.

ಖಂಡಿತವಾಗಿಯೂ, ದೇವರ ಕೃಪೆಯ ಅತ್ಯಂಥ ಅದ್ಭುತವಾದ ವ್ಯಕ್ತಪಡಿಸುವಿಕೆಯೆಂದರೆ ನಮ್ಮ ಪಾಪಗಳಿಗೋಸ್ಕರ ಮರಣಿಸಲು ತನ್ನ ಮಗನನ್ನು ಕಳುಹಿಸಿಕೊಟ್ಟದ್ದು (3:25). ರಕ್ಷಣೆಯು ಉಚಿತವಾಗಿರಬಹುದು, ಆದರೆ ಅದು ಅಗ್ಗವಾಗಿತ್ತೆಂದು ಅದರರ್ಥವಲ್ಲ;[141] ಅದಕ್ಕೆ ದೇವರ ಮಗನು ಬಲಿಯಾಗಬೇಕಾಯಿತು! ಕೆಲವರು ಕೃಪೆ ("grace") ಎಂಬುದನ್ನು ಈ ರೀತಿಯಲ್ಲಿ ವಿವರಿಸುತ್ತಾರೆ:

G–od's
R–iches
A–t
C–hrist's
E–xpense (ಕ್ರಿಸ್ತನ ಬಲಿಯಲ್ಲಿ ದೇವರ ಐಶ್ವರ್ಯವಂತಿಕೆ ವ್ಯಕ್ತವಾಗಿದೆ)

ನಾವು "ನೀತಿವಂತರೆಂದು *ನಿರ್ಣಯ ಹೊಂದುವದು* ದೇವರ ಉಚಿತಾರ್ಥವಾದ *ಕೃಪೆಯಿಂದಲೇ"* ಎಂದು ಪೌಲನು ಹೇಳಿದಾಗ, ಆತನು ಪುನರಾವರ್ತನೆಯನ್ನು ಒತ್ತಿ ಹೇಳುವದಕ್ಕೆ ಉಪಯೋಗಿಸಿದನು; ಅದರಲ್ಲಿ ಮುಖ್ಯ ಅಂಶವನ್ನು ನಾವು ಗಮನದಿಂದ ತಪ್ಪುವಂತೆ ಬಿಡಬಾರದೆಂಬುದು ಆತನ ಇಚ್ಛೆಯಾಗಿತ್ತು: "ನೀತಿವಂತರೆಂಬ ನಿರ್ಣಯ *ಉಚಿತ!* ಹೌದು, *ಉಚಿತ!"* ಪಾಪಭರಿತ ಮಾನವ ಜೀವಿಗಳಾಗಿ, ನಾವು ಸ್ವತಃ ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳಲಾರೆವು. ದೇವರು ನೇಮಿಸಿರುವ ಶರತ್ತುಗಳನ್ನು ನಾವು ನೆರವೇರಿಸಿದರೂ, ಆತನನ್ನು ಹಂಗಿನಲ್ಲಿ ಒಳಪಡಿಸಲು ಸಾಧ್ಯವಿಲ್ಲ. ದೇವರು ಯಾವದರಲ್ಲೂ ನಮಗೆ ಋಣಸ್ಥನಲ್ಲ. ನಾವು ಕೃಪೆಯಿಂದಲೇ ರಕ್ಷಣೆ ಹೊಂದಿದ್ದೇವೆ ಅಥವಾ ಅದಿಲ್ಲದೆ ರಕ್ಷಣೆಯನ್ನೇ ಹೊಂದುವವರಲ್ಲ!

"ಕೃಪೆಯಿಂದ ರಕ್ಷಿಸಲ್ಪಡುವದು" ಎಂದರೆ ದೇವರು ರಕ್ಷಣೆ ಹೊಂದುವಂತೆ ನಮಗೆ ಮಾಡಲು ಆಜ್ಞಾಪಿಸಿರುವ (ನೋಡಿರಿ ಅಪೊಸ್ತಲರ ಕೃತ್ಯಗಳು 2:36-38) ಯಾವದನ್ನು

ಹೊರತುಪಡಿಸುವದಿಲ್ಲ ಎಂಬದನ್ನು ನಾನು ಸೇರ್ಪಡೆಗೊಳಿಸುವದು ಅಗತ್ಯವೋ? ಒಂದು ವರವು ಸ್ವೀಕರಿಸಲ್ಪಡತಕ್ಕದ್ದು. Jimmy Allen ಹೀಗೆ ಬರೆದನು, "ವರವು ಸ್ವೀಕರಿಸಿಕೊಳ್ಳಲ್ಪಡುವ ಮುಂಚೆ, ಅದೊಂದು ಕೊಡುಗೆ ಆಗಿರುತ್ತದೆ. ಒಮ್ಮೆ ಸ್ವೀಕರಿಸಲ್ಪಟ್ಟರೆ ಅದು ವರವಾಗುತ್ತದೆ. ಅದನ್ನು ಸ್ವೀಕರಿಸಿಕೊಳ್ಳುವದರಲ್ಲಿ ಏನೇ ಸೇರಿದ್ದರೂ ಅದೊಂದು ಶರತ್ತು ಆಗಿರುತ್ತದೆ. ನಿಜವಾಗಿಯೂ, ಯಾವದೇ ರಂಗದಲ್ಲಿಯೂ ಶರತ್ತುರಹಿತ ವರ ಎಂಬುದಿಲ್ಲ."[142]

ಹಾಗಿದ್ದರೂ, ಆ ಸತ್ಯಾಂಶವನ್ನು ಅರ್ಥಮಾಡಿಕೊಳ್ಳುವಂಥದ್ದು ಯಾವ ವಿಧದಲ್ಲಿಯೂ ಈ ಅದ್ಭುತವಾದ ಸತ್ಯವನ್ನು ಕುಂಠಿತಗೊಳಿಸಬಾರದು: ನಾವು "ಆತನ ಕೃಪೆಯ ವರದಾನದಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ"! Philip Yancey ಹೇಳಿದ್ದೇನೆಂದರೆ "ನೀರಿನ ಹನಿಯು ಸೂರ್ಯನ ತಿರುಳನ್ನು ಒಳಗೊಂಡಿರುವಂತೆಯೇ 'ಕೃಪೆಯು' ಸುವಾರ್ತೆಯ ತಿರುಳನ್ನು ಒಳಗೊಂಡಿರುತ್ತದೆ."[143] ಇದು ರಚಿಸಲ್ಪಟ್ಟ ಇನ್ನೂರು ವರ್ಷಗಳ ನಂತರವೂ, ಈ "Amazing Grace (ಆಶ್ಚರ್ಯವಾದ ಕೃಪೆ)" ಎಂಬ ಹಾಡು ಜಗತ್ತಿನಲ್ಲಿಯೇ ಅತ್ಯಂಥ ಪ್ರಸಿದ್ಧ ಹಾಡುಗಳಲ್ಲೊಂದಾಗಿದೆ:

ಆಶ್ಚರ್ಯವಾದ ಕೃಪೆ! ಓ ಎಷ್ಟು ಮಧುರ ಆ ಸ್ವರ!
ಅದು ದುಷ್ಟನಾದ ನನ್ನನ್ನು ರಕ್ಷಿಸಿತು!
ನಾನೊಮ್ಮೆ ಕಳೆದು ಹೋಗಿದ್ದೆನು, ಆದರೆ ಈಗ ಕಂಡುಕೊಳ್ಳಲ್ಪಟ್ಟೆನು;
ನಾನು ಕುರುಡನಾಗಿದ್ದೆನು, ಆದರೆ ಈಗ ನೋಡಬಲ್ಲೆ.[144]

## "ಈಡು ಸಂದಾಯ ಮಾಡಲ್ಪಟ್ಟಿದೆ!" (3:24, 25)

ನಮ್ಮಲ್ಲಿ ಕೆಲವರಿಗೆ ಸುದ್ಧಿಪತ್ರಿಕೆಯಲ್ಲಿ ದೊಡ್ಡ ಸುದ್ಧಿಯಾಗಿದ್ದ ಬಿಡುಗಡೆ ಹಣದ (ಈಡು) ನೆನಪಿರುತ್ತದೆ. 1932 ರಲ್ಲಿ, ಖ್ಯಾತ ವಿಮಾನ ಚಾಲಕ Charles Lindbergh ಮತ್ತು ಆತನ ಹೆಂಡತಿ 50,000 ಡಾಲರ್ ಸಂದಾಯ ಮಾಡಿ ತಮ್ಮ ಅಪಹರಿ ಸಲ್ಪಟ್ಟಿದ್ದ ಮಗನನ್ನು ಬಿಡಿಸಿಕೊಂಡಿದ್ದರು. 1963 ರಲ್ಲಿ, ಗಾಯಕ/ನಟ Frank Sinatra ತನ್ನ ಮಗನ ಸುರಕ್ಷಿತ ಹಿಂದಿರುಗುವಿಕೆಗಾಗಿ 240,000 ಡಾಲರ್ ಬಿಡುಗಡೆ ಹಣವನ್ನು ಕೊಟ್ಟಿದ್ದನು, ನಮಗಾಗಿ ಯೇಸು ಸಂದಾಯಮಾಡಬೇಕಾದ ಬೆಲೆ (ಬಿಡುಗಡೆ ಹಣ)ಗೆ ಹೋಲಿಸಿದರೆ ಅಂಥ ಹಣ ಸಂದಾಯಗಳು ಮಂಕಾಗಿ ಕಾಣಿಸುತ್ತವೆ.[145] ಯೇಸು ಸಂದಾಯ ಮಾಡಿದ ಈಡು ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತವೇ ಆಗಿತ್ತು.

## ರಕ್ತದಿಂದ ರಕ್ಷಿಸಲ್ಪಟ್ಟೆವು! (3:25; 5:9)

ರೋಮಾ 3:25 ರಲ್ಲಿ ಪೌಲನು ಬರೆದದ್ದೇನೆಂದರೆ, "ಈತನು [ಯೇಸು[ ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು) ಪ್ರಾಯಶ್ಚಿತ್ತವಾಗ ಬೇಕೆಂದು) ದೇವರು ಈತನನ್ನು [ಯೇಸು] ಮುಂದಿಟ್ಟನು (ತೋರ್ಪಡಿಸಿದನು)." 5:9ರಲ್ಲಿ, ಅಪೊಸ್ತಲನು ಇನ್ನೂ ಹೇಳಿದ್ದೇನೆಂದರೆ, "ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಮತ್ತೂ ನಿಶ್ಚಯವಲ್ಲವೇ."

ಕೆಲವರು ಅಪಸ್ವರವೆತ್ತಿ "ಒಂದು ರಕ್ತಸಿಕ್ತ ಧರ್ಮ" ಎಂದು ಕರೆಯುತ್ತಾರೆ. ಕೆಲವು ವರ್ಷಗಳ ಹಿಂದೆ, ಅಮೆರಿಕದ ಒಂದು ಪ್ರಭಲ ಪಂಗಡದ ಸಭೆಯವರು ತಮ್ಮ ಹಾಡಿನ

ಪುಸ್ತಕಗಳಿಂದ "ರಕ್ತ" ಎಂಬ ಪದವನ್ನು ತೆಗೆದುಹಾಕುವದಕ್ಕೆ ಮತಹಾಕಿ ನಿರ್ಧರಿಸಿದ್ದರು. ಹೇಗೂ, ಕ್ರೈಸ್ತತ್ವದಿಂದ ರಕ್ತವನ್ನು ತೆಗೆಯುವದೆಂದರೆ ಒಂದು ಅರ್ಥದಲ್ಲಿ, ಅದರಿಂದ ಜೀವವನ್ನೇ ತೆಗೆಯುವಂತಿರುತ್ತದೆ (ನೋಡಿರಿ ಯಾಜಕಕಾಂಡ 17:11). ಇಬ್ರಿಯ ಪುಸ್ತಕದ ಲೇಖಕನು ಹೇಳಿದ ಹಾಗೆ, "ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22).

ಇಬ್ರಿಯ 9:11-14 ರಲ್ಲಿ, ಹಳೇ ಒಡಂಬಡಿಕೆಯ ರಕ್ತದ ಯಜ್ಞಗಳು ಮತ್ತು ಯೇಸುವಿನ ರಕ್ತ ಯಜ್ಞದ ನಡುವೆ ಹೋಲಿಕೆ ಹಾಗೂ ವ್ಯತ್ಯಾಸ ತೋರಿಸಲಾಗಿರುತ್ತದೆ. ನಾವು ಹೋಲಿಕೆಗಳನ್ನು ಮತ್ತು ವ್ಯತ್ಯಾಸಗಳನ್ನು ಗಮನಿಸುವಾಗ, ಬಹುಶಃ ನಾವು ರಕ್ತ ಸುರಿಸುವಿಕೆ ಮತ್ತು ಪಾಪಗಳ ಕ್ಷಮಾಪಣೆಯ ಕುರಿತು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಶಕ್ತರಾಗುವೆವು.

ಹಳೇ ಒಡಂಬಡಿಕೆ.

1. ನಿಯಮ. ಆದಿಕಾಂಡಯಿಂದಲೂ ದೇವರ ಸಂಗಡ ಮಾನವರು ಹೊಂದಿದ್ದ ಸಂಬಂಧದಲ್ಲಿ, ರಕ್ತದ ಸುರಿಸಲ್ಪಡುವಿಕೆಯು ದೇವರಿಂದಾದ ವ್ಯವಸ್ಥೆಯಾಗಿತ್ತು.

> ಹೆಬೇಲನು "ತನ್ನ ಕುರಿ ಮಂದೆಯಿಂದ ಚೊಚ್ಚಲ ಕುರಿ ಮರಿಯನ್ನು ಅರ್ಪಿಸಿದನು" (ಆದಿಕಾಂಡ 4:4).
>
> ನೋಹನು "ಶುದ್ಧವಾದ ಎಲ್ಲಾ ಪಶುಪಕ್ಷಿ ಜಾತಿಗಳಲ್ಲಿ ಸರ್ವಾಂಗಹೋಮ ಮಾಡಿದನು" (ಆದಿಕಾಂಡ 8:20).
>
> ಅಬ್ರಹಾಮನು ಅನೇಕ ಯಜ್ಞವೇದಿಗಳನ್ನು ಕಟ್ಟಿದನು, ಅವುಗಳ ಮೇಲೆ ಆತನು ದೇವರಿಗೆ ಯಜ್ಞಗಳನ್ನು ಮಾಡಿದನು (ಆದಿಕಾಂಡ 12:7, 8; 13:18; 22:9).
>
> ಪಸ್ಕದ ಕುರಿ ಮರಿಯು ಸಹ ಒಂದು ಯಜ್ಞವಾಗಿತ್ತು (ವಿಮೋಚನಕಾಂಡ 12:1-27).

ಇಬ್ರಿಯ ಪುಸ್ತಕದ ಲೇಖಕನ ವಿಶೇಷ ಆಸಕ್ತಿಯಂತೆ ಆತನು ರಕ್ತವನ್ನು "ಮೊದಲ ಒಡಂಬಡಿಕೆ" -ಹಳೇ ಒಡಂಬಡಿಕೆ-ಯೊಂದಿಗೆ ಜೋಡಣೆ ಮಾಡುತ್ತಾನೆ (ಇಬ್ರಿಯ 9:18).

ದೇವರು ದಶಾಜ್ಞೆಗಳನ್ನು ಮತ್ತು ಸಂಬಂಧಿಸಿದ ವಿಧಿಗಳನ್ನು ಕೊಟ್ಟ ಬಳಿಕ, ಮೋಶೆಯು ಅವುಗಳನ್ನು ಒಂದು ಪುಸ್ತಕದಲ್ಲಿ-ಅಂದರೆ, ಒಂದು ಸುರುಳಿಯಲ್ಲಿ ಬರೆದಿಟ್ಟನು (ವಿಮೋಚನಕಾಂಡ 24:4). ಆತನು ಬರೆದು ಮುಗಿಸಿದ ಬಳಿಕ, ಇಸ್ರಾಯೇಲ್ಯರು ದೇವರು ಆಜ್ಞಾಪಿಸಿದ್ದೆಲ್ಲವನ್ನೂ ಕೈಕೊಂಡು ನಡೆಯುವದಾಗಿ ತಮ್ಮ ಸಮರ್ಪಣೆಯನ್ನು ದೃಢಪಡಿಸಿದರು. ನಂತರ ಹೋರಿಗಳನ್ನು ಯಜ್ಞಮಾಡಲಾಯಿತು (ವಿಮೋಚನಕಾಂಡ 24:5). ಹೋರಿಯ ರಕ್ತವನ್ನು ಆ ಪುಸ್ತಕದ ಮೇಲೆ ಮತ್ತು ಅಲ್ಲಿ ಸೇರಿಬಂದಿದ್ದ ಇಸ್ರಾಯೇಲ್ಯರ ಮೇಲೆ ಪ್ರೋಕ್ಷಿಸಲಾಯಿತು (ವಿಮೋಚನಕಾಂಡ 24:8; ಇಬ್ರಿಯ 9:19), ಮತ್ತು ಗುಡಾರದ ಮೇಲೆಯೂ ದೇವರ ಸೇವೆಗೆ ಬೇಕಾದ ಎಲ್ಲಾ ವಸ್ತುಗಳ ಮೇಲೆಯೂ ರಕ್ತವನ್ನು ಪ್ರೋಕ್ಷಿಸಲಾಯಿತು (ಇಬ್ರಿಯ 9:21). ಮೋಶೆಯು ಬಳಿಕ ಹೇಳಿದ್ದೇನೆಂದರೆ, "ಇಗೋ ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತ ಇದೇ" (ವಿಮೋಚನಕಾಂಡ 24:8).

ಮುಂದಿನ ಹದಿನೈದು ನೂರು ವರ್ಷಗಳ ವರೆಗೆ, ಧರ್ಮಶಾಸ್ತ್ರದಲ್ಲಿ ಆಜ್ಞಾಪಿಸಲ್ಪಟ್ಟ ಪ್ರಕಾರ ಲೆಕ್ಕವಿಲ್ಲದಷ್ಟು ರಕ್ತದ ಯಜ್ಞಗಳನ್ನು ಅರ್ಪಿಸಲಾಯಿತು. "ಹೋತಗಳ ಮತ್ತು ಹೋರಿಗಳ ರಕ್ತವು" ಸುರಿಸಲ್ಪಟ್ಟಿತು (ಇಬ್ರಿಯ 9:12). ಯಜ್ಞಮಾಡಲ್ಪಟ್ಟ "ಕಡಸಿನ ಬೂದಿಯ" ಯು ಕೆಲವೊಂದು ಶುದ್ಧೀಕರಣ ಸಮಾರಂಭಗಳಲ್ಲಿ ಉಪಯೋಗಿಸಲ್ಪಡುತ್ತಿತ್ತು (ಇಬ್ರಿಯ 9:13; ನೋಡಿರಿ ಅರಣ್ಯಕಾಂಡ 19:9). ಅತ್ಯಂಥ ಮಹತ್ವದ ರಕ್ತಬಲಿಯನ್ನು ವರ್ಷಕ್ಕೊಮ್ಮೆ ಪಾಪ ಪ್ರಾಯಶ್ಚಿತ್ತ ದಿನದಂದು ಅರ್ಪಿಸಲಾಗುತ್ತಿತ್ತು (ಇಬ್ರಿಯ 9:25). ಧರ್ಮಶಾಸ್ತ್ರದ ಪ್ರಕಾರ, "ಸ್ವಲ್ಪ ಕಡಿಮೆ ಎಲ್ಲಾ ವಸ್ತುಗಳು ರಕ್ತದಿಂದಲೇ ಶುದ್ಧೀಕರಿಸಲ್ಪಡುವು; ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22).

2. ಕಾರಣ. ಏಕೆ ಹೀಗೆ ಮಾಡಬೇಕಿತ್ತು? 9:16, 17ರಲ್ಲಿ ಪದಗಳು ಚಾಣಕ್ಷ್ಯತೆಯಿಂದ ಉಪಯೋಗಿಸಲ್ಪಟ್ಟಿವೆ ಎಂಬ ಏಕೈಕ ವಿವರಣೆಯನ್ನು ಇಬ್ರಿಯ ಪುಸ್ತಕದ ಲೇಖಕನು ಕೊಡುತ್ತಾನೆ. ಅನುವಾದಿಸಲ್ಪಟ್ಟ ಗ್ರೀಕ್ ಪದವು "ಒಡಂಬಡಿಕೆ" (διαθήκη, *diathēkē*) ಎಂಬ ಪದವನ್ನು ಸಾಮಾನ್ಯವಾಗಿ *ಮರಣಶಾಸನ (ಮರಣ ಮುಂಚೆ ಬರೆದಿಡುವ ಸಂಕಲ್ಪ ಪತ್ರ)* ವನ್ನು ಸೂಚಿಸಲು ಉಪಯೋಗಿಸಲಾಗುತ್ತಿತ್ತು. ಆ ಪದದ ಪ್ರಾಥಮಿಕ ಅರ್ಥವನ್ನು ಉಪಯೋಗಿಸಿ, ಮರಣಶಾಸನ ಹಾಗೂ ಒಡಂಬಡಿಕೆಯು ಅದನ್ನು ಬರೆಸಿದವನು ಮರಣಿಸುವ ವರೆಗೂ ಚಾಲ್ತಿಗೆ ಬರುವದಿಲ್ಲ ಎಂಬದಾಗಿ ಹೇಳುತ್ತಾನೆ. ಆದ್ದರಿಂದ ಆತನು ಒತ್ತಿ ಹೇಳಿದ್ದೇನೆಂದರೆ ದೇವರು ಹಾಗೂ ಮನುಷ್ಯರ ನಡುವೆ ಒಂದು ಒಡಂಬಡಿಕೆ ಏರ್ಪಡಬೇಕೆಂದರೆ ಮರಣವು ಅವಶ್ಯಕವಾಗಿತ್ತು.

ಇಬ್ರಿಯ ಪುಸ್ತಕದ ಲೇಖಕನು ಅದಕ್ಕಿಂತ ಹೆಚ್ಚೇನು ಹೇಳಲಿಲ್ಲ. ಆತನು ಪ್ರಾಣಿ ಯಜ್ಞಗಳ ಬಗ್ಗೆ ಪರಿಚಯವಿದ್ದ ವಾಚಕರಿಗೆ "ಏಕೆ" ಎಂಬದನ್ನು ವಿವರಿಸುವ ಅಗತ್ಯವಿರಲಿಲ್ಲ. ಆತನು "ರಕ್ತಧಾರೆಯಿಲ್ಲದೆ ಪಾಪ ಪರಿಹಾರ ಉಂಟಾಗುವದಿಲ್ಲ" (ಇಬ್ರಿಯ 9:22) ಎಂದು ಹೇಳಿದಾಗ, ಆತನ ವಾಚಕರು ಹೌದೆಂದು ತಲೆಯಾಡಿಸಿರ ಬಹುದಾಗಿದೆ. ಹೇಗೂ, ನಮ್ಮಲ್ಲಿ ಅನೇಕರು ಅದೇ ಹಿನ್ನಲೆಯಿಂದ ಬಂದವರಗಿರುವದಿಲ್ಲ. ಕೆಲವರಂತೂ ದೇವರಿಗೆ ಏಕೆ ರಕ್ತಬಲಿಗಳ ಅವಶ್ಯಕತೆಯಿದೆ ಎಂದು ಪ್ರಶ್ನೆ ಹೊಂದಿರಬಹುದು. ದೇವರ ಮನಸ್ಸಿನಲ್ಲಿ ಇದ್ದದ್ದನ್ನೆಲ್ಲಾ ತಿಳಿಯಲು ನಮಗೆ ಸಾಧ್ಯವಿಲ್ಲ (ಯೆಶಾಯ 55:8, 9), ಆದರೆ ಕೆಳಗೆ ಕೆಲವು ಸಲಹೆಗಳನ್ನು ಕೊಡಲಾಗಿದೆ. ದೇವರು ತನ್ನ ಜನರಿಗೆ ಕೆಲವೊಂದು ಸತ್ಯಗಳನ್ನು ಮನದಟ್ಟುಮಾಡಿ ಕೊಡಲಿಚ್ಚಿಸಿದನು. ಅವರು ಈ ಕೆಳಗಿನವುಗಳನ್ನು ಅರ್ಥಮಾಡಿಕೊಳ್ಳಬೇಕೆಂಬದು ಆತನ ಇಚ್ಚೆಯಾಗಿತ್ತು:

*ಪಾಪವು ಭಯಂಕರ.* ಅದು ಸುಲಭವಾಗಿ ಕ್ಷಮಿಸಲ್ಪಡುವದಿಲ್ಲ. ನಾವು ಕ್ಷಮಿಸಲ್ಪಡಬೇಕೆಂದರೆ, ಅಲ್ಲೊಂದು ಮರಣ ಸಂಭವಿಸಬೇಕು, ರಕ್ತವು ಸುರಿಸಲ್ಪಡುವದು ಅಗತ್ಯ.

ದೇವರು *ಕೃಪೆಯುಳ್ಳವನು.* ಆತನು ಪಾಪಗಳನ್ನು ಕ್ಷಮಿಸಲು ಸಿದ್ಧನಿದ್ದನು-ಆದರೆ ಸರಿಯಾದ ರಕ್ತಬಲಿಯನ್ನು ಅರ್ಪಿಸಿದಾಗ ಮಾತ್ರವೇ.

ರಕ್ತವು ಅವಶ್ಯಕ*ವಾದದ್ದು.* ರಕ್ತವು ಸುರಿಸಲ್ಪಡದೆ ಪಾಪಗಳ ಪರಿಹಾರ ಉಂಟಾಗುತ್ತಿರಲಿಲ್ಲ.

*ಪ್ರಾಣಿಗಳ ರಕ್ತವು ಸಾಕಾದದ್ದಾಗಿರಲಿಲ್ಲ.* ಪ್ರಾಣಿಗಳ ಯಜ್ಞಗಳನ್ನು ಪದೇ ಪದೇ ಮಾಡಬೇಕಾಗಿತ್ತು (ಇಬ್ರಿಯ 10:1-3, 11). ಎಲ್ಲಾ ಪಾಪಗಳನ್ನೂ-ಹಿಂದಿನ, ಇಂದಿನ ಮತ್ತು ಮುಂದಿನ ಪಾಪಗಳು -ಪರಿಹರಿಸುವ ಯಜ್ಞವೊಂದರ ಅಗತ್ಯವಿತ್ತು (ಇಬ್ರಿಯ 10:12). ಅದು ನಮ್ಮನ್ನು ಹೊಸ ಒಡಂಬಡಿಕೆಗೆ ತರುತ್ತದೆ.

ಹೊಸ ಒಡಂಬಡಿಕೆ.

1. ಪರಿಹಾರ. ಹಳೇ ಒಡಂಬಡಿಕೆಯ ಅನೇಕ ರಕ್ತಬಲಿಗಳಂತಲ್ಲದೆ, ಹೊಸ ಒಡಂಬಡಿಕೆಯಲ್ಲಿ ಒಂದೇ ರಕ್ತದ ಯಜ್ಞವು ಇದೆ: ಶಿಲುಬೆಯ ಮೇಲೆ ಯೇಸುವಿನ ಯಜ್ಞವು.[146] ಇಬ್ರಿಯ ಪುಸ್ತಕದ ಲೇಖಕನು ಈ ಯಜ್ಞವನ್ನು ವಿವರಿಸುವದಕ್ಕಾಗಿ ಪಾಪ ಪ್ರಾಯಶ್ಚಿತ್ತ ದಿನದಂದಾಗುವ ಚಿತ್ರಣವನ್ನು ಉಪಯೋಗಿಸುತ್ತಾನೆ.

ಪಾಪ ಪ್ರಾಯಶ್ಚಿತ್ತ ದಿನದಂದು, ಮಹಾಯಾಜಕನು ಅತಿ ಪರಿಶುದ್ಧ ಸ್ಥಳದೊಳಗೆ ಪ್ರಾಣಿಗಳ ರಕ್ತ ತೆಗೆದುಕೊಂಡು ಹೋಗಿ ಅದನ್ನು ಕೃಪಾ ಸಿಂಹಾಸನದ ಮೇಲೆ ಪ್ರೋಕ್ಷಿಸುತ್ತಿದ್ದನು. ಅದೇ ರೀತಿಯಲ್ಲಿಯೇ, ಯೇಸು ಸಹ ಪರಲೋಕದ ಅತಿ ಪರಿಶುದ್ಧ ಸ್ಥಳಕ್ಕೆ ಏರಿ ಹೋದನು (ಇಬ್ರಿಯ 9:24) ಮತ್ತು ಪದ್ಧತಿಯಂತೆ, ತನ್ನ ರಕ್ತವನ್ನು ಪರಲೋಕದ ಕೃಪಾ ಸಿಂಹಾಸನದ ಮೇಲೆ ಪ್ರೋಕ್ಷಿಸಿದನು (ಇಬ್ರಿಯ 9:11, 12).[147] ಹೇಗೂ, ಪಾಪ ಪ್ರಾಯಶ್ಚಿತ್ತ ದಿನದಂದು ಮಾಡಲಾಗುವ ಯಜ್ಞದಂತಲ್ಲದೆ, ಯೇಸುವಿನ ಯಜ್ಞವು "ಒಂದೇ ಸಾರಿ" ಅರ್ಪಿಸಿದ ಯಜ್ಞವಾಗಿತ್ತು (ಇಬ್ರಿಯ 7:27; 9:12; 10:10; ನೋಡಿರಿ ರೋಮಾ 6:10; 1 ಪೇತ್ರ 3:18). ಯೇಸು ಪರಲೋಕ ಮತ್ತು ಭೂಲೋಕಕ್ಕೆ ಹೋಗುತ್ತಾ ಬರುತ್ತಾ ಪದೇ ಪದೇ ಯಜ್ಞಗಳನ್ನು ಅರ್ಪಿಸಬೇಕಾಗಿರಲಿಲ್ಲ.

2. ಫಲಗಳು. ಯೇಸುವಿನ ಪರಿಪೂರ್ಣ ಯಜ್ಞವು ಏನನ್ನು ಸಾಧಿಸಿತು? ಆತನು "ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು" (ಇಬ್ರಿಯ 9:26). ಮೊದಲನೆಯದಾಗಿ, ಆತನ ಮರಣವು ಹಳೇ ಒಡಂಬಡಿಕೆಯ ಭಕ್ತರಿಗೆ ರಕ್ಷಣೆಯನ್ನು ಖಚಿತಗೊಳಿಸಿತು (ಇಬ್ರಿಯ 9:15). ಹಳೇ ಒಡಂಬಡಿಕೆಯಲ್ಲಿ ಕ್ಷಮಾಪಣೆ ಇತ್ತು; ಆದರೆ ಅದು ಹಂಗಾಮಿ (ತಾತ್ಕಾಲಿಕ) ಕ್ಷಮಾಪಣೆಯಾಗಿದ್ದು ನಂತರದಲ್ಲಿ ಶಿಲುಬೆಯ ಮೇಲೆ ಸಂಭವಿಸಲಿಕ್ಕಿದ್ದ ಯೇಸುವಿನ ಮರಣದ ಮೇಲೆ ಆಧಾರವಾಗಿತ್ತು.

ನಮಗೆ ಬಹಳ ಮುಖ್ಯವಾದದ್ದೇನೆಂದರೆ ಸುವಾರ್ತೆಗೆ ನಾವು ಕಿವಿಗೊಡುವಾಗ ಯೇಸುವಿನ ಮರಣವು ನಮಗೆ ರಕ್ಷಣೆಯನ್ನು ಖಚಿತಗೊಳಿಸುತ್ತದೆ ಎಂಬದೇ (ಇಬ್ರಿಯ 9:15; ನೋಡಿರಿ 2 ಥೆಸಲೋನಿಕ 2:14). ಅದು ನಮ್ಮೊಳಗಿನ ಅಪರಾಧ ಭಾವನೆಯನ್ನು ನಿವಾರಿಸಿ "ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ" ಸ್ಫೂರ್ತಿಗೊಳಿಸುತ್ತದೆ (ಇಬ್ರಿಯ 9:14). ಅದು "ವಾಗ್ದಾನವಾಗಿದ್ದ ನಿತ್ಯಬಾಧ್ಯತೆಯನ್ನು ಹೊಂದುವಂತೆ" ಮಾಡುತ್ತದೆ (ಇಬ್ರಿಯ 9:15). ಅಷ್ಟುಮಾತ್ರವಲ್ಲದೆ, ಯೇಸುವಿನ ರಕ್ತವು ಹೊಸ ಒಡಂಬಡಿಕೆಯನ್ನು ಸಲ್ಲುವಂತೆ ಮಾಡುತ್ತದೆ (ಇಬ್ರಿಯ 9:17), ಯೇಸುವನ್ನು ನಮಗಾಗಿ ನಿರಂತರವಾಗಿ ದೇವರ ಮುಂದೆ ವಿಜ್ಞಾಪನೆ ಮಾಡುವ ನಮ್ಮ ಒಡಂಬಡಿಕೆಯ ಮಧ್ಯಸ್ಥನನ್ನಾಗಿ ಮಾಡುತ್ತದೆ.

ನಾವು ಒಂದೇ ಸಾರಿ ಸಾಯುವ ಪ್ರಕಾರವೇ ಕ್ರಿಸ್ತನು ಸಹ ಒಂದೇ ಸಾರಿ ಸತ್ತನು

ಎಂಬದನ್ನು ತಿಳಿಸುವ ಮೂಲಕ ಈ ವಾಕ್ಯಭಾಗವು ಮುಕ್ತಾಯಗೊಳ್ಳುತ್ತದೆ (ಇಬ್ರಿಯ 9:27, 28). Bruce ಈ ವಚನಗಳನ್ನು ಹೀಗೆ ಸಾರಾಂಶಗೊಳಿಸುತ್ತಾನೆ: "ಮನುಷ್ಯರು ಒಂದೇ ಸಾರಿ ಸಾಯುತ್ತಾರೆ, ಅದು ದೇವರಿಂದ ನೇಮಕವಾಗಿದೆ, ಮತ್ತು ಅವರ ವಿಷಯದಲ್ಲಿ ನೋಡುವದಾದರೆ ಮರಣದ ಬಳಿಕ ನ್ಯಾಯತೀರ್ಪು ಇರುತ್ತದೆ. ಕ್ರಿಸ್ತನು ಒಂದೇ ಸಾರಿ ಸತ್ತನು, ಅದು ಸಹ ದೇವರಿಂದ ನೇಮಕವಾಗಿತ್ತು, ಮತ್ತು ಆತನ ಮರಣದ ನಂತರ ದೇವರ ಎಲ್ಲಾ ಜನರಿಗೆ ರಕ್ಷಣೆ ಉಂಟಾಗಿತ್ತು."[148]

*ಮುಕ್ತಾಯ.* ರಕ್ಷಣೆಯ ಸತ್ಯವು ಎಷ್ಟು ಅದ್ಭುತವಾದದ್ದೆಂಬದನ್ನು ನಾವು ಯಾವಾಗಲೂ ಗುರುತಿಸೋಣ. ಕ್ರಿಸ್ತನು ನಮಗಾಗಿ ಸುರಿಸಿದ ಅಮೂಲ್ಯವಾದ ರಕ್ತದ ಬಗ್ಗೆ ಯಾವಾಗಲೂ ಶ್ಲಾಘಿಸುವರಾಗಿರೋಣ. ನಾವು ಎಂದಾದರೂ ಸಹ "ತಮ್ಮನ್ನು ಪವಿತ್ರಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸುವ" ತಪ್ಪನ್ನು ಮಾಡದಂತೆ ದೇವರೇ ನಮ್ಮನ್ನು ತಡೆಯಲಿ (ಇಬ್ರಿಯ 10:29).

## ಹಳೇ ಒಡಂಬಡಿಕೆಯ ಕಾಲದಲ್ಲಿನ ಪಾಪಗಳು (3:25)

ಹೊಸ ಒಡಂಬಡಿಕೆಯಲ್ಲಿನ ಏಕ ರೀತಿಯ ಎರಡು ವಾಕ್ಯಭಾಗಗಳು ಒಂದು ಸವಾಲನ್ನು ಮುಂದಿಡುತ್ತವೆ. ಒಂದು, ರೊಮಾ 3:25, ಅದು ಯೇಸುವಿನ ಯಜ್ಞದ ಕುರಿತು ಮಾತಾಡುತ್ತಾ ಹೇಳುವದೇನೆಂದರೆ ದೇವರು "ಹಿಂದಿನ ಕಾಲದ ಪಾಪಗಳನ್ನು ಸಹಿಸಿಕೊಂಡನು." ಇನ್ನೊಂದು ಯಾವದೆಂದರೆ ,ಇಬ್ರಿಯ 9:15, ಅದು ಹೀಗೆ ಹೇಳುತ್ತದೆ "ಕ್ರಿಸ್ತನು ಮೊದಲನೆಯ ಒಡಂಬಡಿಕೆ ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರ್ಥವಾಗಿ ಮರಣವನ್ನು ಅನುಭವಿಸಿದನು." ಈ ವಾಕ್ಯಭಾಗಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾದ ಅಗತ್ಯವಿರುತ್ತದೆ, ಯಾಕೆಂದರೆ ಪ್ರೇರಿತ ಲೇಖಕರು "ಮೊದಲ ಒಡಂಬಡಿಕೆಯ" (ಹಳೇ ಒಡಂಬಡಿಕೆ) ಕಾಲದಲ್ಲಿ ದೇವರು ಅವರ ಪಾಪಗಳನ್ನು ಕ್ಷಮಿಸಿದನೆಂಬದಾಗಿ ನಂಬಿದರೆಂದು ತೋರುತ್ತದೆ (ಕೀರ್ತನೆ 32; 51).

ಈ ಎರಡು ವಿಚಾರಗಳಲ್ಲಿ ಸಂಧಾನ ಏರ್ಪಡಿಸುವದಕ್ಕೆ ಒಂದು ದಾರಿ ಇಲ್ಲಿದೆ: ದಾವೀದನ ಕೀರ್ತನೆ 32 ಮತ್ತು 51 ರಂತಹ ವಾಕ್ಯಭಾಗಗಳು ಕ್ಷಮಾಪಣೆಯನ್ನು *ಮಾನವನ ದೃಷ್ಟಿಕೋನದಿಂದ* ಮುಂದಿಡುತ್ತವೆ. ರೋಮಾ 3:25 ಮತ್ತು ಇಬ್ರಿಯ 9:15 ರಂತಹ ವಾಕ್ಯಭಾಗಗಳು *ದೇವರ ದೃಷ್ಟಿಕೋನದಿಂದ* ಕ್ಷಮಾಪಣೆಯನ್ನು ಮುಂದಿಡುತ್ತವೆ: ಯೇಸು ದೋಷವಿಲ್ಲದ ಪರಿಪೂರ್ಣ ಯಜ್ಞವನ್ನು ಅರ್ಪಿಸುವ ವರೆಗೆ ಪಾಪಗಳು ಪೂರ್ಣವಾಗಿ ಮತ್ತು ಸಂಪೂರ್ಣವಾಗಿ ಕ್ಷಮಿಸಲ್ಪಡಲಿಲ್ಲ. ಹೇಗೂ, ದೇವರ ಮನಸ್ಸಿನಲ್ಲಿ, ಯೇಸು ಮರಣಿಸುವನು ಎಂಬ ವಿಷಯದಲ್ಲಿ ಯಾವ ಸಂಶಯವೂ ಇರಲಿಲ್ಲ (ಎಫೆಸ 3:11; 1 ಪೇತ್ರ 1:19, 20). ಆದ್ದರಿಂದ ಆತನು ಆ ಮರಣವು ನಿಜವಾಗಿಯೂ ಸಂಭವಿಸುವ ಮುನ್ನ ಪಾಪಗಳನ್ನು ಪ್ರಜ್ಞಾಪೂರ್ವಕವಾಗಿ ಕ್ಷಮಿಸಲು ಶಕ್ತನಾಗಿದ್ದನು.

## ಯಾವ ದೃಷ್ಟಾಂತವನ್ನು ಉಪಯೋಗಿಸಬಹುದು? (3:26)

ಇಷ್ಟು ವರ್ಷಗಳಿಂದ, ದೇವರು ಹೇಗೆ ಏಕಕಾಲದಲ್ಲಿ ತನ್ನ ನೀತಿಯನ್ನು ಹಾಗೂ ಪ್ರೀತಿಯನ್ನು ವ್ಯಕ್ತಗೊಳಿಸುವದಕ್ಕೆ ಶಕ್ತನಾಗಿದ್ದನು ಎಂಬದನ್ನು ದೃಷ್ಟಾಂತಗೊಳಿಸಲು ಬೋಧಕರು ಪ್ರಯಾಸಪಟ್ಟಿರುತ್ತಾರೆ.[149] ಒಬ್ಬ ಬಲಿಷ್ಠ, ಬುದ್ಧಿವಂತ ಪ್ರಧಾನನ ಕಥೆಯು

ಹೇಳಲ್ಪಡುತ್ತದೆ:

> ಆತನು ಕೇವಲ ತನ್ನ ಬಲಿಷ್ಠ ದೇಹದ ಕಾರಣದಿಂದ ಮಾತ್ರವಲ್ಲದೆ, ಅತ್ಯಂಥ ನ್ಯಾಯ ಹಾಗೂ ನಿಷ್ಪಕ್ಷಪಾತದ ಕಾರಣದಿಂದ ಆಳ್ವಿಕೆ ಮಾಡುತ್ತಿದ್ದನು. ಸಾಲು ಸಾಲಾಗಿ ಕಳ್ಳತನಗಳು ಸಂಭವಿಸಿದಾಗ, ಆತನು ಕಳ್ಳನು ಸಿಕ್ಕಿಕೊಂಡರೆ ಆತನಿಗೆ ನಮ್ಮ ಬುಡಕಟ್ಟು ಜನಾಂಗದ ಚಾಟಿ ಮಾಸ್ತರನಿಂದ ಹತ್ತು ಚಾಟಿ ಏಟುಗಳನ್ನು ಹೊಡಿಸಲಾಗುವದೆಂದು ಘೋಷಿಸಿದನು. ಕಳ್ಳತನಗಳು ಮುಂದುವರೆದಾಗ [ಪ್ರಧಾನನು[ ಚಾಟಿ ಏಟುಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋದನು, ಕೊನೆಗೆ ನಾಲ್ವತ್ತು ಏಟುಗಳೆಂದು ಘೋಷಿಸಲಾಯಿತು, ಅಂಥ ಶಿಕ್ಷೆಯನ್ನು ಆತನೊಬ್ಬನೇ ಸಹಿಸಿಕೊಳ್ಳುವದಕ್ಕೆ ಸಮರ್ಥನೆಂದು ಎಲ್ಲರಿಗೂ ಗೊತ್ತಿತ್ತು. ಕೊನೆಗೆ ಆ ಕಳ್ಳತನಗಳನ್ನು ಮಾಡಿದ್ದು ಪ್ರಧಾನನ ವಯಸ್ಸಾದ ತಾಯಿಯೇ ಎಂದು ತಿಳಿದು ಬಂದಾಗ, ಎಲ್ಲರಿಗೂ ಬಹಳ ಆಘಾತವಾಗಿತ್ತು, ತಕ್ಷಣವೇ ಪ್ರಧಾನನು ಘೋಷಿಸಲ್ಪಟ್ಟ ಶಿಕ್ಷೆಯನ್ನು ಆಕೆಗೆ ನೀಡುವನೋ ಇಲ್ಲವೋ ಎಂಬ ಬಗ್ಗೆ ವದಂತಿಗಳು ಆರಂಭವಾದವು. ಆತನು ಆಕೆಯನ್ನು ಕ್ಷಮಿಸಿ ತನ್ನ ಪ್ರೀತಿಯನ್ನು ಸಂತೃಪ್ತಿಗೊಳಿಸುವನೋ ಅಥವಾ ಖಂಡಿತ ಆಕೆಗೆ ಮರಣವನ್ನೇ ತರಬಹುದಾಗಿದ್ದ ಆ ಶಿಕ್ಷೆಯನ್ನು ವಿಧಿಸಿ ತನ್ನ ಕಾನೂನನ್ನು ಸಂತೃಪ್ತಿಗೊಳಿಸುವನೋ? ಆತನ ಪ್ರಮಾಣಿಕತೆಗೆ ತಕ್ಕಂತೆಯೇ, ಪ್ರಧಾನನು ತನ್ನ ತಾಯಿಗೆ ನಾಲ್ವತ್ತು ಚಾಟಿ ಏಟುಗಳ ಶಿಕ್ಷೆ ವಿಧಿಸಿದನು. ಆದರೆ ತನ್ನ ತಾಯಿಯ ಮೇಲಿದ್ದ ಪ್ರೀತಿಗೆ ತಕ್ಕಂತೆಯೇ, ಚಾಟಿಯು ಆಕೆಯ ಮೇಲೆ ಬೀಳುವದಕ್ಕೆ ಮುನ್ನವೇ ಆಕೆಯ ಬೆನ್ನಿನ ಹಿಂದೆ ಬಂದು ಬಲಹೀನ ದೇಹವನ್ನು ಸುತ್ತಿಕೊಂಡು ಅಡ್ಡವಾಗಿ ನಿಂತು, ಆಕೆಗಾಗಿ ತಾನು ವಿಧಿಸಿದ್ದ ದಂಡನೆಯನ್ನು ತನ್ನ ದೇಹದ ಮೇಲೆ ತೆಗೆದುಕೊಂಡು ಅನುಭವಿಸಿದನು.[150]

## ಹೊಗಳಿಕೊಳ್ಳುವಿಕೆಯು ಇಲ್ಲದೆ ಹೋಯಿತು (3:27)

ಹೊಗಳಿಕೊಳ್ಳುವಿಕೆಯು ಇಲ್ಲದೆ ಹೋಗಿದ್ದಕ್ಕೆ ತಾನು ಎಷ್ಟು ಸಂತೋಷಗೊಂಡಿದ್ದೇನೆಂದು Dwight Moody ಒಮ್ಮೆ ಹೇಳಿದನು:

> ಒಂದು ವೇಳೆ ಒಬ್ಬನು ಪರಲೋಕಕ್ಕೆ ಸ್ವದಾರಿಯನ್ನು ಕಂಡು ಕೊಂಡರೆ ಅದರ ಬಗ್ಗೆ ನೀವು ಕೇಳಿಸಿಕೊಳ್ಳುವದು ವಿರಳ .ಒಬ್ಬನು ಬೇರೆಯವರಿಗಿಂತ ಸ್ವಲ್ಪ ಮುಂದೆ ಹೋಗಿ ಕೆಲವು ಸಾವಿರ ಡಾಲರುಗಳನ್ನು ಕೂಡಿಸಿಟ್ಟುಕೊಳ್ಳಲು ಶಕ್ತನಾದರೆ, ಅವನು ತನ್ನ ಬಗ್ಗೆ ನಾನು ಸ್ವಂತಕಾಲಲ್ಲಿ ನಿಂತಿರುವವನೆಂದು ಬಡಾಯಿಕೊಚ್ಚಿಕೊಳ್ಳುವದನ್ನು ಕೇಳಬಹುದು. ನಾನು ಈ ರೀತಿಯ ಅನೇಕ ಸಂಭಾಷಣೆಗಳನ್ನು ಕೇಳಿ ಕೇಳಿ ಸುಸ್ತಾಗಿದ್ದೇನೆ. ನಿತ್ಯತ್ವದ್ದುದ್ದಕ್ಕೂ ಯಾವನೂ ತಾನು ಹೇಗೆ ಪರಲೋಕಕ್ಕೆ ಸ್ವದಾರಿಯನ್ನು ಏರ್ಪಡಿಸಿಕೊಂಡೆನೆಂಬದರ ಬಗ್ಗೆ ಹೊಗಳಿಕೊಳ್ಳುವದನ್ನು ಕೇಳುವದಕ್ಕೆ ಸಾಧ್ಯವೇ ಇಲ್ಲವೆಂಬದಕ್ಕಾಗಿ ನಾನು ಸಂತೋಷಪಡುತ್ತೇನೆ![151]

## ನಂಬಿಕೆಯಿಂದ ಮಾತ್ರವೇ ಅಲ್ಲ (3:28)

ರೋಮಾ 3:28 ರಲ್ಲಿಯೇ ಖ್ಯಾತ ಸುಧಾರಣಕಾರ Martin Luther (1483-1546) ತನ್ನ ಜರ್ಮನ್ ಭಾಷೆಯ ತರ್ಜುಮೆಯಲ್ಲಿ "ಮಾತ್ರವೇ" ಎಂಬುದನ್ನು ವಾಕ್ಯದಲ್ಲಿ ಸೇರ್ಪಡೆಗೊಳಿಸಿದನು, ಒಬ್ಬನು "ನಂಬಿಕೆಯಿಂದ *ಮಾತ್ರವೇ"* ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆಂದು ತಿರುಚಿ ಉಪದೇಶಸಿದನು.[152] Luther ಒಬ್ಬ ಪಾದ್ರಿಯಾಗಿದ್ದನು

ಮತ್ತು ರೋಮನ್ ಕ್ಯಾಥೋಲಿಕ್ ಚರ್ಚ್ ಬಗ್ಗೆ ಭ್ರಮನಿರಸನ ಗೊಂಡಿದ್ದನು. ಆತನು ತನಗೆ ಬೋಧಿಸಲ್ಪಟ್ಟ "ಕ್ರಿಯೆಗಳಿಂದ ರಕ್ಷಣೆ" ಎಂಬ ಉಪದೇಶಕ್ಕೆ ಸ್ವಲ್ಪ ಅತಿಯಾಗಿ ಪ್ರತಿಕ್ರಿಯಿಸುವವನಾಗಿ ಕ್ರಿಯೆಗಳನ್ನು ಒಟ್ಟಾರೆಯಾಗಿಯೇ ಅಳಿಸಿಹಾಕುವದಕ್ಕೆ ಪ್ರಯತ್ನಿಸಿದನು. ರೋಮಾ 3:28 ಕ್ಕೆ ಹೆಚ್ಚುವರಿಯಾಗಿ "ಮಾತ್ರವೇ" ಎಂದು ಸೇರಿಸಿದ್ದು ಅದನ್ನು ಯಾಕೋಬ 2:24ಕ್ಕೆ ತದ್ವಿರುದ್ಧಗೊಳಿಸಿತ್ತು, ಆದರೆ ಆ ಸಮಸ್ಯೆಯನ್ನು Luther ಯಾಕೋಬನ ಪುಸ್ತಕ ಯೋಗ್ಯವಲ್ಲದ್ದು, ಅದೊಂದು "ಕ್ಷುಲ್ಲಕ ಪತ್ರಿಕೆ" ಎಂದು ಘೋಷಿಸುವ ಮೂಲಕ "ಪರಿಹರಿಸಿದನು."[153]

ಎಷ್ಟು ವ್ಯಾಖ್ಯಾನಕಾರರು Lutherನ ಈ ಮೊಂಡು ಧೈರ್ಯದ ಸೇರ್ಪಡೆಗೊಳಿಸುವಿಕೆಯನ್ನು ಸಮರ್ಥಿಸುತ್ತಾರೆಂಬದು ನನಗೆ ಯಾವಾಗಲೂ ಆಶ್ಚರ್ಯವುಂಟುಮಾಡುತ್ತದೆ. ಹೇಗೂ, ನಾನು ಅಷ್ಟೊಂದು ಆಶ್ಚರ್ಯಪಡುವ ಅವಶ್ಯವಿರಲಿಲ್ಲವೆಂದು ನನಗನ್ನಿಸುತ್ತದೆ, ಯಾಕೆಂದರೆ "ನಂಬಿಕೆಯಿಂದ ಮಾತ್ರವೇ ರಕ್ಷಣೆ" ಎಂಬದು ದೀರ್ಘಕಾಲದ ಹಿಂದೆ "ಸುವಾರ್ತಿಕ ಕ್ರೈಸ್ತತ್ವ" ದ ಪ್ರಾಥಮಿಕ ತತ್ವವಾಗಿತ್ತು.

ಕ್ಯಾಥೋಲಿಕ್.ರಲ್ಲದ ಎಲ್ಲಾ ಕ್ರೈಸ್ತರು ಒಂದು ಶೋಷಣೆಯಿಂದ ಕೂಡಿದ ಧಾರ್ಮಿಕ ವ್ಯವಸ್ಥೆಯ ಸರಪಣಿಗಳನ್ನು ಮುರಿದದ್ದಕ್ಕಾಗಿ Lutherನಿಗೆ ಋಣಸ್ಥರಾಗಿದ್ದಾರೆ. Lutherನು ಬೈಬಲನ್ನು ಜರ್ಮನ್ ಭಾಷೆಯಲ್ಲಿ ಅನುವಾದಿಸಿದ್ದು ದೊಡ್ಡ ಸಾಧನೆ ಮತ್ತು ಸೇವೆಯಾಗಿರುತ್ತದೆ-ಆದರೆ ಆತನು "ಮಾತ್ರವೇ" ಎಂದು ಸೇರ್ಪಡೆಗೊಳಿಸಿದ್ದು ತಪ್ಪು ಎಂಬದನ್ನು ತಿಳಿಸಲು ನಾನು ಸಂಕೋಚಪಡುವದಿಲ್ಲ. ತನಗೆ ನಂಬಿಕೆಯಿಂದ ಮಾತ್ರವೇ ರಕ್ಷಣೆಯೆಂದು ನಂಬಿಕೆಯಿದೆ ಎಂದು ಹೇಳುವದಕ್ಕೆ ಇಚ್ಛೆ ಅವನಿಗಿದ್ದಿದ್ದರೆ ಅದನ್ನು ದಾರಾಳವಾಗಿ ಹೇಳಿರಬಹುದಿತ್ತು. ಅದನ್ನು ಪ್ರೇರಿತ ವಾಕ್ಯದಲ್ಲಿ ಸೇರ್ಪಡೆಗೊಳಿಸಿ ದೇವರೇ ಅದನ್ನು ಹೇಳಿದ್ದಾನೆಂದು ತೋರಿಸಲು ಪ್ರಯತ್ನಿಸುವದು ಸಂಪೂರ್ಣ ವ್ಯತಿರೀಕ್ತವಾದ ಸಂಗತಿ.

ಮೊಟ್ಟಮೊದಲು, Lutherನು ಮಾಡಿದ್ದು ತಪ್ಪು ಯಾಕೆಂದರೆ ದೇವರ ವಾಕ್ಯಕ್ಕೆ ಏನನ್ನಾದರೂ ಹೆಚ್ಚಾಗಿ ಸೇರಿಸುವದನ್ನು ಸತ್ಯವೇದವು ಕಠಿಣವಾಗಿ ಖಂಡಿಸುತ್ತದೆ (ನೋಡಿರಿ ಧರ್ಮೋಪದೇಶಕಾಂಡ 4:2; ಜ್ಞಾನೋಕ್ತಿ 30:6; ಪ್ರಕಟನೆ 22:18, 19). ಎರಡನೆಯದಾಗಿ, ಲೂಥರನು ತಪ್ಪು ಮಾಡಿದ್ದನು ಯಾಕೆಂದರೆ ಒಬ್ಬನು ಒಮ್ಮೆ ಸತ್ಯವೇದಕ್ಕೆ ಏನಾದರೂ ಸೇರಿಸಿಬಿಟ್ಟರೆ ಅದು ಎಲ್ಲೆಲ್ಲೋ ನಡಿಸುತ್ತದೆ ,ಅದಕ್ಕೆ ಅಂತ್ಯವೇ ಇರುವದಿಲ್ಲ. ಯಾವದನ್ನು ಮಾಡಬೇಕೆಂದು ಸತ್ಯವೇದವು ಹೇಳುತ್ತದೋ ಅದನ್ನು Lutherನ ಭಕ್ತರು ಅಪ್ರಾಮುಖ್ಯವೆಂದು ಭಾವಿಸಿದರೆ ಅವರು ಈ "ಮಾತ್ರವೇ" ಎಂಬದನ್ನು ಉಪಯೋಗಿಸಿಕೊಂಡು ಅದಕ್ಕೆ "ಮಹತ್ವದ್ದಲ್ಲ" ಎಂದು ಹಣೆ ಪಟ್ಟಿ ಕಟ್ಟಿ ಬಿಡುತ್ತಿದ್ದರು.

ನಾನು ವಾಸಿಸುವ ಸ್ವಂತ ಊರಿನಲ್ಲಿ, ರಕ್ಷಣೆಗೆ ಅಗತ್ಯವಾದ ದೀಕ್ಷಾಸ್ನಾನವನ್ನು ಅಳಿಸಿಹಾಕುವದಕ್ಕಾಗಿ ಈ "ಮಾತ್ರವೇ" ಮತ್ತು "ಕೇವಲ" ಎಂಬವುಗಳನ್ನು ಉಪಯೋಗಿಸಲಾಗಿರುತ್ತದೆ. ಕೆಲವರು ತೀರ್ಮಾನಕ್ಕೆ ಬಂದ ಪ್ರಕಾರವಾಗಿ, ಪೇತ್ರನು ಕೃಪೆಯ ಅರ್ಥವನ್ನು ಅರಿತುಕೊಂಡವನಾಗಿದ್ದರೆ, ಪಾಪಿಗಳು ಆತನಿಗೆ "ನಾವೇನು ಮಾಡಬೇಕು" ಎಂದು ಕೇಳಿದಾಗ ಆತನ ಉತ್ತರವು ವ್ಯತ್ಯಾಸವಾಗಿರುತ್ತಿತ್ತು (ಅಪೊಸ್ತಲರ ಕೃತ್ಯಗಳು 2:37). ಆತನು "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ

ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38) ಎಂದು ಹೇಳುವ ಬದಲಾಗಿ, ಆತನು "ರಕ್ಷಣೆಯು ನಂಬಿಕೆಯಿಂದ ಮಾತ್ರವೇ ಸಿಕ್ಕುತ್ತದೆ. ಯೇಸುವಿನಲ್ಲಿ ನಂಬಿಕೆಯಿಡಿರಷ್ಟೇ, ದೇವರ ಕ್ಷಮಾಪಣೆಯನ್ನು ಆನಂದಿಸಿರಿ" ಎಂದು ಹೇಳಿರಬೇಕಿತ್ತೆಂದು ಇವರು ನಂಬುತ್ತಾರೆ. ಪೌಲನು/ಸೌಲನು ಕರ್ತನಿಗೆ, "ಕರ್ತನೇ, ನಾನೇನು ಮಾಡಲಿ?" ಎಂದು ಕೇಳುವಂಥ ಈ ಸಂದರ್ಭವನ್ನು ಪರಿಗಣಿಸಿರಿ (ಅಪೊಸ್ತಲರ ಕೃತ್ಯಗಳು 22:10). ಒಂದು ವೇಳೆ ಪ್ರೇರಿತ ಬೋಧಕನಾದ ಅನನೀಯನು Lutherನ ವಿಚಾರವನ್ನೇ ಹೊಂದಿದವನಾಗಿದ್ದರೆ, ಆತನು "ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" ಎಂದು ಹೇಳಿರುತ್ತಿದ್ದಿಲ್ಲ (ಅಪೊಸ್ತಲರ ಕೃತ್ಯಗಳು 22:16). ಬದಲಾಗಿ, ಆತನು ಪೌಲನಿಗೆ "ಯೇಸುವಿನಲ್ಲಿ ನಿನ್ನ ನಂಬಿಕೆಯಿಡು" ಎಂದಷ್ಟೇ ಬೇಡಿಕೊಂಡಿರಬಹುದಿತ್ತು.

J. W. McGarvey ಹೀಗೆ ಬರೆದನು,

> ರೋಮನ್ ಕ್ಯಾಥೋಲಿಕನ ತಪ್ಪಿನ ವಿರುದ್ಧ (ಮನುಷ್ಯರು ಕ್ರಿಯೆಗಳಿಂದ ನೀತಿವಂತರೆಂದು ನಿರ್ಣಯಿಸ ಲ್ಪಡುವರು) ಹೋರಾಡಲು ಹೋಗಿ, Luther ಮತ್ತೊಂದು ತಪ್ಪಿನಲ್ಲಿ ಬಿದ್ದನು, ಯಾಕೆಂದರೆ ನಂಬಿಕೆಯು ಹೇಗೋ ಪಶ್ಚಾತ್ತಾಪ ಸಹ ನೀತಿವಂತರೆಂಬ ನಿರ್ಣಯಕ್ಕೆ ದಾರಿಯಾಗಿರುತ್ತದೆ, ಅವೆರಡರಲ್ಲಿಯೂ *ಅರ್ಹತೆ* ಎಂಬುದಿಲ್ಲ. ನಮ್ಮನ್ನು ನೀತಿವಂತರೆಂಬ ನಿರ್ಣಯಕ್ಕೆ ಅರ್ಹಗೊಳಿಸುವದು ಯಾವದೆಂದರೆ *ಪಾಪ ಪರಿಹಾರ ಮಾಡುವ ಕ್ರಿಸ್ತನ ರಕ್ತ,* ಮತ್ತು ನಂಬಿಕೆ, ಪಶ್ಚಾತ್ತಾಪ, ದೀಕ್ಷಾಸ್ನಾನ ಇತ್ಯಾದಿ ಮೂಲಕವಾಗಿದೆ, ನಾವು ಕ್ರಿಸ್ತನ ರಕ್ತವನ್ನು ಸ್ವಂತವಾಗಿಸಿಕೊಳ್ಳುತ್ತೇವೆ. ನಾವು ಮಾಡಬೇಕಾಗಿರುವ ಈ ಕ್ರಿಯೆಗಳು, ನಮ್ಮನ್ನು ನೀತಿವಂತರೆಂಬ ನಿರ್ಣಯಕ್ಕೆ *ಯೋಗ್ಯರನ್ನಾಗಿಸುವದಿಲ್ಲ*, ಆದರೆ ಅವುಗಳು ಕ್ರಿಸ್ತನಿಂದ ನೇಮಿಸಲ್ಪಟ್ಟಿರುವ *ಶರತ್ತುಗಳಾಗಿವೆ*, ಅವುಗಳ ಆಧಾರದಲ್ಲಿ ತನ್ನ ರಕ್ತದ ಪ್ರಯೋಜನವನ್ನು ನಮ್ಮಲ್ಲಿ ವಿನಿಯೋಗಿಸುತ್ತಾನೆ, ಅಂದರೆ ನೀತಿವಂತರೆಂದು ನಿರ್ಣಯಿಸುತ್ತಾನೆ.[154]

ನಾನು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದಲ್ಲಿ ನಂಬುತ್ತೇನೆ. ನಾನು ನಂಬಿಕೆ ಆಧಾರದಲ್ಲಿ ರಕ್ಷಿಸಲ್ಪಟ್ಟೆನು ಹೊರತು ಪರಿಪೂರ್ಣವಾದ ವಿಧೇಯತೆಯ ಆಧಾರದಲ್ಲಿ ಅಲ್ಲ ಎಂಬದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ. ಅದೇ ವೇಳೆಯಲ್ಲಿ, ಕರ್ತನಿಂದ ವಿಧಿಸಲ್ಪಟ್ಟ ಯಾವದೇ ಶರತ್ತುಗಳನ್ನು ಪ್ರಶ್ನಿಸುವದಕ್ಕೆ ಅಥವಾ ಹಿಂದೆಳೆಯುವದಕ್ಕೆ ನನಗೆ ಯಾವ ಹಕ್ಕು ಸಹ ಇರುವದಿಲ್ಲ. ಹಾಗೆ ಮಾಡಿದರೆ ಅದು ನಂಬಿಕೆಯನ್ನು ವ್ಯಕ್ತಪಡಿಸುವದಾಗುವದಿಲ್ಲ, ಬದಲಾಗಿ ವಿಶ್ವಾಸದ ಕೊರತೆಯಾಗಿರುತ್ತದೆ.

## ಅಡಿ ಟಿಪ್ಪಣಿಗಳು

[1]ಮುಂದಿನ ವಿಭಾಗವು, 3:9-20, ಹೆಚ್ಚಾಗಿ ಸಾಮಾನ್ಯ ಸ್ವಭಾವದ್ದಾಗಿದೆ (3:9b, 19b) ಆದರೆ ಈಗಲೂ ಯೆಹೂದ್ಯರ ಮೇಲೆಯೇ ವಿಶೇಷ ಗಮನವನ್ನು ಹೊಂದಿರುತ್ತದೆ (3:9a, 19a, 20a). [2]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 103. [3]*The Analytical Greek Lexicon* (London: Samuel Bagster & Sons, 1971), 317. [4]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 15. [5]See John MacArthur, Jr., *Romans 1—8*, The MacArthur New Testament Commentary (Chicago: Moody Press, 1991), 168; Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 153. [6]MacArthur, 169. [7]James R. Edwards, *Romans*, New International Biblical Commentary (Peabody, Mass.: Hendrickson Publishers, 1992), 83. [8]James D. Smart, *Doorway to a New Age: A Study of Paul's Letter to the Romans* (Philadelphia: The Westminster Press, 1972), 56. [9]*The Analytical Greek Lexicon*, 314. [10]Edwards, 83.

[11]3:31 ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ. [12]"ಏನು?" ಎಂಬುದು ಮೂಲ ಪ್ರತಿಯಲ್ಲಿರುವದಿಲ್ಲ. ಅದು ಅನುವಾದಕನಿಂದ ಒದಗಿಸಲ್ಪಟ್ಟಿದ್ದು ಯಾಕೆಂದರೆ ಈ ರೀತಿಯ ವಾಕ್ಯಸಾಲಿಗೆ ಗ್ರೀPಿನಲ್ಲಿ ಭಾವಿಸಲ್ಪಟ್ಟ ಉತ್ತರವಿರುತ್ತದೆ. [13]ಮುಂಚಿನ ಪದಾಭ್ಯಾಸದಲ್ಲಿ, *pistis* ("ನಂಬಿಕೆ") ಕೆಲವು ಸಾರಿ "ನಂಬಿಗಸ್ತ" (ನಂಬಿಕೆ ಭರಿತ) ಎಂದು ಅನುವಾದಿಸಲ್ಪಟ್ಟಿದೆ ಎಂಬದನ್ನು ಗಮನಿಸಿದೆವು. [14]Edwards, 88. [15]"ದೇವರು" ಎಂಬದಕ್ಕೆ ಪದವು ಗ್ರೀಕ್ ಪದವು ಮೂಲ ಪ್ರತಿಯಲ್ಲಿ ಕಂಡುಬರುವದಿಲ್ಲ. ದಶಾಜ್ಞೆಗಳೊಂದಿಗೆ ಬೆಳೆದ ವ್ಯಕ್ತಿಯಾಗಿ, ಪೌಲನು ದೇವರ ಹೆಸರನ್ನು ಈ ರೀತಿಯ ಮಾತುಗಳಲ್ಲಿ ಉಪಯೋಗಿಸಿರಲಿಕ್ಕೆ ಸಾಧ್ಯವಿಲ್ಲ. [16]ಕೀರ್ತನೆ 51 ಕ್ಕೆ ಪ್ರಾಚೀನ ಮೂಲಪ್ರತಿಗಳಲ್ಲಿ ಈ ಬಿರುದು ಕೊಟ್ಟಿತ್ತವೆ: "ದಾವೀದನ ಕೀರ್ತನೆ, ಆತನು ಬತ್ಷೆಬೆಳೊಂದಿಗೆ ಹೋದ ನಂತರದಲ್ಲಿ ಪ್ರವಾದಿಯಾದ ನಾತಾನನು ದಾವೀದನ ಬಳಿಗೆ ಬಂದನು." ಕಥೆಯು 2 ಸಮುವೇಲ 12:1-15 ರಲ್ಲಿ ಕಂಡುಬರುತ್ತದೆ. [17]Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 103. [18]"ಅನ್ಯಾಯಸ್ಥನೇನು?" ಎಂಬುದು ಗ್ರೀಕ್ ಪ್ರತಿಯಲ್ಲಿರುವದಿಲ್ಲ, ಆದರೆ ಗ್ರೀಕ್ ಪದವಿನ್ಯಾಸದಲ್ಲಿ ಈ ಮಾತುಗಳು ಬರುವ ಅರ್ಥವಿರುತ್ತದೆ. [19]Morris, 161. [20]Ibid., 157–58.

[21]John Calvin, *The Epistle of Paul the Apostle to the Romans*, trans. and ed. John Owen (Grand Rapids, Mich.: Wm. B. Eerdmans Publishing Co., 1948), 116. [22]Edwards, 85. [23]Morris, 166. [24]ಈ ಹೋಲಿಕೆಯು ಗ್ರೀಕ್ ಭಾಷೆಯಲ್ಲಿ ಹೆಚ್ಚು ಉಚ್ಚರಿಸಲ್ಪಟ್ಟಿರುತ್ತದೆ. ಎರಡೂ ಪ್ರಶ್ನೆಗಳು ಸಹ τί οὖν (*ti oun, "ಹಾಗಾದರೆ ಏನು"*). [25]"ನಾವು" ಎಂಬದು ಪೌಲನು ತನ್ನ ಹಾಗೂ ಇತರ ಕ್ರೈಸ್ತರನ್ನು ಸೂಚಿಸಿ ಮಾತಾಡಿದನೆಂದನ್ನು ತೋರಿಸುತ್ತದೆಂದು ಕೆಲವು ಬರಹಗಾರರು ನಂಬುತ್ತಾರೆ, ಆದರೆ ಸನ್ನಿವೇಶವು ತೋರಿಸುವದೇನೆಂದರೆ ಪೌಲನು ತನ್ನನ್ನು ತನ್ನ ಸಹ ಯೆಹೂದ್ಯರೊಂದಿಗೆ ಗುರುತಿಸಿಕೊಳ್ಳುತ್ತಿದ್ದಾನೆ ಎಂಬದು (9:3). ಏನೇ ಇದ್ದರೂ, ಮುಕ್ತಾಯವು ಮಾತ್ರ ಬದಲಾಗುವದಿಲ್ಲ: ಎಲ್ಲರೂ "ಪಾಪಕ್ಕೆ ಒಳಗಾದವರು." [26]*The Analytical Greek Lexicon* (London: Samuel Bagster & Sons, 1971), 10, 341. [27]MacArthur, 180. [28]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 1036. [29]ರೋಮಾ 3:10, 11 ವಚನಗಳು ಮೂರನೆಯ ಮೂಲದಿಂದ-ಪ್ರಸಂಗಿ 7:20-ಬಂದವುಗಳೆಂದು ಕೆಲವರು ಭಾವಿಸುತ್ತಾರೆ. [30]Alfred Edersheim, *The Life and Times of Jesus the Messiah*, new updated ed. (Peabody, Mass.: Hendrickson Publishers, 1993), 311.

[31]ಕೀರ್ತನೆ 53:1-3 ಸಹ ಹೆಚ್ಚುಕಮ್ಮಿ ಅದೇ ರೀತಿ ಸಾಗುತ್ತದೆ. [32]ಹೊರತಾಗಿರುವವರೆಂದರೆ ಕೂಸುಗಳು ಮತ್ತು ಮಾನಸಿಕ ಸಾಮರ್ಥ್ಯವು ಕುಂದಿಹೋಗಿರುವವರು ಮಾತ್ರವೇ. [33]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 56. [34]"ಧರ್ಮಶಾಸ್ತ್ರ" ಕೇವಲ ಥೋರಾ (ಹಳೇ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು) ವನ್ನು ಮಾತ್ರ ಸೂಚಿಸುತ್ತದೆಂದು ಕೆಲವರು ವಾದಿಸಬಹುದು; ಆದರೆ ನಮ್ಮ ವಾಕ್ಯಭಾಗದಲ್ಲಿ ಪೌಲನು ಕೀರ್ತನೆ ಹಾಗೂ ಯೆಶಾಯನ ಪುಸ್ತಕಗಳಿಂದ ಉಲ್ಲೇಖಿಸುತ್ತಾನೆ, ಅವುಗಳನ್ನು ಆಮೇಲೆ ಆತನು "ಧರ್ಮಶಾಸ್ತ್ರ" ಎಂದು ಸೂಚಿಸುತ್ತಾನೆ. ಆದುದರಿಂದ,

"ಧರ್ಮಶಾಸ್ತ್ರ" ಎಂಬದು ಥೋರಾಕ್ಕಿಂತ ಹೆಚ್ಚಿನದನ್ನು ಸೂಚಿಸಬಹುದಾಗಿದೆ. [35]"ಒಳಗಾದವರಿಗೇ" ಎಂಬ ಪದದ ಉಪಯೋಗದ ಬಗ್ಗೆ, 3:9 ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ. [36]C. E. B. Cranfield, *Romans: A Shorter Commentary* (Grand Rapids, Mich.: Wm. B. Eerdmans Publishing Co., 1985), 67. [37]"ಮಾಂಸ" (σάρξ, *sarx*) ವನ್ನು ವ್ಯಾಖ್ಯಾನದಲ್ಲಿ ಮುಂದುವರಿದಂತೆ ತರ್ಕಿಸಲಾಗುತ್ತದೆ, ಇಲ್ಲಿ ಇದು ಒಬ್ಬ "ವ್ಯಕ್ತಿ" ಯನ್ನು ಸೂಚಿಸುತ್ತದೆ. [38]ಅಕ್ಷರಶಃ, 20 ನೇ ವಚನವು "ಧರ್ಮಶಾಸ್ತ್ರದ ಮೂಲಕ" ಎಂದಿರುತ್ತದೆ. [39]ಇದು "ತಿಳುವಳಿಕೆ" (γνῶσις, *gnōsis*) ಎಂಬದರ ಸಾಮಾನ್ಯವಾದ ಪದವಲ್ಲ, ಆದರೆ ಅದರ ಹೆಚ್ಚು ಬಲಗೊಂಡ ರೂಪವಾಗಿರುತ್ತದೆ (ἐπίγνῶσις, *epignōsis*) ಅದರರ್ಥವು "ಬಹಳ ಪೂರ್ಣವಾಗಿ ತಿಳಿದಿರುವದು" ಮತ್ತು "ಮುಂದುವರೆದ ತಿಳುವಳಿಕೆ" ಎಂಬ ಅರ್ಥವನ್ನು ಕೊಡುತ್ತದೆ (Vine, 347). [40]ಒಂದು "ತೂಗುಗುಂಡು" ಎಂಬುದು ಒಂದು ದಾರದ ಕೊನೆಯಲ್ಲಿ ಭಾರವಾದ ಗುಂಡು ಇರುತ್ತದೆ (ಲಂಬಕ ಸೂತ್ರ). ಒಂದು ಕಟ್ಟಡ ಕಟ್ಟುವಾಗ ಗೋಡೆಯ ಬದಿಯಲ್ಲಿ ಹಿಡಿಯಲ್ಪಟ್ಟು ಅದು ನೇರವಾಗಿದೆಯೋ ಎಂದು ಪರೀಕ್ಷಿಸಲಾಗುತ್ತದೆ.

[41]D. Martyn Lloyd-Jones, *Romans*: *The Righteous Judgment of God (2:1—3:20)* (Grand Rapids, Mich.: Zondervan Publishing House, 1989), 198. [42]Rogers, 58. [43]R. C. Bell, *Studies in Romans* (Austin, Tex.: Firm Foundation Publishing House, 1957), 29. [44]Morris, 177. [45]See KJV. ಓದುವದಕ್ಕೆ ಸುಲಭವಾಗಲೆಂದು ಬಹಳಷ್ಟು ಆಧುನಿಕ ತರ್ಜುಮೆಗಳು ವಾಕ್ಯವನ್ನು ಹಲವಾರು ವಾಕ್ಯಗಳಾಗಿ ವಿಭಾಗಿಸುತ್ತವೆ. NASB ತರ್ಜುಮೆಯು ಎರಡು ವಾಕ್ಯಗಳನ್ನು ಮಾಡಿರುತ್ತದೆ. [46]Morris, 173. [47]Moo, 125. [48]Edwards, 97. [49]ಸುವಾರ್ತೆಯ ಸಾರುವಿಕೆಯಲ್ಲಿ ದೇವರ ನೀತಿಯ ಪ್ರಕಟವಾಯಿತೆಂಬದನ್ನು ಸೂಚಿಸುವಾಗ ರೋಮಾ 1:17ವು *ವರ್ತಮಾನಕಾಲ*ವನ್ನು ("ತೋರಿಬರುತ್ತದೆ") ಎಂದು ಉಪಯೋಗಿಸುತ್ತದೆ. ಯೇಸುವಿನ ಮರಣದಲ್ಲಿ (ಗತಿಸಿದ ಘಟನೆ) ದೇವರ ನೀತಿಯ ತೋರ್ಪಡುವಿಕೆಯ ಬಗ್ಗೆ ಸೂಚಿಸುತ್ತಾ ರೋಮಾ 3:21 ರಲ್ಲಿ ಭೂತಕಾಲವನ್ನು ("ಪ್ರಟಕವಾಗಿದೆ") ಉಪಯೋಗಿಸಲಾಗಿದೆ. [50]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 109 (emphasis added).

[51]Vine, 390. [52]The Greek text has the words for "Jesus Christ" in the genitive case, which can be translated either "of Jesus Christ" (subjective) or "in Jesus Christ" (objective). In this passage, it may be either subjective or objective. [53]Morris, 175–76. [54]J. D. Thomas, *Romans*, The Living Word (Austin, Tex.: R. B. Sweet Co., 1965), 27. [55]*The Analytical Greek Lexicon*, 17. [56]Vine, 576. [57]D. Stuart Briscoe, *Romans*, The Communicator's Commentary (Waco, Tex.: Word Books, 1982), 89. [58]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 478. [59]*American Heritage Dictionary*, 4th ed. (2002), s.v. "transgress." [60]*The Analytical Greek Lexicon*, 420.

[61]Briscoe, 89. [62]G. Schrenk, "*dikaióō*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 175. [63]Stottನು ದೇವರು ನಮ್ಮನ್ನು ನಿಜವಾಗಿಯೂ ನೀತಿವಂತರಾಗಿ ಮಾಡುವನೋ (ಕ್ಯಾಥೊಲಿಕ್ ನಿಲುವು) ಅಥವಾ ಆತನು ನಮ್ಮನ್ನು ನೀತಿವಂತರೆಂದು ಎಣಿಸುತ್ತಾನೋ (ಸುಧಾರಿತ ನಿಲುವು) ಎಂಬ ಕುರಿತ 16ನೇ ಶತಮಾನದ ವಾಗ್ವಾದದ ಬಗ್ಗೆ ಹೇಳಿದರು (Stott, 127). [64]Morris, 178. [65]J. D. Thomas, Class Notes, *Romans*, Abilene Christian College (1955). [66]H. Conzelmann, "*cháris*," in *Theological Dictionary of the New Testament*, 1298–1301. [67]Ibid., 1304 (emphasis added). [68]MacArthur, 208–9. [69]Quoted in Bell, 31. [70]Metonymy (ಮೆಟನೊಮಿ) ಎಂಬುದು ಸಾದೃಶ್ಯ ಪದವಾಗಿದೆ, ಅದರಲ್ಲಿ ಒಂದು ಸಂಗತಿಯು ನಿಕಟವಾಗಿ ಸಂಬಂಧಿಸಿದ ಇನ್ನೊಂದರ ಸ್ಥಾನವನ್ನು ತೆಗೆದುಕೊಳ್ಳುತ್ತದೆ. ಉದಾಹರಣೆಗೆ, ಅಮೆರಿಕದಲ್ಲಿ, "the White House" ಒಂದು ಕಾರ್ಯವನ್ನು ಮಾಡಿತು ಎಂದು ಒಬ್ಬನು ಹೇಳಿದರೆ, ವಾಸ್ತವದಲ್ಲಿ ಆತನು ಅಧ್ಯಕ್ಷರನ್ನು ಸೂಚಿಸಿ ಆ ಮಾತನ್ನು ಹೇಳಿದನು.

[71]John A. Mackay, *God's Order: The Ephesian Letter and This Present Time* (New York: Macmillan Co., 1953), 97. [72]Vine, 564. [73]Edwards, 104.[74]"ಆತನ ರಕ್ತದಲ್ಲಿ" ಎಂಬದನ್ನು

"ಪ್ರಾಯಶ್ಚಿತ್ತದ" ಬಳಿಕ ಇರಿಸಬೇಕೋ ಅಥವಾ "ನಂಬಿಕೆ" ನಂತರ ಇರಿಸಬೇಕೋ ಎಂಬ ಬಗ್ಗೆ ಪ್ರಶ್ನೆಯಿರುತ್ತದೆ (ನೋಡಿರಿ KJV). ಯಾವ ಸ್ಥಾನದಲ್ಲಿರಿಸಿದರೂ ಅದರ ಫಲಿತವಾಗಿ ಬರುವ ಹೇಳಿಕೆಯು ಸತ್ಯವೇದದ ಬೇರೆಡೆಗಳಲ್ಲಿರುವ ಉಪದೇಶಕ್ಕೆ ತಕ್ಕದ್ದಾಗಿದೆ, ಆದ್ದರಿಂದ ಆ ಪ್ರಶ್ನೆಯ ಬಗ್ಗೆ ನಾವು ಚಿಂತಿಸಬೇಕಿಲ್ಲ. [75]ಈ ವಾಕ್ಯಭಾಗಗಳು ರೋಮಾ 3:25 ರಲ್ಲಿ ಅನುವಾದಿಸಲ್ಪಟ್ಟಿರುವ "ಪ್ರಾಯಶ್ಚಿತ್ತ" ಎಂಬದಕ್ಕೆ ಗ್ರೀಕ್ ನಲ್ಲಿ ನಿಖರವಾಗಿ ಅದೇ ಪದವನ್ನು ಉಪಯೋಗಿಸುವದಿಲ್ಲ, ಆದರೆ ಅವುಗಳು ಒಂದೇ ಕುಟುಂಬಕ್ಕೆ ಸೇರಿದ ಪದಗಳನ್ನು ಉಪಯೋಗಿಸುತ್ತವೆ. [76]ಒಬ್ಬನು ಹೊಸ ಉದ್ಯಮ ಕ್ಷೇತ್ರವನ್ನು ಪ್ರವೇಶಿಸುವಾಗ, ಆತನು ಕೆಲವು ವಿಶಿಷ್ಟ ಪದಗಳನ್ನು ಕಲಿಯಬೇಕಾಗುತ್ತದೆ. ಇವುಗಳನ್ನು ಯೋಚಿಸಿರಿ . . . ಓದುವಿಕೆ. . .ಅಥವಾ ಕೃಷಿ. . .ಅಥವಾ ಕಾರು ಚಲಾಯಿಸು . . . ಅಥವಾ ಕಂಪ್ಯೂಟರ್ ಉಪಯೋಗ. ಧರ್ಮದ ವಿಷಯದಲ್ಲಿ ಸಹ ಅದು ಅಷ್ಟೇ ಸತ್ಯ. [77]*American Heritage Dictionary*, 4th ed. (2002), s.v. "propitiation." [78]F. Büschel, "*hilastērion*," in *Theological Dictionary of the New Testament*, 364. [79]That question is discussed in Morris, 181–82; Stott, 113–14. [80]Moo, 133.

[81]F. F. Bruce, *The Letter of Paul to the Romans*, 2d ed. The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 100. [82]Stott, 115. [83]Ibid. [84]Vine, 153. [85]ಗ್ರೀಕ್ ಪ್ರತಿಯಲ್ಲಿ, ಅನುವಾದಿಸಲ್ಪಟ್ಟ "ದೇವರು . . . ಸಹಿಸಿಕೊಂಡಿರಲಾಗಿ" ಎಂಬ ಮಾತುಗಳು 26ನೇ ವಚನದ ಆರಂಭದಲ್ಲಿರುತ್ತವೆ, ಆದ್ದರಿಂದ NASB ಯು ತರ್ಜುಮೆಗಾರರು ಆ ಮಾತುಗಳನ್ನು 25ನೇ ವಚನದಲ್ಲಿ ಸೇರ್ಪಡೆಗೊಳಿಸಿದ್ದಾರೆ. [86]"ಹಿಂದಿನ ಕಾಲದಲ್ಲಿ ಮಾಡಿದ ಪಾಪಗಳು" ಎಂಬುದು ವ್ಯಕ್ತಿಗಳು ಕ್ರೈಸ್ತರಾಗುವದಕ್ಕೆ ಮುಂಚೆ ಮಾಡಿದ ಪಾಪಗಳನ್ನು ಸೂಚಿಸುತ್ತದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಹೇಗೂ, ಈ ವಾಕ್ಯಭಾಗದಲ್ಲಿ, ವಿರುದ್ಧ ಹೋಲಿಕೆಯು *ಆಗ* (ಕ್ರಿಸ್ತನಿಗೆ ಮುಂಚೆ) ಮತ್ತು *ಈಗ* (ಕ್ರಿಸ್ತನು ಬಂದ ಬಳಿಕ) ಎಂಬದರ ನಡುವೆ ಆಗಿರುತ್ತದೆಂದು ತೋರುತ್ತದೆ. [87]Briscoe, 94–95. [88]Quoted in William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 59. [89]Edwards, 106. [90]MacArthur, 218.

[91]Ibid., 205. [92]*American Heritage Dictionary*, 4th ed. (2002), s.v. "boast." [93]Adapted from William Hendriksen, *Exposition of Paul's Epistle to the Romans*, New Testament Commentary (Grand Rapids, Mich.: Baker Book House, 1981), 135. [94]These expressions are from MacArthur, 220. [95]Jim McGuiggan, *The Book of Romans*, Looking Into The Bible Series(Lubbock, Tex.: Montex Publishing Co., 1982), 137. [96]Adapted from Hendriksen, 135. [97]This is an illustration found in many books, including Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 524. [98]ಪೌಲನು ಇಲ್ಲಿ ಎಲ್ಲಾ ಪ್ರೇರಿತ ಲೇಖಕರು ಹಾಗೂ ಬೋಧಕರನ್ನು ಸೂಚಿಸುವದಕ್ಕಾಗಿ "ನಾವು" ಎಂದು ಉಪಯೋಗಿಸಿರಬಹುದಾಗಿದೆ-ಅಥವಾ ಆತನು 3:8ರಲ್ಲಿ ಮಾಡಿದ ಹಾಗೆಯೇ, ತನಗೆ ಮಾತ್ರ ಸೂಚಿಸಿಕೊಳ್ಳಲು "ನಾವು" ಎಂಬದನ್ನು ಸಂಪಾದಕೀಯ ಅರ್ಥದಲ್ಲಿ ಉಪಯೋಗಿಸಿರಬಹುದಾಗಿದೆ. [99]"ನಿಶ್ಚಯಮಾಡಿಕೊಂಡಿದ್ದೇವೆ" ಎಂಬುದು λογίζομαι (*logizomai*) ಎಂಬದರಿಂದ ಅನುವಾದಿಸಲ್ಪ ಟ್ಟಿದೆ, ಅದರರ್ಥವು "ಲೆಕ್ಕಿಸು, ಎಣಿಸು" ಎಂದಾಗಿರುತ್ತದೆ (*The Analytical Greek Lexicon*, 249). ಇದು ಅಧ್ಯಾಯ 4ರಲ್ಲಿ ಮುಖ್ಯ ಪದವಾಗಿದೆ;ನಾವು ಅದನ್ನು ಆ ಸನ್ನಿವೇಶದಲ್ಲಿ ಚರ್ಚಿಸಲಿದ್ದೇವೆ. [100]Ibid., 440.

[101]Edward Mote, "My Hope Is Built on Nothing Less," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [102]"Monotheism" ಏಕದೇವಾರಾದನೆ ಎಂಬುದು ಸೂಚಿಸುವ ದೇನೆಂದರೆ ಒಬ್ಬ ದೇವರು ಮಾತ್ರ ಇದ್ದಾನೆ: "ಒಬ್ಬನೇ" ಅಥವಾ "ಒಬ್ಬ" (μόνος, *monos*) ಜೊತೆಗೆ "ದೇವರು" (θεός, *theos*). [103]"ಶೇಮಾ" ಎಂಬುದು ಇಬ್ರಿಯ ಪದವಾಗಿದ್ದು "ಕೇಳು" (שְׁמַע ಶೇಮಾ) ಎಂದಾಗಿರುತ್ತದೆ, ಈ ಪದದಿಂದಲೇ ಧರ್ಮೋಪದೇಶಕಾಂಡ 6:4 ಆರಂಭಗೊಳ್ಳುತ್ತದೆ. [104]ಮೂಲ ಪ್ರತಿಯಲ್ಲಿ ಅಕ್ಷರಶಃ "ಸುನ್ನತಿ" ಮತ್ತು "ಸುನ್ನತಿಯಿಲ್ಲದ" ಎಂದಿರುತ್ತದೆ (ನೋಡಿರಿ KJV). [105]ವಾಕ್ಯಭಾಗವು ಹೇಳುವದೇನೆಂದರೆ ಯೆಹೂದ್ಯರು "ನಂಬಿಕೆಯಿಂದ [ἐκ, *ek*] ನೀತಿವಂತರೆಂದು ನಿರ್ಣಯಿಸಲ್ಪಟ್ಟರೆ," ಅನ್ಯಜನರು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದು "ನಂಬಿಕೆಯ ಮೂಲಕ [διά, *dia*]." ಕೆಲವರು ಗ್ರೀಕ್ ನ ಎರಡು ಬೇರೆ ಬೇರೆ ಉಪಸರ್ಗಗಳ ಉಪಯೋಗಿಸಲ್ಪಟ್ಟಿದ್ದರ ಮೇಲೆ ಮಹತ್ವವನ್ನು ಕೊಡುತ್ತಾರೆ, ಆದರೆ ಪೌಲನು ಬಹುಶಃ ವೈವಿಧ್ಯತೆಗಾಗಿ ಸಮಾನಾರ್ಥದ ಪದಗಳನ್ನು ಉಪಯೋಗಿಸುತ್ತಿದ್ದಾನೆ ( ಬಹಳಷ್ಟು ಲೇಖಕರು ಅದನ್ನೇ ಮಾಡುತ್ತಾರೆ). [106]Bruce, *Romans*, 95. [107]Ibid., 95–96. [108]N. Tom

Wright, *New Tasks for a Renewed Church* (London: Hodder and Stoughton, 1992), 168. [109]Adapted from Halford E. Luccock, *Preaching Values in the Epistles of Paul*, vol. 1, *Romans and First Corinthians* (New York: Harper & Brothers, 1959), 37–38. [110]ಯೋಹಾನನ ಪತ್ರಿಕೆಗಳಲ್ಲಿ, ಆತನು ಬಯಲಿಗೇಳೆಯುತ್ತಿದ್ದ ಒಂದು ತಪ್ಪು ಯಾವದೆಂದರೆ ಧರ್ಮಶಾಸ್ತ್ರ-ವಿರೋಧಿತನ (ನೋಡಿರಿ, ಉದಾಹರಣೆ, 1 ಯೋಹಾನ 3:4, 10; 5:2, 3).

[111]3:8 ಮತ್ತು 3:28 ರಲ್ಲಿರುವ ಪ್ರಕಾರ, ಪೌಲನು "ಸಂಪಾದಕೀಯ" ಅರ್ಥದಲ್ಲಿ "ನಾವು" ಎಂದು ಬಹುವಚನವನ್ನು ಉಪಯೋಗಿಸುತ್ತಿರಬಹುದು. [112]Vine, 3. [113]Bauer, 525. [114]Vine, 207. [115]Barclayಯ ತರ್ಜುಮೆಯಲ್ಲಿ "ಹಾಗಾದರೆ ನಾವು ನಂಬಿಕೆಯ ಮೂಲಕ ಧರ್ಮಶಾಸ್ತ್ರವನ್ನು ಸಂಪೂರ್ಣ ರದ್ದುಗೊಳಿಸುತ್ತೇವೋ?" ಎಂದಿರುತ್ತದೆ (Barclay, 60). [116]Adapted from McGuiggan, 139. [117]ಆತನು ರೋಮಾಪುರ ಪತ್ರಿಕೆಯಲ್ಲಿ ವಿಷಯದ ಬಗ್ಗೆ ನೇರವಾಗಿ ಮಾತಾಡದಿದ್ದರೂ ಅದರ ಕುರಿತ ತನ್ನ ಆಲೋಚನೆಗಳೇನೆಂಬ ಬಗ್ಗೆ ಬಲವಾದ ಸೂಚನೆಗಳನ್ನಂತೂ ನೀಡಿದನು. ಅದನ್ನು ನಾವು 7:1-6 ರ ಮೇಲಿನ ನಮ್ಮ ಚರ್ಚೆಯಲ್ಲಿ ಕಲಿಯಲಿದ್ದೇವ. [118]Adapted from Stott, 121. [119]H. Kleinknecht, "nómos," in *Theological Dictionary of the New Testament*, 646. [120]Vine, 354.

[121]*American Heritage Dictionary*, 4th ed. (2002), s.v. "law." [122]Moo, 87. [123]Thomas, *Romans*, 48. [124]ಈ ಐದು ಪುಸ್ತಕಗಳು "The Books of Law" or "The Pentateuch" ಎಂದು ಕರೆಯಲ್ಪಟ್ಟಿವ. [125]Vine, 354–55. [126]Bauer, 677. [127]Vine, 355. [128]W. Gutbrod, "*nómos*," in *Theological Dictionary of the New Testament*, 652. [129]Bruce, *Romans*, 51. [130]Adapted from MacArthur, 187.

[131]Charles R. Swindoll, *Coming to Terms with Sin: A Study of Romans 1—5* (Anaheim, Calif.: Insight for Living, 1999), 44. [132]Bert Kalmar, "Three Little Words," © 1930, Warner Bros.; © 1958, Edwin H. Morris & Co., MPL Communications. [133]"The Center of God's Love" in David Roper, *Jesus Christ and Him Crucified* ಎಂಬದರಲ್ಲಿ ಹೆಚ್ಚು ಸವಿಸ್ತಾರವಾದ ಚರ್ಚೆಯನ್ನು ಮಾಡಲಾಗಿದೆ (Arvada, Colo.: Christian Communications, 1976). [134]D. Martyn Lloyd-Jones, *Romans: Atonement and Justification (3:20—4:25)* (London: Banner of Truth Trust, 1970), 25. [135]See 6:21, 22; 7:5, 6; 16:25–27; Gal. 4:8, 9; Eph. 5:8; Col. 1:21, 22 ["yet . . . now" ]; 3:7, 8; Heb. 12:26; 1 Pet. 2:10; 2:25. [136]Moo, 135. [137]A. M. Toplady, "Rock of Ages," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [138]Edwards, 102. [139]Adapted from John T. Carroll and James R. Carroll, *Preaching the Hard Sayings of Jesus* (Peabody, Mass.: Hendrickson Publishers, 1996), 17. [140]Paul Lee Tan, *Encyclopedia of 7,700 Illustrations* (Rockville, Maryland: Assurance Publishers, 1979), 1287.

[141]Wiersbe, 523. [142]Jimmy Allen, *Survey of Romans*, 7th ed. (Searcy, Ark.: By the author, 1994), 55. [143]Philip Yancey, *What's So Amazing About Grace?* (Grand Rapids, Mich.: Zondervan, 1997), 13. [144]John Newton, "Amazing Grace," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [145]Fritz Ridenour, ed., *How to Be a Christian Without Being Religious* (Glendale, Calif.: G/L Publications, 1967), 27. [146]ಇಬ್ರಿಯ 13:15, 16 ರಲ್ಲಿ, ದೇವರನ್ನು ಸ್ತುತಿಸುವದು ಮತ್ತು ಬೇರೆಯವರಿಗೆ ಸಹಾಯ ಮಾಡುವದು ದೇವರಿಗೆ ನಾವು ಅರ್ಪಿಸುವ ಯಜ್ಞಗಳೆಂದು ಸೂಚಿಸಲ್ಪಟ್ಟಿವೆ, ಆದರೆ ಇವುಗಳು ರಕ್ತದ ಯಜ್ಞಗಳಲ್ಲ. ರೋಮಾ 12:1, 2 ರಲ್ಲಿ ಉಲ್ಲೇಖಿಸಲಾಗಿರುವ ಆತ್ಮೀಕ ಯಜ್ಞದ ವಿಷಯದಲ್ಲಿಯೂ ಅದು ಅಷ್ಟೇ ಸತ್ಯವಾದದ್ದು. [147]ಯೇಸು ದೇವರ ಸನ್ನಿಧಿಯೊಳಗೆ ಶಾರೀರಿಕ ರಕ್ತವನ್ನು ತೆಗೆದುಕೊಂಡು ಹೋಗಲಿಲ್ಲ. ಇದು ಸಾದೃಶ್ಯಕರ ಭಾಷೆಯಾಗಿದೆ. [148]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 222-23. [149]ಒಂದು ಶ್ರೇಷ್ಠ ಕಥೆಯು Spartaದ ಪ್ರಾಚೀನ ಅರಸನಾದ Lycurgus ನ ಬಗ್ಗೆ ಹೇಳುತ್ತದೆ, ಆತನ ಮಗನು ಕಣ್ಣುಗಳನ್ನು ಕೀಳುವ ಮೂಲಕ ದಂಡಿಸಲ್ಪಡುವದಕ್ಕೆ ಯೋಗ್ಯವಾದ ಒಂದು ಕಾನೂನನ್ನು ಮೀರಿದ್ದನು. ಆ ರಾಜಕುಮಾರನ ಒಂದು ಕಣ್ಣನ್ನು ಕಿತ್ತಲಾಗಿತ್ತು, ಆದರೆ

ಅವನಿಗೆ ಇನ್ನೊಂದು ಕಣ್ಣು ಉಳಿಯುವಂತಾಗಲು ಅರಸನು ತನ್ನ ಒಂದು ಕಣ್ಣನ್ನು ಕಿತ್ತುವದಕ್ಕೆ ಒಪ್ಪಿಸಿದ್ದನು. (James Burton Coffman, *Commentary on Romans* [Austin, Tex.: Firm Foundation Publishing House, 1973], 134.) [150]MacArthur, 117–18.

[151]Adapted from David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 211. [152]John David Stewart, *A Study of Major Religious Beliefs in America*, The Living Word (Austin, Tex.: R. B. Sweet Co., 1962), 32. [153]ಈ ಪ್ರಸಿದ್ಧ ಹೇಳಿಕೆಯು ಮಾರ್ಟಿನ್ ಲೂಥರನ ಜರ್ಮನ್ ಹೊಸ ಒಡಂಬಡಿಕೆಯ ಮುನ್ನುಡಿಯಲ್ಲಿ ಸಿಕ್ಕುತ್ತದೆ (1522). See E. Theodore Bachmann and Helmut T. Lehmann, eds., *Luther's Works*, vol. 35, *Word and Sacrament I* (Philadelphia: Fortress Press, 1960), 362, 395–97. [154]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati: Standard Publishing, n.d.), 323.